Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–22 | ಮೇ 27–ಜೂನ್ 2, 2024 | ಪುಟ 16 | ರೂ.10/–

Volume-18 | Issue-22 | May 27 - June 2, 2024 | Pages:16 | Price: 10/-



ಜಿಂದಾಲ್ ಉಕ್ಕು ಕಾರ್ಖಾನೆ:

ಸುರಕ್ಷಾ ಕ್ರಮಗಳ ಕೊರತೆಯಿಂದ ಕಾರ್ಮಿಕರ ಜೀವ ಬಲಿ









ಮೋದಿಯವರ 41 ಸಂದರ್ಶನಗಳು: ಆಲಿಸುವುದಷ್ಟೆ ಕಠಿಣ ಪ್ರಶ್ನೆಗಳಿಲ್ಲ

ಬೃಹತ್ ಕಲ್ಲಿದ್ದಲು ಆಮದು ಹಗರಣ

ಮಹಾರಾಷ್ಟ್ರ: ಬಿಜೆಪಿಯ 'ಡಬಲ್ ಆಪರೇಶನ್' ಅದಕ್ಕೆ ಮುಳುವಾಗುತ್ತಾ?

ಉನ್ನತ ಶಿಕ್ಷಣದಲ್ಲಿ ಸ್ವಾತಂತ್ರ್ಯ ಹರಣ

ದೇಶದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರೆಸ್ಸೆಸ್)ನ ವಿಚಾರಗಳ ಪ್ರಭಾವ ಮತ್ತು ಅದರ ನಿಯಂತ್ರಣದಲ್ಲಿರುವ ಭಾರತೀಯ ಜನತಾ ಪಕ್ಷದ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರಕಾರಗಳ ಆಡಳಿತ ಯಂತ್ರಗಳ ಪ್ರಾಬಲ್ಯದಲ್ಲಿ ಕಳೆದ ಒಂದು ದಶಕದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಆಗಿರುವ ಅನಾಹುತಗಳು ಅಗಾಧ. ಉದಾಹರಣೆಗಳ ರೂಪದಲ್ಲಿ ಅವುಗಳಲ್ಲಿ ಕೆಲವನ್ನು ಅವಲೋಕಿಸುವ ಒಂದು ಪ್ರಯತ್ನವಿದು.



ಉನ್ನತ ಶಿಕ್ಷಣದಲ್ಲಿ 'ಸ್ವಾತಂತ್ರ್ಯ ಹರಣ' ಶಿಕ್ಷಣದ ಕೇಸರೀಕರಣ ಮತ್ತು 'ಕೆಸರೀಕರಣ'

ಆರ್. ರಾಮಕೃಷ್ಣ


ಉನ್ನತ ಶಿಕ್ಷಣದಲ್ಲಿ, ಅದರಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಮ್ಮ ಅನಿಸಿಕೆ ಅಭಿಪ್ರಾಯ, ಚಿಂತನೆಗಳನ್ನು ಯಾವುದೇ ಅಂಜಿಕೆ ಇಲ್ಲದೆ ನಿರ್ಭೀತವಾಗಿ ಹಂಚಿಕೊಳ್ಳಲು ಸಾಧ್ಯವಾಗುವಂತಹ ಹಾಗೂ ಮುಕ್ತ ಚಿಂತನೆಗೆ ಪೂರಕವಾಗುವಂತಹ ವಾತಾವರಣ ಇರುವುದು ಬಹಳ ಮುಖ್ಯ. ವಿಶ್ವವಿದ್ಯಾಲಯಗಳಿಗೆ, ಅಲ್ಲಿ ಕಲಿಸುವ ಬೋಧಕ ವರ್ಗಕ್ಕೆ ಆಳುವ ಪಕ್ಷಗಳ, ಅಥವಾ ಯಾವುದೇ ಪಕ್ಷಗಳ, ರಾಜಕಾರಣಿಗಳ ಹಸ್ತಕ್ಷೇಪವಿಲ್ಲದ ಶೈಕ್ಷಣಿಕ ಸ್ವಾಯುತ್ತತೆಯೂ ಅಮೂಲ್ಯವಾದದ್ದು. ಇಂತಹ ವಾತಾವರಣದಲ್ಲಿ ಮಾತ್ರ ವಿಶ್ವವಿದ್ಯಾಲಯಗಳು ಉಪಯುಕ್ತವಾದ ಹೊಸ ಹೊಸ ಸಂಶೋಧನೆ–ಚಿಂತನ–ಮಂಥನಗಳನ್ನು ಮಾಡಬಲ್ಲವು, ಸಮಾಜದ ಪ್ರಗತಿಗೆ ಆಧಾರವಾಗುವ ಹೊಸ ಜ್ಞಾನವನ್ನು ಸೃಷ್ಟಿಸಿ ಸಮಾಜಕ್ಕೆ ಕೊಡುಗೆಯಾಗಿ ಕೊಡಮಾಡಬಲ್ಲವು. ಆ ಮೂಲಕ ದೇಶದ ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಗತಿಗೆ ಇಂಬು ನೀಡಿ ಬೆಂಬಲವಾಗಿ ಕೆಲಸ ಮಾಡಬಲ್ಲವು.

ಕಳೆದ ಒಂದು ದಶಕದಲ್ಲಿ ಭಾರತದ ಉನ್ನತ ಶಿಕ್ಷಣದಲ್ಲಿ ನಿರ್ದಿಷ್ಟವಾಗಿ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಸ್ವಾಯತ್ತತೆ, ಶೈಕ್ಷಣಿಕ ಸ್ವಾತಂತ್ರ್ಯಗಳಿಗೆ ಗಂಭೀರವಾದ ಹಾನಿಯಾಗಿದೆ ಎಂದಿದ್ದಾರೆ ಅಮೆರಿಕಾದ ಖ್ಯಾತ ಪ್ರಾಧ್ಯಾಪಕ ಫಿಲಿಪ್ ಆಲ್ಟ್ ಬಾಕ್. ('ದಿ ಹಿಂದೂ' ಲೇಖನ) ಸಾಮಾನ್ಯವಾಗಿ ಸರಕಾರಿ ವಿಶ್ವವಿದ್ಯಾಲಯಗಳಿಗೆ ಆಯಾ ರಾಜ್ಯಗಳ ರಾಜ್ಯಪಾಲರುಗಳು ಕುಲಪತಿಗಳಾಗಿರುತ್ತಾರೆ. ರಾಜ್ಯಪಾಲರುಗಳು ಒಕ್ಕೂಟ(ಕೇಂದ್ರ) ಸರಕಾರದ ಪ್ರತಿನಿಧಿಗಳು. ಅವರನ್ನು ನೇಮಿಸುವುದು ಒಕ್ಕೂಟ ಸರಕಾರ. ವಿ.ವಿ.ಗಳಿಗೆ ಉಪ ಕುಲಪತಿಗಳನ್ನು ನೇಮಿಸುವುದು ರಾಜ್ಯಪಾಲರು. ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಉಪ ಕುಲಪತಿಗಳ ನೇಮಕಗಳ ವಿಷಯಗಳಲ್ಲಿ ಸಂಕುಚಿತ ರಾಜಕೀಯ ಹಸ್ತಕ್ಷೇಪಗಳಿಂದ ವಿಶ್ವವಿದ್ಯಾಲಯಗಳ ಪರಿಸ್ಥಿತಿ ಹದಗೆಟ್ಟಿದೆ ಎನ್ನುತ್ತಾರೆ ಫಿಲಿಪ್. (ಈ ವಿಷಯದಲ್ಲಿ ಇತ್ತೀಚಿನ ಒಂದು ತಾಜಾ ಸುದ್ದಿ ಎಂದರೆ ಕೇರಳದ ರಾಜ್ಯಪಾಲ ಮತ್ತು ಕೇರಳ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ಅರಿಫ್ ಮೊಹಮದ್ ಖಾನ್ ಅವರು ಕೇರಳದ ವಿಶ್ವವಿದ್ಯಾಲಯಗಳ ಸೆನೆಟ್‌ಗೆ ಮಾಡಿದ್ದ ನಾಮನಿರ್ದೇಶನಗಳನ್ನು ಕೇರಳದ ಹೈಕೋರ್ಟ್ ರದ್ದು ಪಡಿಸಿ ಆದೇಶ ಹೊರಡಿಸಿ, ಆರು ವಾರಗಳಲ್ಲಿ ಬೇರೆ ಸದಸ್ಯರನ್ನು ಮರು ನಾಮನಿರ್ದೇಶನ ಮಾಡುವಂತೆ ಸೂಚಿಸಿರುವುದು. ರಾಜ್ಯಪಾಲರು ಸೆನೆಟ್‌ಗಳಿಗೆ ನೇಮಿಸಿರುವ ವ್ಯಕ್ತಿಗಳಿಗೆ ಶೈಕ್ಷಣಿಕ ಅರ್ಹತೆ ಇಲ್ಲ. ಅವರು ಕೇವಲ ಸಂಘಪರಿವಾರದ ವಿದ್ಯಾರ್ಥಿ ಸಂಘಟನೆ ಎಬಿವಿಪಿ ಸದಸ್ಯರು ಎಂಬ ಏಕೈಕ ಅರ್ಹತೆಯ ಆಧಾರದಲ್ಲಿ ಅವರನ್ನು ಈ ಶೈಕ್ಷಣಿಕ ಅಂಗಗಳಿಗೆ ನೇಮಿಸಲಾಗಿದೆ ಎಂದು ಈ ವಿಷಯದಲ್ಲಿ ಆಕ್ಷೇಪಗಳು ವ್ಯಕ್ತವಾಗಿದ್ದವು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು.)

ಕಳೆದ ಹತ್ತು ವರ್ಷಗಳಿಂದ ಕೇಂದ್ರದಲ್ಲಿ ಮತ್ತು ಹಲವು ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಸರಕಾರಗಳು ಅಧಿಕಾರದಲ್ಲಿವೆ. ಸಮಾಜದಲ್ಲಿ ಒಟ್ಟು ಬಲಪಂಥೀಯ ಶಕ್ತಿಗಳ ಮೇಲುಗೈಯಿಂದಾಗಿ ಖಾಸಗಿ ವಿಶ್ವ ವಿದ್ಯಾಲಯಗಳು ಸೇರಿದಂತೆ ಒಟ್ಟು ಶೈಕ್ಷಣಿಕ ಪರಿಸ್ಥಿತಿ ಹದಗೆಟ್ಟಿರುವುದನ್ನು ಶೈಕ್ಷಣಿಕ ಕಾಳಜಿಯುಳ್ಳ ಯಾರಾದರೂ ಗುರುತಿಸಬಹುದು.

ಡಾ. ಸಮೀನ 'ವಿಚಾರಣೆ'

ಡಾ. ಸಮೀನ ದಳವಾಯ್ ಹರ್ಯಾಣ ರಾಜ್ಯದ ಸೋನಿಪಟ್‌ನಲ್ಲಿರುವ 'ಓ.ಪಿ. ಜಿಂದಾಲ್ ಗ್ಲೋಬಲ್ ವಿಶ್ವವಿದ್ಯಾಲಯ' ಎಂಬ ಖಾಸಗಿ ವಿ.ವಿ.ಯಲ್ಲಿ ಪ್ರಾಧ್ಯಾಪಕಿ. ಅವರ ಅಧ್ಯಯನದ ವಿಷಯ ಮತ್ತು ಅವರು ಬೋಧಿಸುವ ವಿಷಯವೇ ಲಿಂಗತ್ವ, ಲೈಂಗಿಕತೆ ಮತ್ತು ಕಾನೂನು. ಕಾನೂನು ವಿಶ್ವವಿದ್ಯಾಲಯದ ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ಇವರು ಕಲಿಸುವಾಗ ತಮ್ಮ ಬೋಧನೆಯ ಭಾಗವಾಗಿ ಈಗಿನ ಕಾಲದ 'ಡೇಟಿಂಗ್ ಆಪ್'ಗಳಲ್ಲಿ ಯುವಜನರು ತಮ್ಮ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸಹ ಹೇಗೆ ಲಿಂಗ, ಜಾತಿ, ವರ್ಗ, ಹಾಗೂ ಮೈಬಣ್ಣ ಆಧಾರಿತವಾದ ತಾರತಮ್ಯ ಮನೋಭಾವಗಳು ಕೆಲಸ ಮಾಡುತ್ತವೆ ಎಂದು ವಿಶ್ಲೇಷಿಸುವ ಸಲುವಾಗಿ 'ಡೇಟಿಂಗ್ ಆಪ್'ನಲ್ಲಿನ ನಿರ್ದಿಷ್ಟ ಉದಾಹರಣೆಗಳನ್ನು ತೋರಿಸಿ ವಿವರಿಸಿದ್ದಾರೆ. ವಿಶ್ವ ವಿದ್ಯಾಲಯದ ಆಂತರಿಕ ಕಲಿಕೆಯ ಈ ಪ್ರಕ್ರಿಯೆಯನ್ನು ಯಾರೋ ಕಿಡಿಗೇಡಿಗಳು ವಿಡಿಯೋ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ಸರಿ, ಇಷ್ಟೇ ಸಾಕು ಎಂದು ವಿಶ್ವವಿದ್ಯಾಲಯದ ಅನುಮತಿಯನ್ನೂ ಪಡೆಯದೆ ಹರ್ಯಾಣ ರಾಜ್ಯದ ಮಹಿಳಾ ಆಯೋಗದ ಅಧ್ಯಕ್ಷೆ ರೇಣು ಭಾಟಿಯಾ ಮತ್ತು ತಂಡ ವಿ.ವಿ.ಗೆ ಭೇಟಿ ಮಾಡಿ, ಸಮೀನ ಅವರ ವಿರುದ್ಧ ಮಹಿಳೆಯ ಘನತೆಗೆ ಧಕ್ಕೆ ತಂದದ್ದಕ್ಕಾಗಿ ಪ್ರಕರಣ ದಾಖಲಿಸಿ ವಿಚಾರಣೆಗೆ ಗುರಿಪಡಿಸಿದೆ. ಹರ್ಯಾಣ ರಾಜ್ಯದ ಮಹಿಳಾ ಕ್ರೀಡಾಪಟುಗಳು ತಮ್ಮ ಮೇಲೆ ಕೇಂದ್ರ ಸಚಿವ ಬ್ರಿಜ್ ಭೂಷಣ್ ಸಿಂಗ್ ಲೈಂಗಿಕ ದೌರ್ಜನ್ಯಗಳನ್ನು ನಡೆಸಿದ್ದಾರೆ ಎಂದು ದೂರು ನೀಡಿ, ನಡುಬೀದಿಯಲ್ಲಿ ಹೋರಾಟ ಮಾಡುತ್ತಿದ್ದರೂ ಏನೂ ಮಾಡದ ಈ ಮಹಿಳಾ ಆಯೋಗ ಈ ವಿಷಯದಲ್ಲಿ ಯಾವ ವಿದ್ಯಾರ್ಥಿಗಳೂ ದೂರು ನೀಡಿಲ್ಲದಿದ್ದರೂ, ಕಲಿಕೆಯ ಈ ವಿಧಾನಕ್ಕೆ ಯಾವ ವಿದ್ಯಾರ್ಥಿಗಳ ಆಕ್ಷೇಪಣೆ, ಅಸಮಾಧಾನ ಇಲ್ಲದಿದ್ದರೂ ದ್ವೇಷದ ಕ್ರಮಕ್ಕೆ ಮುಂದಾಗಿದೆ.



ವಿದ್ಯಾರ್ಥಿಗಳಿಗೆ 'ಡೇಟಿಂಗ್ ಆಪ್' ನೋಡಲು ಹೇಳಿರುವುದು ಮಾತ್ರವೇ ಇಲ್ಲಿ ವಿಷಯವಲ್ಲ. ಡಾ. ಸಮೀನ ಒಬ್ಬ ಮುಸ್ಲಿಂ ಮಹಿಳೆ. ಅವರು ಬರಹಗಾರ್ತಿ ಕೂಡ. ಸಮಾಜದಲ್ಲಿನ ಅವಕಾಶ ವಂಚಿತ, ಶೋಷಿತ ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಪರವಾಗಿ ಅವರು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಲೇಖನಗಳನ್ನು ಬರೆಯುತ್ತಾರೆ. ಡಾ. ಸಮೀನ ಅವರ ಪ್ರಗತಿಪರ ವಿಚಾರಗಳನ್ನು ಸಂಘ ಪರಿವಾರದ ಮನಸ್ಸಿನ ಮಹಿಳಾ ಆಯೋಗದ ಅಧ್ಯಕ್ಷರಿಗೆ ಮತ್ತು ಸರಕಾರಕ್ಕೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎನ್ನುವುದೇ ಇಲ್ಲಿ ನಿಜವಾದ ಕಾರಣ. ಇದು ಒಂದು ಉದಾಹರಣೆಯಷ್ಟೆ. ಇಂತಹ ಹಲವಾರು ಉದಾಹರಣೆಗಳಿವೆ.

ಇದೇ ಹರ್ಯಾಣ ರಾಜ್ಯದ ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ರಾಜಕೀಯ ವಿಶ್ಲೇಷಕ ಡಾ. ಪ್ರತಾಪ್ ಬಾನು ಮೆಹ್ತಾ 2021 ರಲ್ಲಿ ತಮ್ಮ ಹುದ್ದೆಗೆ ರಾಜಿನಾಮೆ ನೀಡಿದರು. ವಿಶ್ವವಿದ್ಯಾಲಯದಲ್ಲಿ ತಮ್ಮ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದದ್ದೇ ರಾಜಿನಾಮೆಗೆ ಕಾರಣ ಎಂದು ಅವರು ತಮ್ಮ ರಾಜಿನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಿ.ಕೆ.ಯು.ನ ಡಾ. ಮೀನಾ ಟಿ. ಪಿಳ್ಳೈ

ಡಾ. ಮೀನಾ ಟಿ. ಪಿಳ್ಳೈ ಎಂಬ ಪ್ರಾಧ್ಯಾಪಕಿ 2019 ರಲ್ಲಿ 'ಸೆಂಟ್ರಲ್ ಯೂನಿವರ್ಸಿಟಿ ಆಫ್ ಕೇರಳ' (ಸಿ.ಕೆ.ಯು.)ದ ಇಂಗ್ಲೀಷ್ ಮತ್ತು ತೌಲನಿಕ ಸಾಹಿತ್ಯ ಅಧ್ಯಯನ ಮಂಡಳಿಯ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯ ವಿಷಯಗಳು ಏನಿರಬೇಕು, ಏನಿರಬಾರದು ಎಂದು ನಿಷೇಧ ಮತ್ತು ನಿರ್ಬಂಧ ಹೇರಿ ನೀಡಿದ ಸೂಚನೆಗಳನ್ನು ವಿರೋಧಿಸಿ, ಅದು ವಿಶ್ವ ವಿದ್ಯಾಲಯದ ಶೈಕ್ಷಣಿಕ ಸ್ವಾಯತ್ತತೆಗೆ ಧಕ್ಕೆ ತರುವ ಧೋರಣೆ ಎಂಬ ಕಾರಣಕ್ಕೆ ಅವರು ರಾಜಿನಾಮೆ ನೀಡಿದರು.

ಒರಿಸ್ಸಾ ರಾಜ್ಯದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್(ಐ.ಐ.ಎಂ.ಎಸ್.) ಸಹಾಯಕ ಪ್ರಾಧ್ಯಾಪಕ ಡಾ. ಅಮಿತ್ ಸೇನ್ ಗುಪ್ತಾ ಅವರು 2016 ರಲ್ಲಿ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕಾಗಿ ಬಂತು. ರೋಹಿತ್ ವೇಮುಲಾ ಸಾವಿಗೆ ಕಾರಣರಾದವರ ವಿರುದ್ಧ ವಿದ್ಯಾರ್ಥಿಗಳು ನಡೆಸುತ್ತಿದ್ದ ಪ್ರತಿಭಟನೆಗೆ ಬೆಂಬಲ ನೀಡಿದ್ದೇ ವಿಶ್ವವಿದ್ಯಾಲಯದಲ್ಲಿ ಅಮಿತ್ ಸೇನ್ ಅವರಿಗೆ ಉಸಿರುಗಟ್ಟುವ ವಾತಾವರಣ ಸೃಷ್ಟಿಯಾಗಲು ಕಾರಣವಾಗಿತ್ತು. ಪಟ್ಟಿ ಮಾಡಿದರೆ ಇಂತಹ ಇನ್ನು ಹತ್ತು ಹಲವು ಪ್ರಕರಣಗಳಿವೆ.

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಉನ್ನತ ವಿಶ್ವವಿದ್ಯಾಲಯಗಳಲ್ಲಿ ಆರೆಸ್ಸೆಸ್ ಪರಿವಾರಕ್ಕೆ ಸೇರಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ದಾಂಧಲೆಗಳು ಸಾಕಷ್ಟು ಹೆಚ್ಚಾಗಿವೆ. ಪ್ರಾಧ್ಯಾಪಕರು ಬೋಧನೆಯಲ್ಲಿ ತಮ್ಮ ಚಿಂತನೆ, ವಿಚಾರಗಳನ್ನು ಮುಕ್ತವಾಗಿ ಹೇಳಲಾಗದೇ ಹಿಂಜರಿಯುವಂತಹ ವಾತಾವರಣವನ್ನು ಸೃಷ್ಟಿಸಲಾಗಿದೆ. ಪ್ರಾಧ್ಯಾಪಕರ ಬೋಧನೆಯ ಅಂಶಗಳನ್ನು ತಪ್ಪು ತಪ್ಪಾಗಿ ಬಿಂಬಿಸಿ ಅವರ ವಿರುದ್ಧ ವಿದ್ಯಾರ್ಥಿಗಳು ದೂರು ಕೊಡುವಂತೆ ಪ್ರಚೋದಿಸುವ ಶಕ್ತಿಗಳೂ ವಿಶ್ವವಿದ್ಯಾಲಯಗಳಲ್ಲಿ ಬಲಗೊಂಡಿವೆ, ಸಕ್ರಿಯಗೊಂಡಿವೆ. ಹಲವು ವಿಶ್ವಾಸಾರ್ಹ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಈ ಮುಂದಿನ ಪ್ರಕರಣಗಳನ್ನು ನೋಡಿದರೆ ಪರಿಸ್ಥಿತಿಯ ತೀವ್ರತೆ ಏನೆಂದು ತಿಳಿಯುತ್ತದೆ.

ಉತ್ತರ ಪ್ರದೇಶ: ಉತ್ತರ ಪತ್ರಿಕೆಯಲ್ಲಿ 'ಜೈ ಶ್ರೀರಾಮ್' ಎಂದು ಬರೆದರೆ ಶೇ.50 ಅಂಕ!!

ಶಿಕ್ಷಣ ಕ್ಷೇತ್ರವನ್ನು ಬಹಳ ಪವಿತ್ರ ಕ್ಷೇತ್ರ ಎಂದು ಭಾವಿಸಲಾಗುತ್ತದೆ. ಒಂದೊಮ್ಮೆ ಬೇರೆ ಬೇರೆ ರಂಗಗಳಲ್ಲಿ ಭ್ರಷ್ಟಾಚಾರ, ಅಕ್ರಮಗಳು ನಡೆದರೆ ಹೇಗೋ ಸಹಿಸಿಕೊಳ್ಳಬಹುದು. ಆದರೆ ಯಾವುದೇ ಕಾರಣಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಅಕ್ರಮ, ಭ್ರಷ್ಟಾಚಾರಗಳು ನಡೆಯಬಾರದು ಎಂದು ಬಹಳಷ್ಟು ಜನರು ನಿರೀಕ್ಷಿಸುತ್ತಾರೆ.

ಆದರೆ ಇಲ್ಲೇನಾಗಿದೆ ನೋಡಿ. ಅದೂ ಸಹ ಮರ್ಯಾದಾ ಪುರುಷೋತ್ತಮ ಎಂದು ಹೇಳಲಾಗುವ ಶ್ರೀರಾಮನ ಹೆಸರಿನಲ್ಲಿ. ಘಟನೆ ನಡೆದಿರುವುದು ಉತ್ತರ ಪ್ರದೇಶದ ಜೌನ್‌ಪುರದಲ್ಲಿರುವ ವೀರ್ ಬಹದ್ದೂರ್ ಸಿಂಗ್ ಪೂರ್ವಾಂಚಲ ವಿಶ್ವವಿದ್ಯಾಲಯದಲ್ಲಿ. ಈ ವಿ.ವಿ. ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಉತ್ತರ ಪತ್ರಿಕೆಯಲ್ಲಿ ಯಾವ ಉತ್ತರವನ್ನೂ ಬರೆದಿಲ್ಲ.

ಪುಟ 4 ಕ್ಕೆ

90 ವರ್ಷ ದಾಟಿ ಮುನ್ನಡೆಯುತ್ತಿರುವ ಹಿರಿಯ ಕಮ್ಯೂನಿಸ್ಟ್ ನೇತಾರ ಕೆ.ಆರ್.ಶ್ರೀಯಾನ್



ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡರಾದ ಕಾಮ್ರೆಡ್ ಕೆ.ಆರ್. ಶ್ರೀಯಾನ್ ಅವರಿಗೆ 90 ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಈ ಸಂಗಾತಿಯ ಜೀವನ ಮತ್ತು ಕಮ್ಯೂನಿಸ್ಟ್ ಚಳುವಳಿಗೆ ನೀಡಿದ ಅಮೂಲ್ಯ ಕೊಡುಗೆಗಳ ಕುರಿತು ಒಂದು ಲೇಖನ. ನಿಮಗಾಗಿ.

ವಾಸುದೇವ ಉಚ್ಚಿಲ

ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿ ಮತ್ತು ಪಕ್ಷವನ್ನು ಕಟ್ಟಿದ ಸಂಗಾತಿಗಳಲ್ಲಿ ಕರಾವಳಿ ದಕ್ಷಿಣ ಕನ್ನಡದಲ್ಲಿ ಸಂದು ಹೋಗಿರುವ ಅನೇಕ ದೈತ್ಯ ಸಾಮರ್ಥ್ಯದ ಕಮ್ಯೂನಿಸ್ಟರ ಪಡೆಯೇ ಇದೆ. ಸಿಂಪ್ಸನ್ ಸೋನ್ಸ್, ಎ.ಕೃಷ್ಣ ಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಶಾಂತಾರಾಮ ಪೈ, ಎಂ.ಎಚ್.ಕೃಷ್ಣಪ್ಪ, ಪಿ.ರಾಮಚಂದ್ರ ರಾವ್, ಬಿ.ಮಾಧವ, ಅಬ್ರಹಾಂ ಕರ್ಕಡ, ಡೇವಿಡ್ ಕರ್ಕಡ ಈ ಮೊದಲಾದವರು ಇಂದು ನಮ್ಮೊಡನಿಲ್ಲ. ಅವರೆಲ್ಲರೊಂದಿಗೆ ಒಡನಾಟದಲ್ಲಿದ್ದು, 70ಕ್ಕೂ ಹೆಚ್ಚು ವರ್ಷಗಳಿಂದ ಕಮ್ಯೂನಿಸ್ಟ್ ಪಕ್ಷದ ಸದಸ್ಯರೂ, ನೇತಾರರೂ ಆಗಿ ಇಂದಿಗೂ ನಮ್ಮ ನಡುವೆ ನಮ್ಮ ಸೌಭಾಗ್ಯದಿಂದ ಕೆ.ಆರ್.ಶ್ರೀಯಾನ್ ಇದ್ದಾರೆ.

ಇದೇ 25–5–2024ರಂದು 90 ವರ್ಷಗಳನ್ನು ಪೂರ್ಣಗೊಳಿಸಿ, 91ಕ್ಕೆ ಪ್ರವೇಶಿಸುತ್ತಿರುವ ಕೆ.ಆರ್.ಶ್ರೀಯಾನ್‌ರಿಗೆ ಇನ್ನಷ್ಟು ಅಯುರಾರೋಗ್ಯ ಭಾಗ್ಯವನ್ನು ಹಾರೈಸೋಣ.

1953 ರಿಂದಲೇ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ದೇಶ, ರಾಜ್ಯ ಮತ್ತು ಜಿಲ್ಲೆಯಲ್ಲಿ ಪಕ್ಷ ಸಂಘಟನೆಯ ಏಳು ಬೀಳುಗಳನ್ನು ಒಟ್ಟಿಗೇ ಅನುಭವಿಸಿದವರಾಗಿ, ಕರ್ನಾಟಕ ರಾಜ್ಯದ ಅದರಲ್ಲೂ ದ.ಕ. ಮತ್ತು ಉಡುಪಿ ಜಿಲ್ಲೆಗಳ ಕಮ್ಯೂನಿಸ್ಟ್ ಚಳುವಳಿಗೆ ಶ್ರೀಯಾನ್ ಅವರ ಕೊಡುಗೆ ದೊಡ್ಡದು. ಹಾಗಾಗಿ ಈ ಮೊದಲು ಉಲ್ಲೇಖಿಸಿದ ಕರಾವಳಿಯ ಕಮ್ಯೂನಿಸ್ಟ್ ದೈತ್ಯರ ಜೊತೆ ಇವರೂ ದಾಖಲಾಗುತ್ತಾರೆ. ಮಾರ್ಕ್ಸ್‌ವಾದಿ ಸಿದ್ಧಾಂತದ ಆಳವಾದ ತಿಳುವಳಿಕೆ, ಅದನ್ನು ಪಕ್ಷ ಸಂಘಟನೆಯಲ್ಲಿ ಬಳಸಿಕೊಂಡು ಸಂಘಟನೆಯನ್ನು ವಿಸ್ತರಿಸಿದ ಬಗೆ, ಪಕ್ಷದ ಬಿಕ್ಕಟ್ಟುಗಳ ಸಂದರ್ಭದಲ್ಲಿ ಸಂಘಟನೆಯನ್ನು ನಿಭಾಯಿಸಿಕೊಂಡು ಹೋಗುವ ಚಾಕಚಕ್ಯತೆ, ಕಿರಿಯ ಸಂಗಾತಿಗಳು ಪಥಭ್ರಷ್ಟರಾಗದಂತೆ ನೀಡುವ ಎಚ್ಚರಿಕೆ, ಪಕ್ಷದ ಒಗ್ಗಟ್ಟನ್ನು ಕಾಪಾಡುವುದಕ್ಕಾಗಿ ತೆಗೆದುಕೊಳ್ಳುತ್ತಿದ್ದ ದಿಟ್ಟ ನಿರ್ಣಯಗಳು ಇವುಗಳಿಂದಾಗಿ ಅವರು ಪಕ್ಷದ ಪ್ರಮುಖ ನಾಯಕರೆಂದು ಗುರುತಿಸಲ್ಪಟ್ಟಿದ್ದಾರೆ.

ವಯಸ್ಸಿನ ಕಾರಣದಿಂದಾಗಿ 2021ರ ಕೊನೆಯಿಂದ ಪಕ್ಷದ ಜಿಲ್ಲಾ ಸಮಿತಿಯಿಂದಲೂ, ಪಕ್ಷದ ರಾಜ್ಯ ಸಮಿತಿಯಿಂದಲೂ ಬಿಡುಗಡೆ ಹೊಂದಿರುವ ಶ್ರೀಯಾನ್ ಅವರು ಇವತ್ತಿಗೂ ದ.ಕ. ಜಿಲ್ಲಾ ಹಂಚು ಕಾರ್ಮಿಕರ ಸಂಘದ ಹಾಗೂ ದ.ಕ. ಜಿಲ್ಲಾ ಕ್ಯಾಶ್ಯೂ(ಗೋಡಂಬಿ) ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರಾಗಿ ಕ್ರಿಯಾಶೀಲರಾಗಿದ್ದಾರೆ.

1978 ರಿಂದ 2008ರ ವರೆಗೆ 30 ವರ್ಷಗಳ ಕಾಲ ಶ್ರೀಯಾನರು ಸಿಪಿಐ(ಎಂ)ನ ದ.ಕ. ಜಿಲ್ಲಾ ಕಾರ್ಯದರ್ಶಿಯಾಗಿದ್ದರು. 1978 ರಿಂದ 2015ರ ವರೆಗೆ ಪಕ್ಷದ ರಾಜ್ಯ ಸಮಿತಿ ಸದಸ್ಯ (1982 ರಿಂದ 2015ರ ವರೆಗೆ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ) ಮತ್ತು 2015 ರಿಂದ 2022ರ ವರೆಗೆ ಪಕ್ಷದ ರಾಜ್ಯ ಕಂಟ್ರೋಲ್ ಕಮಿಷನ್ನಿನ ಅಧ್ಯಕ್ಷರೂ ಆಗಿದ್ದರು. ಜಿಲ್ಲೆಯಲ್ಲಿ ಪ್ರಾಂತ ರೈತ ಸಂಘದ ಕಾರ್ಯದರ್ಶಿಗಳೂ ಅಧ್ಯಕ್ಷರೂ ಆಗಿದ್ದರು. ಸಿಐಟಿಯು ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಹಂಚು, ಕ್ಯಾಶ್ಯೂ, ಬೀಡಿ, ಪ್ರೆಸ್, ಮುನ್ಸಿಪಲ್ ಹೀಗೆ ಹಲವು ಕಾರ್ಮಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಾ ಅವುಗಳಲ್ಲಿ ಮುಖಂಡರೂ ಆಗಿದ್ದರು.

ಕೌಟುಂಬಿಕ ಹಿನ್ನೆಲೆ:

ಮಂಗಳೂರು ಹೊರವಲಯದ (ಈಗ ಒಳವಲಯವೇ ಆಗಿದೆ) ಕೊಂಚಾಡಿಯ ಬಡ ರೈತ ಕುಟುಂಬದಲ್ಲಿ 1934 ಮೇ 25 ರಂದು ಜನಿಸಿದ ಕೊಂಚಾಡಿ ರಂಗಪ್ಪ ಶ್ರೀಯಾನ್ ಅವರನ್ನು ಇವತ್ತು ಎಲ್ಲರೂ ಗುರುತಿಸುವುದು ಕೆ.ಆರ್.ಶ್ರೀಯಾನ್ ಎಂದೇ. ಮಂಗಳೂರು ನಗರದಲ್ಲಿ ಆ ವೇಳೆಗಾಗಲೇ ಕೈಗಾರಿಕೀಕರಣ ಆರಂಭಗೊಂಡಿದ್ದು ನೇಯ್ಗೆ, ಹಂಚು, ಗೋಡಂಬಿ, ಬೀಡಿ ಇತ್ಯಾದಿ ಉದ್ಯಮಗಳಲ್ಲಿ ದುಡಿಯಲು ನಗರದಿಂದ 10–15 ಕಿ.ಮೀ. ಫಾಸಲೆಯಲ್ಲಿರುವ ಬಡಕುಟುಂಬದ ರೈತ ಮಕ್ಕಳು ಬರುತ್ತಿದ್ದರು. ಹೀಗಾಗಿ ನಗರದ ಆಸುಪಾಸಿನ ರೈತರ ಗಂಡು ಮಕ್ಕಳು ನೇಯ್ಗೆ, ಬೀಡಿ, ಹಂಚು ಕಾರ್ಖಾನೆಗಳಿಗೂ, ಹೆಣ್ಣು ಮಕ್ಕಳು ಗೋಡಂಬಿ ಕಾರ್ಖಾನೆಗಳಿಗೂ ಕಾರ್ಮಿಕರಾಗಿ ದುಡಿಯಲು ಹೋಗುತ್ತಿದ್ದರು. ಅವರಿಗೆ ಕೈಯಲ್ಲಿ ಒಂದಿಷ್ಟು ಹೆಚ್ಚುವರಿ ಹಣಕಾಸು ಲಭ್ಯವಾಗುತ್ತಿತ್ತೇ ವಿನಃ ಕಾರ್ಖಾನೆಗಳಲ್ಲಿ ಮಾಲಕರಿಂದಲೂ ಶೋಷಣೆ, ಪೀಡನೆಗೆ ಒಳಗಾಗುತ್ತಿದ್ದರು. ಈ ಹಿನ್ನೆಲೆಯಲ್ಲಿ ಮಂಗಳೂರು ನಗರದಲ್ಲಿ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಒಗ್ಗಟ್ಟಾಗಿ ಯೂನಿಯನ್‌ಗಳನ್ನು ಸ್ಥಾಪಿಸಿ, ಕಾರ್ಮಿಕರ ಹಕ್ಕುಗಳಿಗಾಗಿ ಬೇಡಿಕೆಗಳನ್ನಿಟ್ಟು ಮುಷ್ಕರಗಳನ್ನು ನಡೆಸುತ್ತಿದ್ದರು. ಮೊದಲು ಕೇರಳದಿಂದ ಬಂದ ಕಮ್ಯೂನಿಸ್ಟ್ ನಾಯಕರು ಈ ಯೂನಿಯನ್‌ಗಳಿಗೆ ಮಾರ್ಗದರ್ಶನ ನೀಡಿದ್ದರು. ಸಿಂಪ್ಸನ್ ಸೋನ್ಸ್, ಎ.ಕೃಷ್ಣ ಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಶಾಂತಾರಾಮ ಪೈ ಮತ್ತಿತರರು ಕಾರ್ಮಿಕ ಚಳುವಳಿಗೆ ಆರಂಭದಲ್ಲಿ ನೇತೃತ್ವ ನೀಡಿದ ಜಿಲ್ಲೆಯ ಮೊದಲ ಸಾಲಿನ ಕಮ್ಯೂನಿಸ್ಟ್ ನಾಯಕರು.

ದೇಶಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. ವಸಾಹತುಶಾಹಿಯ ಪೊಲೀಸ್ ದಬ್ಬಾಳಿಕೆ, ಮಾಲಿಕರ ಗೂಂಡಾಪಡೆಗಳನ್ನು ಎದುರಿಸಿ ಅನೇಕ ಮುಷ್ಕರಗಳನ್ನು ಕಮ್ಯೂನಿಸ್ಟರು ಸಂಘಟಿಸಿದ್ದರು. ನಾಯಕರನ್ನೊಳಗೊಂಡು ಕಾರ್ಮಿಕರೂ ಪೊಲೀಸರಿಂದ ದಮನ ಹಾಗೂ ಜೈಲುವಾಸ ಅನುಭವಿಸಿ, ಕಾರ್ಮಿಕರ ಸೌಲಭ್ಯಗಳನ್ನು ಸ್ವಾತಂತ್ರ್ಯ ಪೂರ್ವದಲ್ಲೇ ತೆಗೆಸಿಕೊಟ್ಟ ದೊಡ್ಡ ಚರಿತ್ರೆಯೇ ಇದೆ.

ಶ್ರೀಯಾನ್‌ರ ಮೂವರು ಅಕ್ಕಂದಿರು ಗೋಡಂಬಿ ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದರು. ಅವರ ಮೂವರು ಅಣ್ಣಂದಿರು ಹಂಚು ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದರು. ಶ್ರೀಯಾನ್ ಅವರು ಸಮೀಪದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನೂ, ಮಾಧ್ಯಮಿಕ ಶಿಕ್ಷಣವನ್ನು ಪದುವಾ ಶಾಲೆಯಲ್ಲೂ, ಹೈಸ್ಕೂಲು ಶಿಕ್ಷಣವನ್ನು ಮಂಗಳೂರು ನಗರ ಮಧ್ಯದ ಗಣಪತಿ ಹೈಸ್ಕೂಲಿನಲ್ಲಿ ಓದಿ 1952 ರಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಗೊಂಡರು.

ಕಾರ್ಮಿಕ ಚಳುವಳಿ ಮತ್ತು ಕಮ್ಯೂನಿಸ್ಟ್ ಪಕ್ಷದ ಒಡನಾಟ:

ರೈತ ಕುಟುಂಬದ ಮಕ್ಕಳು ಕಾರ್ಮಿಕರು. ಗೋಡಂಬಿ ಕಾರ್ಖಾನೆಯಲ್ಲೂ ಹಂಚಿನ ಕಾರ್ಖಾನೆಗಳಲ್ಲೂ ಜಾಗೃತ ಕಾರ್ಮಿಕರ ಚಳುವಳಿಗಳು. 1936ರಲ್ಲೇ ಮಂಗಳೂರಿನಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆಯಾದಂದಿನಿಂದ ಕಾರ್ಮಿಕರ ಮಧ್ಯೆ ಪಕ್ಷದ ಪ್ರಭಾವ. ಇದರಿಂದ ಬಾಲ್ಯದಿಂದಲೇ ಶ್ರೀಯಾನರಿಗೆ ಕಮ್ಯೂನಿಸ್ಟ್ ಚಳುವಳಿಯ ಒಡನಾಟ. ಸ್ವಾತಂತ್ರ್ಯ ಬಂದ ಹೊಸದರಲ್ಲಿ 1948 ರಿಂದ ಮೂರು ವರ್ಷ ಕಮ್ಯೂನಿಸ್ಟ್ ಪಕ್ಷ ನಿಷೇಧಿತವಾಗಿತ್ತು. ಮುಖಂಡರನ್ನು ಬಂಧಿಸಲು ಪೊಲೀಸರು ಹೊಂಚು ಹಾಕುತ್ತಿದ್ದರು. ಅಂಥ ಸಂದರ್ಭದಲ್ಲಿ ಬಿ.ವಿ.ಕಕ್ಕಿಲ್ಲಾಯರು ಮತ್ತಿಬ್ಬರು ಸಂಗಾತಿಗಳು ದಿನಗಟ್ಟಲೆ ಶ್ರೀಯಾನರ ಮನೆಯಲ್ಲಿ ಅಡಗಿದ್ದರು. ಆಗ ಬಾಲಕ ಶ್ರೀಯಾನ್ 7ನೇ ತರಗತಿಯಲ್ಲಿದ್ದರು. ಪೊಲೀಸರು ಬಂದು ಇವರ ಮನೆಗೆ ದಾಳಿ ಮಾಡಿ ಹುಡುಕಾಟ ನಡೆಸುವ ವೇಳೆಗೆ, ಎರಡು ದಿನ ಮೊದಲೇ ಸಂಗಾತಿಗಳು ಮನೆ ಬದಲಿಸಿ ಬೇರೆ ಅಡಗುದಾಣ ಸೇರಿದ್ದರು. ಬಾಲಕ ಶ್ರೀಯಾನರನ್ನು ಪೊಲೀಸರು ವಿಚಾರಿಸಿ, ಬಂದ ದಾರಿಗೆ ಸುಂಕವಿಲ್ಲವೆಂದು ವಾಪಾಸಾಗಿದ್ದರು. ಹೈಸ್ಕೂಲ್ ಓದುತ್ತಿರುವ ವೇಳೆ, ಶಾಲಾ ಅವಧಿಯ ಬಳಿಕ ತಮ್ಮ ಕಾರ್ಮಿಕ ಬಂಧುಗಳು ಮುಷ್ಕರ ನಡೆಸುತ್ತಿದ್ದಲ್ಲಿಗೆ ಶ್ರೀಯಾನ್ ಭೇಟಿ ನೀಡುತ್ತಿದ್ದರು. ಇದೆಲ್ಲದರಿಂದ ಹೈಸ್ಕೂಲ್ ಮುಗಿಸುವ ವೇಳೆಗೆ ಕಮ್ಯೂನಿಸ್ಟ್ ಪಕ್ಷ ಹಾಗೂ ಹೋರಾಟಗಳತ್ತ ಶ್ರೀಯಾನ್ ಒಲವು ಬೆಳೆಸಿಕೊಂಡಿದ್ದರು.

ಕಾರ್ಮಿಕ ಯೂನಿಯನ್‌ಗಳ ಕಚೇರಿಗೆ ಭೇಟಿ ನೀಡುತ್ತಿದ್ದ ವೇಳೆ ನೀಳ ದೇಹದ ಚುರುಕಾದ ಯುವಕನನ್ನು ಕಮ್ಯೂನಿಸ್ಟ್ ಮುಖಂಡರು ಗುರುತಿಸಿದರು. ಕಾರ್ಮಿಕ ರೈತ ಕುಟುಂಬದಿಂದಲೇ ಬಂದ ವಿದ್ಯಾವಂತ ಯುವಕರನ್ನು ಸೇರಿಸಿಕೊಳ್ಳಲು ಕಮ್ಯೂನಿಸ್ಟ್ ಪಕ್ಷ ಮುಂದಾಗಿತ್ತು. ಇನ್ನೂ ಮಾಸ್ತ್ರಾಗಿಯೇ ಇದ್ದ ಪಿ.ರಾಮಚಂದ್ರ ರಾಯರು 1953ರಲ್ಲಿ ಶ್ರೀಯಾನ್‌ರನ್ನು ಪಕ್ಷದ ಸದಸ್ಯರಾಗಲು ಆಹ್ವಾನಿಸಿದರು. ಅಂದಿನಿಂದ ಇಂದಿನವರೆಗೂ ಶ್ರೀಯಾನರು ಪಕ್ಷದ ಸದಸ್ಯರಾಗಿದ್ದಾರೆ.

ದ.ಕ. ಜಿಲ್ಲೆಯಲ್ಲಿ ರೈತ ಚಳುವಳಿ:

ರಾಯಲ್ ಇಂಡಿಯನ್ ನೇವಿ(RIN)ಯಲ್ಲಿ 1946 ರಲ್ಲಿ ಬ್ರಿಟಿಷರ ವಿರುದ್ಧ ಎದ್ದ ಪ್ರತಿಭಟನೆಯಲ್ಲಿ ಜಿಲ್ಲೆಯವರಾದ ಎಂ.ಎಚ್.ಕೃಷ್ಣಪ್ಪ ಕೂಡಾ ಇದ್ದರು. ಅವರು ಅಲ್ಲಿಂದ ಬಿಡುಗಡೆಗೊಂಡು ಕಮ್ಯೂನಿಸ್ಟ್ ಚಳುವಳಿಯಲ್ಲಿ ಕೆಲಸ ಮಾಡಲು ಜಿಲ್ಲೆಗೆ ಬಂದರು. ಸೇಂದಿ ಮೂರ್ತೆದಾರರ ಚಳುವಳಿ, ಗೇಣಿದಾರ ರೈತರ ಚಳುವಳಿಯನ್ನು ಸಂಘಟಿಸಿದರು. 1954 ರಲ್ಲಿ ರೈತ ಸಂಘದ ಕಚೇರಿ ಆರಂಭವಾಗುವ ವೇಳೆಗೆ, ಆದಾಗಲೇ ಟೈಪ್‌ರೈಟಿಂಗ್ ಕಲಿತಿದ್ದ ಶ್ರೀಯಾನರು ತಮ್ಮ ಟೈಪ್‌ರೈಟರ್‌ನೊಂದಿಗೆ ರೈತ ಸಂಘದ ಕಚೇರಿಯಲ್ಲಿ ಸ್ಥಾಪಿತರಾದರು. ಅಂದಿನಿಂದ ಇಂದಿನವರೆಗೂ ಅವರು ಪಕ್ಷದ ಪೂರ್ಣಾವಧಿ ಕಾರ್ಯಕರ್ತರೇ ಆಗಿದ್ದಾರೆ.

ಎ.ಕೃಷ್ಣ ಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಎಂ.ಎಚ್.ಕೃಷ್ಣಪ್ಪ, ಪಿ.ರಾಮಚಂದ್ರರಾವ್ ಮೊದಲಾದವರ ಮುಖಂಡತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆ(ಈಗಿನ ಉಡುಪಿ ಜಿಲ್ಲೆಯನ್ನೂ ಒಳಗೊಂಡು)ಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹಲವಾರು ಹೋರಾಟಗಳು ನಡೆದಿವೆ. ರೈತ ಸಂಘದ ಕಚೇರಿಯಿಂದ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಯಾನರು ಅವುಗಳಲ್ಲಿ ಹಲವಕ್ಕೆ ಸಾಕ್ಷಿದಾರರೋ ಭಾಗಿದಾರರೋ ಆಗಿದ್ದರು. ಜಿಲ್ಲೆಯ ರೈತ ಚಳುವಳಿ ಸಮರಧೀರ (ಮಿಲಿಟೆಂಟ್) ಸ್ವರೂಪದ್ದಾಗಿತ್ತು. 1974ರಲ್ಲಿ ರಾಜ್ಯ ಸರ್ಕಾರ ತಂದ ಭೂಸುಧಾರಣಾ ತಿದ್ದುಪಡಿ ಕಾಯಿದೆಗನುಸಾರ, ರಾಜ್ಯದ ಬೇರೆ ಜಿಲ್ಲೆಗಳಿಗಿಂತ ಹೆಚ್ಚಾಗಿ ದ.ಕ. ಜಿಲ್ಲೆಯ ಗೇಣಿದಾರ ರೈತರು ತಮ್ಮ ಉಳುಮೆ ಭೂಮಿಯ ಹಕ್ಕುದಾರರಾದರು. ಗೇಣಿದಾರ ರೈತರ ಅರ್ಜಿ ಸಂಗ್ರಹಿಸುವಲ್ಲಿ, ಲ್ಯಾಂಡ್ ಟ್ರಿಬ್ಯೂನಲ್‌ಗೆ ಅರ್ಜಿ ಸಲ್ಲಿಸುವಲ್ಲಿ, ಟ್ರಿಬ್ಯೂನಲ್ ಮುಂದೆ ರೈತರ ಪರವಾಗಿ ವಾದಿಸುವಲ್ಲಿ ಶ್ರೀಯಾನ್ ಇತರ ನಾಯಕರೊಂದಿಗೆ ಪ್ರಧಾನ ಪಾತ್ರ ವಹಿಸಿದರು.

ಇತ್ತೀಚಿನ ವರ್ಷಗಳಲ್ಲಿ ದ.ಕ.ಜಿಲ್ಲೆಯಲ್ಲಿ ಭೂಮಿ ಹಕ್ಕಿನ ಪ್ರಶ್ನೆ ಬೇರೆ ತರನಾದದ್ದಾಗಿದೆ. ಭೂರಹಿತ ಕೃಷಿ ಕಾರ್ಮಿಕರು, ನಿವೇಶನ ರಹಿತರು, ಸರ್ಕಾರಿ ಭೂಮಿ ಹಾಗೂ ಅರಣ್ಯ ಭೂಮಿಯಲ್ಲಿ ಕೃಷಿ ಮಾಡಿದವರ ಪ್ರಶ್ನೆಗಳು ಇವೆ. ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಹಲವು ಹೋರಾಟಗಳಿಗೆ ಶ್ರೀಯಾನ್ ನೇತೃತ್ವ ಕೊಟ್ಟಿದ್ದಾರೆ. ಅಡಿಕೆ, ತೆಂಗು ಬೆಳೆಗಾರರಿಗೆ ಕನಿಷ್ಟ ಬೆಂಬಲ ಬೆಲೆ, ರೋಗಗಳಿಗೆ ಪರಿಹಾರ ಸಂಬಂಧವಾಗಿ ಹಲವು ಹೋರಾಟವನ್ನು ಮುನ್ನಡೆಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕ ಚಳುವಳಿಯಲ್ಲಿ ನೇತೃತ್ವ:

1964ರಲ್ಲಿ ಪಕ್ಷ ವಿಭಜನೆಯಾದ ಅನಂತರದಲ್ಲಿ, ಶ್ರೀಯಾನ್ ಅವರು ಎಂ.ಎಚ್.ಕೃಷ್ಣಪ್ಪ, ಪಿ.ರಾಮಚಂದ್ರ ರಾಯರ ಜೊತೆಗೂಡಿ ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷವನ್ನು ಕಟ್ಟುವುದರಲ್ಲಿ ಶ್ರಮಿಸಿದರು. ಸಿಪಿಐ(ಎಂ) ಪಕ್ಷದ ಪತ್ರಿಕೆ 'ಐಕ್ಯರಂಗ' ಮೊದಲು ಮಂಗಳೂರಿನಿಂದಲೇ ಪ್ರಕಟಗೊಳ್ಳುತ್ತಿದ್ದು, ಶ್ರೀಯಾನರು ಅದರ ಪ್ರಕಟಣೆ ಹಾಗೂ ಸಾಂದರ್ಭಿಕ ಬರವಣಿಗಳಲ್ಲಿ ತೊಡಗಿಕೊಂಡರು. 1975ರ ತುರ್ತುಪರಿಸ್ಥಿತಿ ಕಾಲದಲ್ಲಿ ಮುಖಂಡರಾಗಿದ್ದ ಎಂ.ಎಚ್.ಕೃಷ್ಣಪ್ಪ, ಪಿ.ರಾಮಚಂದ್ರ ರಾಯರು ಬಹಿರಂಗವಾಗಿ ಕಾರ್ಯಾಚರಿಸುವಂತೆ ಇರಲಿಲ್ಲವಾದುದರಿಂದ, 'ಐಕ್ಯರಂಗ'ದ ಕರಡನ್ನು ಜಿಲ್ಲಾಧಿಕಾರಿಗಳಿಗೆ ತೋರಿಸಿ ಪ್ರಕಟಿಸುವ ಪೂರ್ಣ ಹೊಣೆ ಅವರದ್ದಾಗಿತ್ತು. 1978 ರಲ್ಲಿ 'ಐಕ್ಯರಂಗ' ಬೆಂಗಳೂರಿಗೆ ಸ್ಥಳಾಂತರಗೊಳ್ಳುವವರೆಗೂ ಶ್ರೀಯಾನರೇ

ಪುಟ 04 ಕ್ಕೆ

ಉನ್ನತ ಶಿಕ್ಷಣದಲ್ಲಿ ‘ಸ್ವಾತಂತ್ರ್ಯ ಹರಣ’ ಶಿಕ್ಷಣದ ಕೇಸರೀಕರಣ ಮತ್ತು ‘ಕೆಸರೀಕರಣ’......

ಪುಟ 2 ರಿಂದ

ಅವರು ಬರೆದಿರುವುದು ‘ಜೈ ಶ್ರೀರಾಮ್’ ಎಂಬ ಹೆಸರುಗಳು ಮತ್ತು ಕೆಲವು ಕ್ರಿಕೆಟ್ ಆಟಗಾರರ ಹೆಸರುಗಳು ಮಾತ್ರ. ಆದರೆ ಈ ವಿದ್ಯಾರ್ಥಿಗಳಿಗೆ ಶೇ.50 ಕ್ಕಿಂತ ಹೆಚ್ಚು ಅಂಕಗಳನ್ನು ಕೊಟ್ಟು ಅವರನ್ನು ಉತ್ತೀರ್ಣಗೊಳಿಸಲಾಗಿದೆ!! ವಿಶ್ವವಿದ್ಯಾಲಯದ ಮಾಜಿ ವಿದ್ಯಾರ್ಥಿಯೊಬ್ಬರು ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿದಾಗ ಈ ಹಗರಣ ಬಯಲಾಗಿದೆ.

ಈ ವಿಶ್ವ ವಿದ್ಯಾಲಯ ಸರಕಾರಿ ವಿಶ್ವವಿದ್ಯಾಲಯ. ನ್ಯಾಕ್ ಸಂಸ್ಥೆ ಈ ವಿಶ್ವವಿದ್ಯಾಲಯಕ್ಕೆ ‘ಎ+’ ದರ್ಜೆಯನ್ನೂ ನೀಡಿದೆ ಎಂದು ವಿಶ್ವವಿದ್ಯಾಲಯದ ವೆಬ್‌ಸೈಟ್ ಹೇಳುತ್ತದೆ.

ಹಗರಣ ಹೊರಬಿದ್ದ ಮೇಲೆ ನಡೆದಿರುವ ಮರು ಮೌಲ್ಯಮಾಪನದಲ್ಲಿ ಈ ವಿದ್ಯಾರ್ಥಿಗಳಿಗೆ ಸೊನ್ನೆ ಅಂಕಗಳು ಬಂದಿವೆ. ಅಂದರೆ ಇದೊಂದು ಅತ್ಯಂತ ವ್ಯವಸ್ಥಿತವಾಗಿ ಮತ್ತು ಯೋಜಿತವಾಗಿ ನಡೆಸಲಾಗಿರುವ ಹಗರಣ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಉನ್ನತ ಅಧಿಕಾರಿಗಳು ಈ ಹಗರಣದಲ್ಲಿ ಶಾಮೀಲಾಗದೇ ಹೋದಲ್ಲಿ ಇಂತಹ ಅವ್ಯವಹಾರ ನಡೆಯುವುದು ಸಾಧ್ಯವೇ ಇಲ್ಲ ಎಂಬುದನ್ನು ಯಾರಾದರೂ ಊಹಿಸಬಹುದು. ಈ ಹಗರಣದ ಬಗೆಗೆ ಈಗ ರಾಜ್ಯಪಾಲರು ತನಿಖೆ ನಡೆಸುತ್ತಿದ್ದಾರಂತೆ. ನಡೆಸಲಿ. ರಾಜ್ಯದಲ್ಲಿರುವುದು ಶ್ರೀರಾಮನ ಹೆಸರಿನಲ್ಲಿ ದ್ವೇಷದ ರಾಜಕೀಯ ಮಾಡಿ ಅಧಿಕಾರ ಹಿಡಿದಿರುವ ಪಕ್ಷ. ಕೇಂದ್ರದಲ್ಲೂ ಅದೇ ಪಕ್ಷ.

ದೇಶ ಕಟ್ಟಬೇಕಾದ ಯುವ ಜನಾಂಗಕ್ಕೆ ‘ವಿದ್ಯೆ-ಬುದ್ಧಿ’ ಕೊಡಬೇಕಾದ ವಿಶ್ವವಿದ್ಯಾಲಯವೊಂದರ ಘನತೆ ಎಲ್ಲಿಗೆ ಬಂದಿದೆ ಎಂದು ನೋಡಿದರೆ ವಿಷಾದವಾಗುತ್ತದೆ. ಒಂದು ಸಮಾಜದ ನರನಾಡಿಗಳಲ್ಲಿ ಮತಾಂಧತೆಯ ವಿಷ ಹರಡಿದರೆ ಅದು ಹೇಗೆಲ್ಲಾ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ನಾಶ ಮಾಡುತ್ತದೆ ಎಂಬುದಕ್ಕೆ ಈ ಹಗರಣ ಒಂದು ಜೀವಂತ ಸಾಕ್ಷಿಯಾಗಿದೆ. ಸಂಕುಚಿತ ರಾಜಕೀಯ ಉದ್ದೇಶಗಳಿಗಾಗಿ, ರಾಜಕೀಯ ಅಧಿಕಾರವನ್ನು ಕಬಳಿಸುವುದಕ್ಕಾಗಿ ಪ್ರಸ್ತುತ ನಮ್ಮ ಸಮಾಜದಲ್ಲಿ ದೇವರು ಮತ್ತು ಧರ್ಮಗಳನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬುದು ಪ್ರಜ್ಞಾವಂತರಲ್ಲಿ ಆತಂಕವನ್ನು ಹುಟ್ಟಿಸಿದೆ. ಮತಾಂಧತೆಯ ಹರಡುವಿಕೆಯ ಪರಿಣಾಮ ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿ ಆದರೆ ಇನ್ನು ಪೊಲೀಸ್, ಸೈನ್ಯ, ನ್ಯಾಯಾಂಗ ಮುಂತಾದ ಅಯಕಟ್ಟಿನ ಕ್ಷೇತ್ರಗಳಲ್ಲಿ ಮತಾಂಧತೆಯ ವಿಷ ವ್ಯಾಪಕವಾಗಿ ಹರಡಿದರೆ ಅವುಗಳ ಪರಿಣಾಮ ಏನಾಗಬಹುದು ಎಂಬುದನ್ನು ನಾವು ಊಹಿಸಿಕೊಳ್ಳಲೂ ಕಷ್ಟವಾಗುತ್ತದೆ.

ಬಿಜೆಪಿ ರ್‍ಯಾಲಿಯಲ್ಲಿ ಪಾಲ್ಗೊಂಡರೆ ವಿ.ವಿ. ಆಂತರಿಕ ಪರೀಕ್ಷೆಯಲ್ಲಿ ಅಂಕಗಳು

ಇತ್ತೀಚೆಗೆ ದೆಹಲಿಯ ಗಲ್ಗೋತಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಾಮೂಹಿಕವಾಗಿ ಬಿಜೆಪಿ ಪಕ್ಷದ ರ್‍ಯಾಲಿಯೊಂದರಲ್ಲಿ ಭಾಗವಹಿಸಲು ಹೊರಟು ನಿಂತಿದ್ದಾಗ, ‘ಆಜ್ ತಕ್’ ವಾಹಿನಿಯು ವಿದ್ಯಾರ್ಥಿಗಳನ್ನು ಮಾತನಾಡಿಸಿದ್ದರ ವಿಡಿಯೋ ಒಂದು ವ್ಯಾಪಕವಾಗಿ ಸುದ್ದಿಯಾಯಿತು.

ವಿದ್ಯಾರ್ಥಿಗಳು ತಮ್ಮ ಕೈಗಳಲ್ಲಿ ನಾನಾ ಘೋಷಣೆಗಳನ್ನು ಬರೆದ ಫಲಕಗಳನ್ನು ಹಿಡಿದುಕೊಂಡಿದ್ದಾರೆ. ಪತ್ರಕರ್ತ ಅಶುತೋಷ್ ಮಿಶ್ರ ವಿದ್ಯಾರ್ಥಿಗಳು ತಾವು ಹಿಡಿದುಕೊಂಡಿರುವ ಫಲಕದಲ್ಲಿ ಬರೆದಿರುವ ಘೋಷಣೆಯ ಅರ್ಥವೇನು ಎಂದು ಕೇಳುತ್ತಾರೆ. ಕೇಳಲಾಗುವ ಯಾವ ಪ್ರಶ್ನೆಗಳಿಗೂ ಉತ್ತರಿಸಲಾಗದೇ ವಿದ್ಯಾರ್ಥಿಗಳು ತಪ್ಪಿಸಿಕೊಳ್ಳುತ್ತಾರೆ.

ಒಬ್ಬ ವಿದ್ಯಾರ್ಥಿ, ತಾನು ಹಿಡಿದಿರುವ ಫಲಕದಲ್ಲಿರುವ ‘ಅರ್ಬನ್ ನಕ್ಸಲ್’ ಎಂಬ ಇಂಗ್ಲೀಷ್ ಪದಗಳನ್ನು ‘ಅರ್ಬನ್ ಮಾಕ್ಸ್ ವೆಲ್’ ಎಂದು ಓದುತ್ತಾನೆ. ಉತ್ತರಾಧಿಕಾರ ತೆರಿಗೆ(ಇನ್‌ಹೆರಿಟೆನ್ಸ್ ಟ್ಯಾಕ್ಸ್) ಕುರಿತ ಫಲಕ ಹಿಡಿದ ವಿದ್ಯಾರ್ಥಿಗೆ ಅದರ ಅರ್ಥವೇನೆಂದು ಕೇಳಿದರೆ ಗೊತ್ತಿಲ್ಲ. ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೆ ಮಹಿಳೆಯರ ‘ತಾಳಿ’ ಕಿತ್ತುಕೊಳ್ಳುತ್ತಾರೆ ಎಂಬ ಫಲಕ ಹಿಡಿದ ವಿದ್ಯಾರ್ಥಿಯನ್ನು ಆ ರೀತಿ ಎಲ್ಲಿ ಹೇಳಲಾಗಿದೆ, ಅದಕ್ಕೆ ಆಧಾರವೇನು ಎಂದು ಕೇಳಿದರೆ, ವಿದ್ಯಾರ್ಥಿ ತೊದಲುತ್ತಾನೆ ಹೊರತು ಉತ್ತರ ನೀಡುವುದಿಲ್ಲ. ಸಂಪತ್ತಿನ ಹಂಚಿಕೆ ಕುರಿತ ಫಲಕ ಹಿಡಿದವನದೂ ಅದೇ ಕತೆ. ಮತ್ತೊಬ್ಬ ವಿದ್ಯಾರ್ಥಿನಿಯದೂ ಅದೇ ಕತೆ.

ಈ ಬಗೆಗೆ ಇದೇ ವಿಶ್ವವಿದ್ಯಾಲಯದ ಲಕ್ಷ್ಮಿಶರ್ಮ ಎಂಬ ವಿದ್ಯಾರ್ಥಿನಿಯು ತಾನು ಈ ಬಿಜೆಪಿ ರ್‍ಯಾಲಿಯಲ್ಲಿ ಭಾಗವಹಿಸಿದ ನಂತರ ಪಶ್ಚಾತ್ತಾಪ ಪಟ್ಟು ಟ್ವೀಟ್ ಮಾಡಿ ಈ ವಿಷಯವನ್ನು ಬಹಿರಂಗ ಪಡಿಸಿದ್ದಾರೆ. ವಿದ್ಯಾರ್ಥಿಗಳಿಗೆ ಬಿಜೆಪಿ ರ್‍ಯಾಲಿಗೆ ಹೋಗಿ, ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಚಿತ್ರನಟಿ ಕಂಗಾನ ರನೌತ್‌ರನ್ನು ಭೇಟಿ ಮಾಡಿದರೆ, ವಿಶ್ವವಿದ್ಯಾಲಯದ ಆಂತರಿಕ ಪರೀಕ್ಷೆಗಳಲ್ಲಿ ಅಂಕಗಳನ್ನು ನೀಡಲಾಗುವುದು ಎಂದು ಹೇಳಿ ನಮ್ಮನ್ನು ಈ ರ್‍ಯಾಲಿಗೆ ಕಳುಹಿಸಲಾಗಿತ್ತು, ವಿ.ವಿ.ಯ ಆಡಳಿತ ಮಂಡಳಿ ವಿದ್ಯಾರ್ಥಿಗಳನ್ನು ಒತ್ತಾಯಪೂರ್ವಕವಾಗಿ ಬಿಜೆಪಿ ರ್‍ಯಾಲಿಗೆ ದೂಡಿದೆ ಎಂದು ಅವರು ದೂರಿದ್ದಾರೆ.

ಆರೆಸ್ಸೆಸ್ ನಿಯಂತ್ರಣದ ಬಿಜೆಪಿ ಸರಕಾರಗಳಡಿ, ಸಂಘಪರಿವಾರದ ವಿಚಾರಗಳ ಪ್ರಭಾವಗಳಿಂದ ನಮ್ಮ ಸಮಾಜದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಎಂತೆಂತಹ ‘ಅಗ್ನಿ ಪರೀಕ್ಷೆ’ಗಳು ಎದುರಾಗುತ್ತಿವೆ ಎಂದು ನೋಡಿದರೆ, ಮತ್ತು ಈ ಪ್ರವೃತ್ತಿಗಳು ಹೀಗೆ ಮುಂದುವರಿದರೆ, ಶಿಕ್ಷಣ ಕ್ಷೇತ್ರದ ಭವಿಷ್ಯ ಏನಾಗಬಹುದು ಎಂದು ನೆನೆದರೆ ನಿಜಕ್ಕೂ ಆತಂಕವಾಗುತ್ತದೆ. ●

90 ವರ್ಷ ದಾಟಿ ಮುನ್ನಡೆಯುತ್ತಿರುವ ಹಿರಿಯ ಕಮ್ಯೂನಿಸ್ಟ್ ನೇತಾರ ಕೆ.ಆರ್.ಶ್ರೀಯಾನ್...

ಪುಟ 3 ರಿಂದ

ಮುದ್ರಣ ಜವಾಬ್ದಾರಿ ಹೊರುತ್ತಿದ್ದರು.

ಪಕ್ಷ ವಿಭಜನೆ ಬಳಿಕ ಕ್ಯಾಶ್ಯೂ ಕಾರ್ಮಿಕರ ಸಂಘದಲ್ಲಿ ಶ್ರೀಯಾನರೇ ನೇತೃತ್ವ ವಹಿಸಿದರು. 1970ರ ಬಳಿಕ ಸಿಐಟಿಯು ಮಾರ್ಗದರ್ಶನದಲ್ಲಿ ಕ್ಯಾಶ್ಯೂ, ಹಂಚು, ಬೀಡಿ ಕೆಲಸಗಾರರ ಜಿಲ್ಲಾ ಸಂಘಗಳಿಗೆ ಮುಖಂಡರಾಗಿ ಹಲವು ಹೋರಾಟಗಳನ್ನು ಮುನ್ನಡೆಸಿದರು. 1978ರಲ್ಲಿ ಎಂ.ಎಚ್.ಕೃಷ್ಣಪ್ಪನವರು ಸಿಪಿಐ(ಎಂ) ಪಕ್ಷದಿಂದ ದೂರ ಹೋದರು. ಅದೇ ವರ್ಷ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದ ಶ್ರೀಯಾನ್ ಅವರು ಮುಂದಿನ 30 ವರ್ಷ ಅದೇ ಸ್ಥಾನದಲ್ಲಿ ಕಾರ್ಯ ನಿರ್ವಹಿಸಿದರು. ದ.ಕ.ಜಿಲ್ಲೆಯ ಬೀಡಿ ಕಾರ್ಮಿಕರು 1982ರಲ್ಲಿ ಪ್ರಾವಿಡೆಂಟ್ ಫಂಡ್‌ಗಾಗಿ ನಡೆಸಿದ ಸಮರಧೀರ ಹೋರಾಟ, ಧೂಮಪಾನ ನಿಷೇಧ ಕಾಯಿದೆ ಹಿನ್ನೆಲೆಯಲ್ಲಿ, ಮುಖ್ಯವಾಗಿ ಕಾರ್ಮಿಕ ವರ್ಗದ ಹಿತರಕ್ಷಣೆಗಾಗಿ 2001 ರಲ್ಲಿ ನಡೆದ ಪ್ರತಿಭಟನೆ, ಕೋಟ್ಪಾ ಕಾಯಿದೆ ವಿರುದ್ಧ 2015ರಲ್ಲಿ ಮಾಡಿದ ಹೋರಾಟ; ಗ್ಯಾಟ್ ಒಪ್ಪಂದದ ವಿರುದ್ಧ 1994ರಲ್ಲಿ ನಡೆಸಿದ ಪಿಕೆಟಿಂಗ್, ಕೇಂದ್ರದ ಹೊಸ ಆರ್ಥಿಕ ನೀತಿಗಳ ವಿರುದ್ಧ 1992ರಿಂದ ಮೊದಲುಗೊಂಡು ನಡೆದ ಹಲವು ಸಾರ್ವತ್ರಿಕ ಮುಷ್ಕರಗಳು, ಕೊಂಕಣ ರೈಲ್ವೆ ಮತ್ತು ತೈಲಾಗಾರ ಸ್ಥಾಪನೆಗಾಗಿ 1985ರಲ್ಲಿ ನಡೆಸಿದ ರೈಲ್ ರೋಖೋ, ಮಂಗಳೂರು–ಬೆಂಗಳೂರು ರೈಲ್ವೇ ಬ್ರಾಡ್‌ಗೇಜ್ ಪರಿವರ್ತನೆಗಾಗಿ 3 ಬಾರಿ ಮಾಡಿದ ಪ್ರತಿಭಟನೆಗಳು; ಕೋಮು ಸೌಹಾರ್ದಕ್ಕಾಗಿ 1990ರಲ್ಲಿ ನಡೆಸಿದ ಮಾನವ ಸರಪಳಿ, ಚರ್ಚ್ ಮೇಲಿನ ಧಾಳಿ ವಿರುದ್ಧ 2008ರಲ್ಲಿ ನಡೆಸಿದ ಸಮಾವೇಶ, 2012ರ ಸೌಹಾರ್ದ ಕಾರ್ಯಾಗಾರ, ಕೇರಳ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಭಾಗವಹಿಸಿದ 2018ರ ಸೌಹಾರ್ದ ಸಮಾವೇಶ– ಇವುಗಳನ್ನು ಸಂಘಟಿಸುವಲ್ಲಿ ಶ್ರೀಯಾನ್ ಪಾತ್ರ ಪ್ರಮುಖವಾಗಿತ್ತು.

ಮಂಗಳೂರಿನ ಬೋಳಾರದಲ್ಲಿ ಅಂದಿನ ಬಲಿಷ್ಟ ಕಾರ್ಮಿಕ ಸಂಘಟನೆಯಾಗಿ ಟೈಲ್ ವರ್ಕರ್ಸ್ ಯೂನಿಯನ್ 1959ರಲ್ಲೇ ಸ್ವಂತ ನಿವೇಶನ ಹೊಂದಿ, ಸಭಾಂಗಣವನ್ನೊಳಗೊಂಡ ಕಟ್ಟಡವನ್ನು ಹೊಂದಿತ್ತು. ಅದೇ ಆವರಣದಲ್ಲಿ ಪಕ್ಷದ ಜಿಲ್ಲಾ ಕಚೇರಿಗೆ ಭೂಮಿ ಪಡೆದು, ಶ್ರೀಯಾನ್ ಉಮೇದಿನಲ್ಲಿ ಆಕರ್ಷಕ ಕಚೇರಿ ಕಟ್ಟಡವೊಂದನ್ನು ನವಂಬರ್ 1997ರಂದು ನಿರ್ಮಿಸಲಾಗಿದ್ದು, ಅದಕ್ಕೆ ‘ಎಕೆಜಿ ಭವನ’ ಎಂಬ ಹೆಸರಿಡಲಾಗಿದೆ.

ಯುವ ಸಂಘಟನೆ, ರಂಗಭೂಮಿ, ಬರವಣಿಗೆ ಇತ್ಯಾದಿ:

ಕೆ.ಆರ್.ಶ್ರೀಯಾನರು ಚಳುವಳಿಗೆ ಬಂದ ಹೊಸದರಲ್ಲಿ, ಪಿ.ರಾಮಚಂದ್ರ ರಾಯರು ಯುವಜನ ಸಂಘಟನೆ ಕಟ್ಟುವಂತೆ ಶ್ರೀಯಾನರನ್ನು ಕೋರಿದ್ದರು. ಅದರಂತೆ 1955ರಲ್ಲಿ ‘ಡೆಮಾಕ್ರೆಟಿಕ್ ಯೂತ್ ಲೀಗ್’ ಆರಂಭವಾಯಿತು. ನಗರದ ವ್ಯಾಪ್ತಿಯಲ್ಲಿ 7 ಕಡೆ ಘಟಕಗಳೂ ಆದವು. ರಾತ್ರಿ ಶಾಲೆ, ಕ್ರೀಡೆ, ವ್ಯಾಯಾಮ ಶಾಲೆ, ನಾಟಕ ತರಬೇತಿ ‘ಲೀಗ್’ ಘಟಕಗಳ ಚಟುವಟಿಕೆಗಳಾದವು.

ಶ್ರೀಯಾನರು ನಾಟಕಕಾರರೂ ಕೂಡಾ ಎಂದು ಈಗಿನ ಬಹಳ ಮಂದಿಗೆ ಗೊತ್ತಿಲ್ಲ. ಅವರು ಬರೆದ ನಾಟಕಗಳು (ಕಾರಾಗೃಹ, ಬಿಡುಗಡೆ, ಬಂಧನ, ನಿರಪರಾಧಿ) ಹಲವಾರು ಪ್ರದರ್ಶನ ಕಂಡಿವೆ. ಹಾಗೆಯೇ ಹಣೆಬರವು, ಎಂಕ್ಲೆಗ್‌ಲಾ ಬದುಕೊಡು, ಮ್ಯಾನೇಜರ್ ಕಾಂತೆ, ಕಾಲ ಬದಲಾನಾಗ, ಪರಿವರ್ತನೆ, ಇಲ್ಲ್‌ದೆತ್ತಿ ಮಗೆ–ಇತ್ಯಾದಿ ತುಳು ನಾಟಕಗಳು ಭಾರೀ ಜನಮೆಚ್ಚುಗೆ ಗಳಿಸಿವೆ. ಪಕ್ಷದಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿಯಾದ ಮೇಲೆ ಅವರಿಗೆ ನಾಟಕ ಬರವಣಿಗೆಗೆ ಬಿಡುವು ಸಿಗಲಿಲ್ಲ. ಅವರ ನಾಟಕಗಳನ್ನು ‘ಲೀಗ್’ ಘಟಕಗಳಿಗಾಗಿ ಅಥವಾ ಯುವಕ ಮಂಡಲಿಗಳಿಗಾಗಿ ಅವರೇ ನಿರ್ದೇಶಿಸುತ್ತಿದ್ದರು.

ಸಮುದಾಯ ಮಂಗಳೂರು ಘಟಕ ಆರಂಭಗೊಂಡು 1976ರ ಕೊನೆಯಲ್ಲಿ ಪ್ರಸನ್ನ ನಿರ್ದೇಶಿಸಿದ ‘ಮಾರೀಚನ ಬಂಧುಗಳು’ ನಾಟಕ ಪ್ರದರ್ಶಿಸಿತು. ಆಗ ಸಮುದಾಯದ ಘಟಕ ಸಂಚಾಲಕರಾಗಿದ್ದವರು ಶ್ರೀಯಾನರೇ. 1980ರಲ್ಲಿ ಪಕ್ಷ ಜಿಲ್ಲಾ ಸಮಿತಿಗೆ ಆರ್ಥಿಕ ಸಮಸ್ಯೆ ಬಂದಾಗ, ಶ್ರೀಯಾನರು ಬರೆದು ನಿರ್ದೇಶಿಸಿದ ‘ಇಲ್ಲ್‌ದೆತ್ತಿ ಮಗೆ’ (ಮನೆ ಮುರುಕ ಮಗ) ನಾಟಕದ ಪ್ರದರ್ಶನದಿಂದ ಸಮಸ್ಯೆ ನಿವಾರಿಸಲು ಸಾಧ್ಯವಾಯಿತು.

2014ರಲ್ಲಿ ಪಕ್ಷದ ಜಿಲ್ಲಾ ಸಮಿತಿ, ರಾಜ್ಯ ಸಮಿತಿಯ ಜವಾಬ್ದಾರಿಗಳಿಂದ ಬಿಡುಗಡೆಗೊಂಡ ಬಳಿಕ ಕಮ್ಯೂನಿಸ್ಟ್ ಚಳುವಳಿಯ ಬಗ್ಗೆ ಮೂರು ಮುಖ್ಯ ಪುಸ್ತಕಗಳನ್ನು ಶ್ರೀಯಾನ್ ಬರೆದಿದ್ದಾರೆ. ‘ಎ.ಕೃಷ್ಣ ಶೆಟ್ಟಿ’ ಎಂಬ ಕಿರು ಪುಸ್ತಕದ ಬಳಿಕ, ‘ನನ್ನ ಜೀವನ ಕಥನದ ನೆನಪಿನಂಗಳದಿಂದ’ ಎಂಬ ಅವರ ಆತ್ಮಕಥೆಯಲ್ಲಿ ಕರ್ನಾಟಕದ ವಿಶೇಷವಾಗಿ ದ.ಕ.ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಸಾಕಷ್ಟು ವಿವರಗಳನ್ನು ದಾಖಲಿಸಿದ್ದಾರೆ. ‘ಕರ್ನಾಟಕದ ರೈತ ಚಳುವಳಿ’ ಎಂಬ ಪುಸ್ತಕವು ಕಮ್ಯೂನಿಸ್ಟರ ನೇತೃತ್ವದಲ್ಲಿ ನಡೆದ ರೈತ ಚಳುವಳಿಗಳ ವಿವರವಾದ ಚರಿತ್ರೆಯಾಗಿದೆ.

ಕೆ.ಆರ್.ಶ್ರೀಯಾನರ ಒಂದೂ ನಾಟಕಗಳು ಅಚ್ಚಾಗಿಲ್ಲ. ‘ಇಲ್ಲ್‌ದೆತ್ತಿ ಮಗೆ’ ಎಂಬ ನಾಟಕವಾದರೂ ಅಚ್ಚಾಗ ಬೇಕಿತ್ತು ಎಂದು ಬಹಳ ಜನ ಅಪೇಕ್ಷಿಸುತ್ತಿದ್ದರು.

ಚುನಾವಣೆಗಳಲ್ಲಿ ಭಾಗವಹಿಸಿದ್ದು

ಇಷ್ಟು ದೀರ್ಘಕಾಲ ರಾಜಕೀಯ ಪಕ್ಷವೊಂದರ ಪ್ರಮುಖ ನಾಯಕರಾಗಿದ್ದ ಮೇಲೆ, ರಾಜಕೀಯ ಚುನಾವಣೆಗಳಲ್ಲೂ ಭಾಗವಹಿಸಿರಬೇಕಲ್ಲವೇ? ದ.ಕ.ಜಿಲ್ಲೆಯಿಂದ 1957ರ ಬಳಿಕ ಪಕ್ಷ ಆಗೀಗ ಸ್ಪರ್ಧಿಸುತ್ತಾ ಇದೆ. ಶ್ರೀಯಾನ್‌ರವರು ಪಕ್ಷ ಜಿಲ್ಲಾ ಸಮಿತಿ ಕಾರ್ಯದರ್ಶಿಯಾದ ಮೇಲೆ ಯಾರ್‍ಯಾರು ಪಕ್ಷದಿಂದ ಸ್ಪರ್ಧಿಸಿದ್ದರೋ, ಅವರ ಪರವಾಗಿ ಚುನಾವಣಾ ಪ್ರಚಾರದ ನೇತೃತ್ವ ವಹಿಸಿದ್ದಾರೆ.

1969ರಲ್ಲಿ ಮಂಗಳೂರು ತಾಲೂಕು ಬೋರ್ಡಿಗೆ ನಡೆದ ಚುನಾವಣೆಯಲ್ಲಿ ಶ್ರೀಯಾನರು ಪದವು ವಾರ್ಡಿನಿಂದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಗೆದ್ದು ಬಂದಿರುತ್ತಾರೆ ಮತ್ತು ವಾರ್ಡಿನ ಜನರಿಗೆ ಹಲವು ಸೌಕರ್ಯಗಳನ್ನು ಒದಗಿಸಲು ಶ್ರಮಿಸಿದ್ದಾರೆ.

1989ರಲ್ಲಿ ಉಳ್ಳಾಲ ವಿಧಾನಸಭಾ ಕ್ಷೇತ್ರಕ್ಕೆ ಪಕ್ಷದ ಅಭ್ಯರ್ಥಿಯಾಗಿ ಶ್ರೀಯಾನರು ಸ್ಪರ್ಧಿಸಿದ್ದರು. ಉತ್ತಮ ಮತಗಳು ಬಂದಿದ್ದರೂ, 5000 ಮತಗಳ ಅಂತರದಲ್ಲಿ ಸೋಲು ಉಂಟಾಯಿತು. 1994ರಲ್ಲಿ ಅವರೇ ಮತ್ತೊಮ್ಮೆ ಸ್ಪರ್ಧಿಸಿದಾಗಲೂ ಗೆಲ್ಲುವುದು ಸಾಧ್ಯವಾಗಲಿಲ್ಲ.

ವ್ಯಕ್ತಿ, ವ್ಯಕ್ತಿತ್ವ

ತೆಳ್ಳಗೆ, ಎತ್ತರದ ಆಳು, ಇನ್ನೂ ಕಪ್ಪಾಗಿರುವ ಕೂದಲು, ಕೋಲು ಮುಖ, ನೋಡಿದಾಗಲೇ ಗೌರವ ಹುಟ್ಟಿಸುವಂತಹ ಚಹರೆ. ಕಳೆದ ಜಿಲ್ಲಾ ಸಮ್ಮೇಳನ(2021)ದಲ್ಲಿ ಜಿಲ್ಲಾ ಸಮಿತಿಯಿಂದ ವಯೋನಿಮಿತ್ತ ಬಿಡುಗಡೆಗೊಳ್ಳುವವರೆಗೂ ಪ್ರತೀ ದಿನವೂ ಬೋಳಾರದ ಪಕ್ಷದ ಕಚೇರಿಯಲ್ಲಿ ಅವರನ್ನು ಕಾಣಬಹುದಾಗಿತ್ತು. ಹೋರಾಟ, ಭಾಷಣ, ನೆಗೋಷಿಯೇಷನ್ ಇತ್ಯಾದಿ ಇಲ್ಲವಾದರೆ ಅವರು ಕಚೇರಿಯಲ್ಲೇ ಇರುತ್ತಿದ್ದರು. ಈಗ ಎರಡೂವರೆ ವರ್ಷದಿಂದ ಅವರನ್ನು ಅಲ್ಲಿ ಕಾಣಲಾರಿರಿ. ಈಗ 8 ವರ್ಷಗಳ ಹಿಂದೆ ನಿಧನರಾದ ಬಿ.ಮಾಧವ ಅವರೂ, ಹಿಂದೆ ಅವರ ಪಕ್ಕದ ಕುರ್ಚಿಯಲ್ಲೇ ಕುಳಿತಿರುತ್ತಿದ್ದರು. ಈ ಇಬ್ಬರು ಹಿರಿಯ ನಾಯಕರು ಸೋದರರಂತೆ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದರು.

ಕೆ.ಆರ್.ಶ್ರೀಯಾನ್‌ರಿಗೆ ಹೃದಯ, ರಕ್ತದೊತ್ತಡ, ಕಿಡ್ನಿ, ಮಧುಮೇಹ ಸಂಬಂಧ ಬಾಧೆಗಳು ಕೆಲವು ವರ್ಷಗಳಿಂದ ಇವೆ. ಈಗ ಅವರು ಮನೆ, ಅಂಗಳದಲ್ಲಿ ಮಾತ್ರ ಓಡಾಟ ಮಾಡುತ್ತಾರೆ.

ಕೆ.ಆರ್.ಶ್ರೀಯಾನ್ ಜೊತೆ ಕಳೆದ 18 ವರ್ಷಗಳಿಗೂ ಮೀರಿ ನಾನು ಅವರೊಂದಿಗೆ ಕಳೆದಿದ್ದೇನೆ. ಕಿರಿಯರನ್ನು ಗೌರವಿಸುವ ಅವರ ನಡವಳಿಕೆಗಳು ನನ್ನ ಮನಸ್ಸಿನಲ್ಲಿ ಹಸುರಾಗಿವೆ. ಅವರಿಗೆ ನಮಃ. ●

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಯುವ ಎಲ್ಲ ಹೊರಗುತ್ತಿಗೆ ನೇಮಕಾತಿಗೂ ಮೀಸಲಾತಿ ಜಾರಿ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಸಾಮಾಜಿಕ ನ್ಯಾಯ ಮತ್ತು ಸಮಾನ ಉದ್ಯೋಗಾವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಅಳವಡಿಸಲು ನಿರ್ಧರಿಸಲಾಗಿದೆ ಎಂದು ಸರ್ಕಾರದ ಆದೇಶದಲ್ಲಿ ಹೇಳಲಾಗಿದೆಯಾದರೂ, ಇದನ್ನು ಯಾವುದೇ ಕಾರಣಕ್ಕಾಗಿ ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಲು ಪರಿಗಣಿಸತಕ್ಕದ್ದಲ್ಲ ಎಂದು ಹೇಳಿದೆ. ಖಾಯಂ ಅಲ್ಲದ ಮತ್ತು ಭದ್ರತೆಯೇ ಇಲ್ಲದ ಉದ್ಯೋಗದಿಂದ ಸಾಮಾಜಿಕ ನ್ಯಾಯ ಹಾಗೂ ಸಮಾನ ಉದ್ಯೋಗಾವಕಾಶಗಳನ್ನು ಯಾವ ರೀತಿಯಲ್ಲಿ ಒದಗಿಸಿದಂತಾಗುತ್ತದೆ?

ಸರ್ಕಾರಿ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ಜಾರಿ: ಆದರೆ, ಈ ನೌಕರರನ್ನು ಖಾಯಂ ಮಾಡಲು ಪರಿಗಣಿಸತಕ್ಕದ್ದಲ್ಲ!!

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಯುವ ಎಲ್ಲ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮ ಅಳವಡಿಸಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರ ಆದೇಶಿಸಿದೆ. ಮೇ 20 ರಂದು ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ, "ದಿನಾಂಕ: 21.12.2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸಲು ನಿರ್ಣಯಿಸಲಾಗಿದೆ. ಆದುದರಿಂದ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಯುವ ಎಲ್ಲ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ" ಎಂದು ತಿಳಿಸಿದೆ.

ಸರ್ಕಾರದ ಎಲ್ಲ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾನಿಲಯಗಳಿಗೂ ಇದು ಅನ್ವಯಿಸುತ್ತದೆ. ಈ ಯಾವುದೇ ಇಲಾಖೆಯಲ್ಲಿ ಕನಿಷ್ಠ 20 ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿಯನ್ನು ಜಾರಿಗೊಳಿಸತಕ್ಕದ್ದು. ಹೊರಗುತ್ತಿಗೆ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣದಲ್ಲಿ ಮಹಿಳೆಯರಿಗೆ ಕನಿಷ್ಠ ಶೇಕಡ 33 ರಷ್ಟು ಅವಕಾಶ ಕಲ್ಪಿಸಲಾಗಿದೆ.

ಸಾಮಾಜಿಕ ನ್ಯಾಯ ಮತ್ತು ಸಮಾನ ಉದ್ಯೋಗಾವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಅಳವಡಿಸುತ್ತಿರುವುದರಿಂದ ಯಾವುದೇ ಕಾರಣಕ್ಕಾಗಿ ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಲು ಪರಿಗಣಿಸತಕ್ಕದ್ದಲ್ಲ ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ. ರಾಜ್ಯ ಸರ್ಕಾರದ ಈ ಮೀಸಲಾತಿ ನಿರ್ಧಾರವನ್ನು ಸ್ವಾಗತಿಸಬಹುದಾದರೂ, ಖಾಯಂ ಅಲ್ಲದ ಮತ್ತು ಭದ್ರತೆಯೇ ಇಲ್ಲದ ಇಂತಹ ಉದ್ಯೋಗದಿಂದ ಯಾವ ರೀತಿಯಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನ ಉದ್ಯೋಗಾವಕಾಶಗಳನ್ನು ಒದಗಿಸಿದಂತಾಗುತ್ತದೆ?

ರಾಜ್ಯ ಸರ್ಕಾರದ ಕಚೇರಿಗಳಲ್ಲಿನ ವಾಹನ ಚಾಲಕರು, ಡಾಟಾ ಎಂಟ್ರಿ ಆಪರೇಟರ್, ಸ್ವಚ್ಛತಾ ಸಿಬ್ಬಂದಿ, ಗ್ರೂಪ್–ಡಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವುದು ಸರ್ಕಾರದ ಇತ್ತೀಚಿನ ಅಂಗೀಕೃತ ಕಾರ್ಯನೀತಿಯಾಗಿದೆ. ಇವರು ದುಡಿಯುವ ವಯಸ್ಸಿನಲ್ಲೂ ಸಂಪೂರ್ಣ ಅವಧಿಯ ಉದ್ಯೋಗ ಸಿಗುವುದಿಲ್ಲ. ನಿಗದಿತ ಗುತ್ತಿಗೆ ಅವಧಿ ಮುಗಿದ ನಂತರ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಮತ್ತೆ ಕೆಲಸ ಸಿಗುತ್ತದೆ ಎಂಬ ಖಾತರಿ ಇರುವುದಿಲ್ಲ. ಹೀಗಾಗಿ ಇವರಿಗೆ ತಮ್ಮ ಜೀವನ ನಡೆಸಲು ನಿರ್ದಿಷ್ಟವಾದ ನಿರಂತರ ಆದಾಯ ಇರುವುದಿಲ್ಲ. ಇಂತಹ ಗುತ್ತಿಗೆ ಉದ್ಯೋಗಿಗಳಲ್ಲಿ ಬಹುತೇಕರ ಬದುಕು ಕೆಲಸ ಹುಡುಕುವುದರಲ್ಲೇ ಅರ್ಧ ಆಯುಷ್ಯ ಕಳೆದುಹೋಗುತ್ತದೆ. ಖಾಯಂ ಉದ್ಯೋಗ ಇಲ್ಲದ ಕಾರಣದಿಂದ ಮೀಸಲಾತಿ ಅಡಿಯಲ್ಲಿ ನೇಮಕವಾಗುವ ಈ ಗುತ್ತಿಗೆ ಕಾರ್ಮಿಕರು ಪಿಂಚಣಿ ಸೌಲಭ್ಯದಿಂದ ವಂಚಿತರಾಗುತ್ತಾರೆ. ಸರ್ಕಾರಿ ನೌಕರರಿಗೆ ಸಿಗುವ ಹಳೆಯ ಅಥವಾ ಹೊಸ ಪಿಂಚಣಿ ಯೋಜನೆ ಇವರಿಗೆ ಸಿಗಲಾರದು.


ಸಾಂಕ್ರಾಮಿಕವಾಗಿ ಹರಡುತ್ತಿರುವ ಗುತ್ತಿಗೆ ಪದ್ಧತಿ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ನವ ಉದಾರವಾದಿ ಮತ್ತು ಖಾಸಗೀಕರಣ ನೀತಿಗಳಿಂದಾಗಿ ಸರ್ಕಾರಿ/ಸಾರ್ವಜನಿಕ ವಲಯದಲ್ಲಿ ಉದ್ಯೋಗ ಕ್ಷೀಣಿಸುತ್ತಿದೆ. ಇಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿಯಾಗಿವೆ. ಖಾಲಿ ಇರುವ ಹುದ್ದೆಗಳ ನೇಮಕಾತಿ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗುತ್ತಿಲ್ಲ. ಹೀಗಾಗಿ, ಮೀಸಲಾತಿ ಎಂಬುದು ಕ್ರಮೇಣ ತನ್ನ ಮಹತ್ವ ಕಳೆದುಕೊಳ್ಳುತ್ತಿದೆ.

ಖಾಸಗಿ ವಲಯದ ಸಂಸ್ಥೆಗಳು ಮಾಡಿಕೊಳ್ಳುವ ಉದ್ಯೋಗ ನೇಮಕಾತಿಗಳಲ್ಲಿಯೂ ಮೀಸಲಾತಿ ನಿಯಮ ಜಾರಿಗೆ ತರಬೇಕು ಎಂಬುದು ಕಾರ್ಮಿಕ ಸಂಘಟನೆಗಳ ಬೇಡಿಕೆಯಾಗಿದೆ. ಆದರೆ, ರಾಜ್ಯ ಸರ್ಕಾರ ಇದಕ್ಕೆ ಮುಂದಾಗುತ್ತಿಲ್ಲ. ಖಾಯಂ ಮತ್ತು ಸಮರ್ಪಕ ಉದ್ಯೋಗ ಎಂಬುದು ಕಾರ್ಮಿಕರ ಕನಸು. ಆದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳು ಕಾರ್ಮಿಕರ ಕನಸುಗಳನ್ನು ಭಗ್ನ ಮಾಡತೊಡಗಿವೆ. ಇಂದು ಎಲ್ಲೆಡೆ ಗುತ್ತಿಗೆ ಪದ್ಧತಿ ಎಂಬುದು ಸಾಂಕ್ರಾಮಿಕವಾಗಿ ಹರಡುತ್ತಿದೆ. ಸರ್ಕಾರಿ ವಲಯದಲ್ಲಿ, ಸಾರ್ವಜನಿಕ ಉದ್ಯಮ ವಲಯದಲ್ಲಿ ಗುತ್ತಿಗೆ ಕಾರ್ಮಿಕರ ಸಂಖ್ಯೆ ಕಾಯಂ ಕಾರ್ಮಿಕರ ಸಂಖ್ಯೆಗಿಂತ ಹೆಚ್ಚುತ್ತಿದೆ. 1970ರ ಗುತ್ತಿಗೆ ಕಾಯಿದೆಯಲ್ಲಿ ಶಾಶ್ವತ ಸ್ವರೂಪದ ಕಾಮಗಾರಿಗಳಿಗೆ ಗುತ್ತಿಗೆ ವ್ಯವಸ್ಥೆ ಇರಬಾರದು ಎಂದು ಹೇಳಲಾಗಿದೆ. ಇದನ್ನು ಉಲ್ಲಂಘಿಸುವ ಯಾವುದೇ ಕಾರ್ಪೊರೇಟ್ ಸಂಸ್ಥೆ, ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳುವ ಹಕ್ಕು ಸರ್ಕಾರಕ್ಕಿದೆ. ಅಥವಾ, 20 ಅಥವಾ ಅದಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರು ಕಾನೂನು ಬದ್ಧವಾಗಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಈ ಗುತ್ತಿಗೆ ಕಾರ್ಮಿಕರಿಗೂ ಪಿಎಫ್, ಇಎಸ್ಐ, ಬೋನಸ್‌ನಂತಹ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಬೇಕು.

ನಮ್ಮ ರಾಜ್ಯದಲ್ಲಿ ಮಾನವ ಸಂಪನ್ಮೂಲವಿದೆ. ನೈಸರ್ಗಿಕ ಸಂಪನ್ಮೂಲಗಳಿವೆ. ಆದರೆ, ಅವುಗಳನ್ನು ಸಂಪೂರ್ಣವಾಗಿ ರಾಜ್ಯದ ಪ್ರಗತಿಗೆ ಬಳಸುತ್ತೇವೆಯೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಇಲ್ಲಿನ ಜನಸಂಖ್ಯೆಯಲ್ಲಿ ಯುವಜನತೆ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಎಲ್ಲರಿಗೂ ಸರಿಯಾದ, ವೈಜ್ಞಾನಿಕ ಶಿಕ್ಷಣ ಪಡೆಯಲು ಅವಕಾಶವಿಲ್ಲ. 1990 ರ ದಶಕದಲ್ಲಿ ಜಾರಿಗೆ ಬಂದ ನವ–ಉದಾರವಾದಿ ನೀತಿಗಳಿಂದಾಗಿ ಶಿಕ್ಷಣ, ವೈದ್ಯಕೀಯ, ಸಾರಿಗೆ, ದೂರಸಂಪರ್ಕ, ಹಣಕಾಸು ಇತ್ಯಾದಿಗಳಲ್ಲಿ ಖಾಸಗಿ ವಲಯವು ವ್ಯಾಪಕವಾಗಿ ಹರಡಿಹೋಗಿದೆ. ವರ್ಷದಲ್ಲಿ 240 ದಿನ ಕೆಲಸ ಮಾಡಿದರೆ ಖಾಯಂ ಮಾಡಬೇಕೆಂಬ ಕಾನೂನನ್ನು ಆಳುವ ವರ್ಗಗಳು ನಿರ್ಲಕ್ಷಿಸುತ್ತಲೇ ಇವೆ. ಅಪ್ರೆಂಟಿಸ್ ಗಳಿಗೆ ಎನ್ಇಎಂ (ರಾಷ್ಟ್ರೀಯ ಉದ್ಯೋಗ ಅಭಿವೃದ್ಧಿ ಕಾರ್ಯಕ್ರಮ) ಮೂಲಕ ಉತ್ಪಾದನಾ ವಲಯದಲ್ಲಿ ಕೆಲಸ ಮಾಡಲು ಅವಕಾಶ ನೀಡಲಾಗುತ್ತದೆ.

ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಅವಲಂಬಿಸಿರುವ ಕಾರ್ಮಿಕರಿಗೆ ಭವಿಷ್ಯ ಉಳಿತಾಯ ನಿಧಿ, ಪಿಎಫ್ ಸೌಲಭ್ಯ, ಪಿಂಚಣಿ ಸೌಲಭ್ಯ ಇತ್ಯಾದಿ ಸಾಮಾಜಿಕ ಭದ್ರತಾ ಯೋಜನೆಗಳಿವೆ. ಕೇಂದ್ರ ಸರ್ಕಾರವು ತನ್ನ ನಾಲ್ಕು ಕಾರ್ಮಿಕ ಸಂಹಿತೆಯ ಕಾನೂನುಗಳ ಮೂಲಕ, ಕಂಪನಿ ಆಡಳಿತ ಮತ್ತು ಕಾರ್ಮಿಕರು ಬಯಸಿದಲ್ಲಿ ಪಿಎಫ್ ಮತ್ತು ಇಎಸ್ಐ ಯೋಜನೆಗಳಿಂದ ಹೊರಗುಳಿಯಲು ಅನುಮತಿಸುವ ಷರತ್ತುಗಳನ್ನು ರೂಪಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳಿಂದಾಗಿ ಕಾರ್ಮಿಕರು ಹೋರಾಟ ಮಾಡಿ ಗಳಿಸಿದ ಸಾಮಾಜಿಕ ಭದ್ರತಾ ಯೋಜನೆಗಳು ಉಳಿಯುತ್ತವೆಯೇ ಎಂಬ ಪ್ರಶ್ನೆ ಈಗ ಉದ್ಭವಿಸಿದೆ. ಇವುಗಳನ್ನು ಉಳಿಸಿಕೊಳ್ಳಲು, ಮತ್ತಷ್ಟು ಗಳಿಸಿಕೊಳ್ಳಲು ಕಾರ್ಮಿಕರು ದಿಟ್ಟ ಹೋರಾಟ ನಡೆಸಬೇಕಿದೆ. ●



ಕೇವಲ ಕಣ್ಣೊರೆಸುವ ಸಾಮಾಜಿಕ ನ್ಯಾಯ: ಕೆ.ಮಹಂತೇಶ್

ಸರ್ಕಾರದ ವಿವಿಧ ಇಲಾಖೆ ನಿಗಮ ಮಂಡಳಿ ವಿಶ್ವವಿದ್ಯಾಲಯ ಇತ್ಯಾದಿಗಳಲ್ಲಿ ಹೊರಗುತ್ತಿಗೆ ನೇಮಕದಲ್ಲಿ ಮೀಸಲಾತಿ ಜಾರಿಗೊಳಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಸ್ವಾಗತಾರ್ಹ ಕ್ರಮ ಎಂದಿರುವ ಸಿಐಟಿಯುನ ಮುಖಂಡರಾದ ಕೆ.ಮಹಂತೇಶ್ ಅವರು, 'ಈ ಅಧಿಸೂಚನೆ ಆದೇಶವು ಹೊರಗುತ್ತಿಗೆ ನೇಮಕಾತಿ ಮೇಲೆ ನೇಮಕವಾದವರಿಗೆ ಯಾವುದೇ ಕಾರಣಕ್ಕೂ ಖಾಯಂ ಆಗುವ ಅರ್ಹತೆ ಇರುವುದಿಲ್ಲ ಎಂದು ಹೇಳುತ್ತದೆ. ಈ ರೀತಿ ಮೀಸಲಾತಿ ಅಡಿಯಲ್ಲಿ ನೇಮಕವಾಗುವ ನೌಕರರ ಅವಧಿ ಬಹುತೇಕ ಕೇವಲ 11 ತಿಂಗಳಾಗಿರುತ್ತೆ. ಬಳಿಕ ಗುತ್ತಿಗೆದಾರರು ಬೇರೆಯವರನ್ನು ನೇಮಿಸಬಹುದು. ಅಂದರೆ ಮೀಸಲಾತಿ ಅಡಿಯಲ್ಲಿ ನೇಮಕವಾಗುವ ಹೊರಗುತ್ತಿಗೆ ನೌಕರರಿಗೆ ಸಾಮಾಜಿಕ ನ್ಯಾಯ ಒಂದು ವರ್ಷಕ್ಕೆ ಸೀಮೀತವಾಗುವುದಾದರೆ, ಹೊರ ಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀಡುವ ಉದ್ದೇಶವಾದರೂ ಏನು? ಇದರಲ್ಲಿ ಸಾಮಾಜಿಕ ನ್ಯಾಯಕ್ಕೆ ಯಾವ ಅರ್ಥವಿದೆ? ಸರ್ಕಾರ ಹೊರಗುತ್ತಿಗೆ ಎನ್ನುವ ವ್ಯವಸ್ಥೆಯನ್ನು ಶಾಶ್ವತಗೊಳಿಸಲು ಹೊರಟಿದೆಯೇ? ಈ ಮೂಲಕ ರಾಜ್ಯ ಸರ್ಕಾರ ಒಂದು ಕಡೆ ಸಾಮಾಜಿಕ ನ್ಯಾಯ ನೀಡಲು ಮುಂದಾಗಿ, ಮತ್ತೊಂದು ಕಡೆ ಸಾಮಾಜಿಕ ನ್ಯಾಯ ಹಾಗೂ ಬದುಕುವ ಘನತೆಯ ಹಕ್ಕನ್ನು ಸಂಪೂರ್ಣವಾಗಿ ಕಸಿದುಕೊಂಡಿದೆ. ಮನುಷ್ಯನ ಅಗತ್ಯ ಮೂಲಭೂತ ಹಕ್ಕನ್ನು ನಿರಾಕರಿಸಿ, ಈ ಅಧಿಸೂಚನೆಯಡಿಯಲ್ಲಿ ನೇಮಕವಾಗುವ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಮಹಿಳೆಯರು ಮತ್ತು ವಿಶೇಷ ಚೇತನರರ ಬದುಕನ್ನು ಅತಂತ್ರಗೊಳಿಸುವ ಹುನ್ನಾರವಲ್ಲದೆ ಮತ್ತೇನೋ ಅಲ್ಲ. ಇದು ಕೇವಲ ಕಣ್ಣೊರೆಸುವ ಸಾಮಾಜಿಕ ನ್ಯಾಯ' ಎಂದು ಆರೋಪಿಸುತ್ತಾರೆ.

ನಿಜವಾಗಿಯೂ ಸಾಮಾಜಿಕ ನ್ಯಾಯ ದೊರೆಯಬೇಕಾದರೆ ಸಮಾನ ಕೆಲಸಕ್ಕೆ ಸಮಾನ ವೇತನ ಖಾತ್ರಿಪಡಿಸಬೇಕಿತ್ತು. ಇದನ್ನು ಸರ್ವೋಚ್ಚ ನ್ಯಾಯಾಲಯವು ಒತ್ತಿ ಹೇಳಿದೆ. ಆದರೆ ಮೀಸಲಾತಿ ಆಧಾರದಲ್ಲಿ ನೇಮಕವಾಗುವ ಹೊರಗುತ್ತಿಗೆ ನೌಕರರಿಗೆ ಅದು ಅನ್ವಯಿಸುವುದಿಲ್ಲ. ಖಾಲಿ ಇರುವ 2.73 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿದರೆ ನಿಜವಾಗಿಯೂ ಸಾಮಾಜಿಕ ನ್ಯಾಯ ಎತ್ತಿ ಹಿಡಿದಂತಾಗುತ್ತದೆ. ಈ ಮೀಸಲಾತಿಯ ಆಧಾರದಲ್ಲಿ ನೇಮಕ ಹೊಂದಿದವರು ಆ ಹುದ್ದೆಗಳಲ್ಲಿ ನಿರಂತರವಾಗಿ ಮುಂದುವರೆಯಲು ಮತ್ತು ಕನಿಷ್ಟ 5 ವರ್ಷ ಸೇವಾವಧಿ ಪೂರೈಸಿದವರಿಗೆ ಖಾಯಂ ಹುದ್ದೆಗಳ ನೇಮಕಾತಿಯಲ್ಲಿ ಮೀಸಲಾತಿ(ಕೃಪಾಂಕ) ನೀಡಬೇಕು. ಕನಿಷ್ಟ 10 ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಬೇಕು. ಅಲ್ಲಿಯವರಿಗೆ ಸುಪ್ರೀಂಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಖಾತ್ರಿಪಡಿಸಬೇಕು ಎನ್ನುವ ಸಾಮಾಜಿಕ ಒತ್ತಡವನ್ನು ನಾವು ಜನಚಳವಳಿ ಮೂಲಕ ರೂಪಿಸಬೇಕಿದೆ ಎನ್ನುತ್ತಾರೆ ಮಹಂತೇಶ್ ಅವರು.

ಕಪಟತನದ ಪ್ರತಿರೂಪ ಆರ್‌ಎಸ್‌ಎಸ್

ಬಿಜೆಪಿ ಸೋತರೂ ತನ್ನ ಹಿಂದುತ್ವ ಅಜೆಂಡಾವನ್ನು ಮುಂದುವರಿಸಲು ಆರ್‌ಎಸ್‌ಎಸ್ ಪ್ಲಾನ್–ಬಿ ಅನ್ನು ರೂಪಿಸಿದೆ

ಪ್ರಸ್ತುತ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆಯಲ್ಲಿ ದೇಶಾದ್ಯಂತ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಿಗೆ ಎದುರಾಗಿ ಬಲವಾದ ಬಿರುಗಾಳಿ ಬೀಸುತ್ತಿದೆ. ಆ ಬಿರುಗಾಳಿಗೆ ತಾವು ಕೊಚ್ಚಿಕೊಂಡು ಹೋಗುತ್ತೇವೆ ಎಂಬ ಭಯ ಅವರಲ್ಲಿ ಕಾಡುತ್ತಿದೆ. ಮೋದಿ ತಂಡ ಮೇಲ್ನೋಟಕ್ಕೆ ಗಾಂಭೀರ್ಯ ಮುಖಭಾವ ಪ್ರದರ್ಶಿಸುತ್ತಿದ್ದಾರೆ, ಆದರೆ ಒಳಗೊಳಗೆ ಮೋದಿ ಅಂಡ್ ಕಂಪನಿಯಲ್ಲಿ ಭಯ ಆವರಿಸಿದೆ. ಚುನಾವಣಾ ಮತದಾನದ ಒಂದೊಂದೇ ಹಂತಗಳು ಮುಗಿಯುತ್ತಿದ್ದಂತೆ ಪ್ರಚಾರ ಸಭೆಗಳಲ್ಲಿ ಮತ್ತೆ ಮತ್ತೆ ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸುವ ಮಾತುಗಳನ್ನು ಪದೇ ಪದೇ ಆಡತೊಡಗಿದ್ದಾರೆ ಮತ್ತು ಪ್ರತಿಪಕ್ಷಗಳ ವಿರುದ್ಧ ಸುಳ್ಳು ವದಂತಿಗಳನ್ನು ಹರಡುತ್ತಿದ್ದಾರೆ. ಈ ಕೆಲಸದಲ್ಲಿ ಸ್ವತಃ ಮೋದಿಯವರು ಮುಂಚೂಣಿಯಲ್ಲಿದ್ದಾರೆ. ಆದರೆ, ಇದರಿಂದ ಬಿಜೆಪಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ.

ಈ ಪರಿಸ್ಥಿತಿಯಲ್ಲಿ ಒಂದು ಹೊಸ ಪ್ರಚಾರ ಮುನ್ನೆಲೆಗೆ ಬರುತ್ತಿದೆ. ಮೋದಿ ತಂಡ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ನ ನಾಯಕತ್ವದ ನಡುವೆ ಭಿನ್ನಾಭಿಪ್ರಾಯ ಹೆಚ್ಚುತ್ತಿದೆ ಎಂಬುದು ಆ ಪ್ರಚಾರದ ಸಾರಾಂಶ. ಈ ಬಾರಿ ಮೋದಿಯವರು ಕೇಳುತ್ತಿರುವ 400 ಸ್ಥಾನಗಳನ್ನಲ್ಲ, ಅವರು ಹೇಗೆ ಬಹುಮತ ಪಡೆಯುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ ಎಂದು ಎರಡನೇ ಶ್ರೇಯಾಂಕದ ಆರ್‌ಎಸ್‌ಎಸ್ ನಾಯಕರೊಬ್ಬರು ಪತ್ರಿಕಾಗೋಷ್ಠಿಯಲ್ಲಿ ಸವಾಲು ಹಾಕಿರುವ ವಿಡಿಯೋ ವೈರಲ್ ಆಗುತ್ತಿದೆ. ಆರ್‌ಎಸ್‌ಎಸ್ ಅನ್ನು ಮರೆತು ಮೋದಿಯವರು ತಮ್ಮ ಸ್ವಂತ ಇಮೇಜನ್ನು ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ, ರಾಮಮಂದಿರ ಉದ್ಘಾಟನೆಗೂ ಕೂಡಾ ಆರ್‌ಎಸ್‌ಎಸ್ ಮುಖಂಡರನ್ನು ಆಹ್ವಾನಿಸಿಲ್ಲ, ಅವರನ್ನು ಗೌರವಿಸಲಿಲ್ಲ ಹೀಗೆ ಪ್ರಚಾರ ನಡೆಯುತ್ತಿದೆ.

ಈ ಪ್ರಚಾರ ಕೂಡಾ ಆರೆಸ್ಸೆಸ್ ಕಾರ್ಯತಂತ್ರದ ಒಂದು ಭಾಗವೇ ಆಗಿದೆ. ಕುಖ್ಯಾತಿ ಪಡೆದು, ಜನರ ನಡುವೆ ಕೆಟ್ಟ ಹೆಸರು ಬಂದು ಚುನಾವಣೆಯಲ್ಲಿ ಸೋಲು ಅನುಭವಿಸಿದರೆ, ಅದನ್ನೆಲ್ಲಾ ಮೋದಿ ತಂಡದ ಮೇಲೆ ಹೊರಿಸಬೇಕೇ ಹೊರತು ಆ ಪಾಪವನ್ನು ಆರ್‌ಎಸ್‌ಎಸ್ ಮೇಲೆ ಹೊರಿಸಬಾರದು ಎಂಬುದು ಆರ್‌ಎಸ್‌ಎಸ್‌ನ ನೀತಿ. ಈ ಬಾರಿ ಒಂದು ವೇಳೆ ಮೋದಿ ಸೋತರೂ ಸಹ, ಇನ್ನೂ ಸರ್ಕಾರಿ ಯಂತ್ರಗಳ ಹಲವಾರು ಸಾಂವಿಧಾನಿಕ, ಸಂವಿಧಾನೇತರ ವ್ಯವಸ್ಥೆಗಳಲ್ಲೂ ಆರ್‌ಎಸ್‌ಎಸ್ ತೂರಿಕೊಂಡು ಆಳವಾಗಿ ತನ್ನ ಜಾಲವನ್ನು ಹೊಂದಿದೆ. ಎನ್‌ಡಿಎಗೆ ಪರ್ಯಾಯವಾಗಿ ಮತ್ತೊಂದು ಸರ್ಕಾರ ಬಂದರೂ, ಅದರ ಪಾಲುದಾರರಲ್ಲಿ ಮೋದಿ ವಿರುದ್ಧ ಇದ್ದರೂ, ಆರ್‌ಎಸ್‌ಎಸ್ ನ ಹಿಂದುತ್ವದ ಬಗ್ಗೆ ಸಹಾನುಭೂತಿ, ಮೃದುಧೋರಣೆ ತೋರುವವರಿದ್ದಾರೆ. ಹಾಗಾಗಿ, ಕಾರ್ಯತಂತ್ರದ ಭಾಗವಾಗಿ ಒಂದು ಹೆಜ್ಜೆ ಹಿಂದೆ ಸರಿದಂತೆ ನಟಿಸಿ, ತನ್ನ ಹಿಂದುತ್ವ ಅಜೆಂಡಾವನ್ನು ಮುಂದುವರಿಸಲು ಆರ್‌ಎಸ್‌ಎಸ್ ಪ್ಲಾನ್–ಬಿ ಅನ್ನು ರೂಪಿಸಿದೆ ಎಂದು ತೋರುತ್ತದೆ.

ಆರ್‌ಎಸ್‌ಎಸ್‌ಗೆ ಹೊಸದೇನಲ್ಲ

ಇದೇನೂ ಆರ್‌ಎಸ್‌ಎಸ್‌ಗೆ ಹೊಸದಲ್ಲ. ಆ ಸಂಘ ಕಪಟತನದಿಂದಲೇ ಹುಟ್ಟಿದ್ದು. ಸಾವರ್ಕರ್ ಅಂಡಮಾನ್ ಜೈಲಿನಲ್ಲಿದ್ದಾಗ ಕ್ಷಮೆಯಾಚನೆಗಾಗಿ ಬರೆದ ಪತ್ರಗಳು, ಅದರಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತಗಾರರಿಗೆ ಅವರು ತೋರಿದ ರಾಜಭಕ್ತಿ ಈ ಕಪಟತನಕ್ಕೆ ಮೊದಲ ಉದಾಹರಣೆಯಾಗಿದೆ. ಜನರಲ್ಲಿ ಸ್ವಾತಂತ್ರ್ಯದ ಹಂಬಲ ಇದ್ದುದರಿಂದ ಅವರು ಮೊದಲು ಸ್ವಾತಂತ್ರ್ಯ ಹೋರಾಟದ ಕ್ಷೇತ್ರಕ್ಕೆ ಪ್ರವೇಶಿಸಿದರು. ಬಂಧನವನ್ನು ಅನುಭವಿಸಿ ಹೊರ ಬಂದ ಸಾವರ್ಕರ್ ನಂತರ ವಸಾಹತುಶಾಹಿ ದೊರೆಗಳಿಗೆ ಸೇವಕರಾದರು. ಆರ್‌ಎಸ್‌ಎಸ್‌ನ ಮೂಲ ಸಂಸ್ಥಾಪಕ ಮತ್ತು ಸಿದ್ಧಾಂತವಾದಿ ಎಂದು ಪರಿಗಣಿಸಲ್ಪಟ್ಟಿರುವ ಸಾವರ್ಕರ್ ತೋರಿದ ಬೂಟಾಟಿಕೆ ಆರ್‌ಎಸ್‌ಎಸ್ ಸಂಘಟನೆಯ ನರನಾಡಿಗಳಲ್ಲಿ ಬೆರೆತುಹೋಗಿದೆ.

ಮುಸ್ಲಿಂ ಲೀಗ್ ಜೊತೆಗೆ ಅಧಿಕಾರ ಹಂಚಿಕೊಂಡಿತ್ತು

ಜನರಲ್ಲಿ ಮುಸ್ಲಿಮರ ವಿರುದ್ಧ ವಿಷಪೂರಿತ ಪ್ರಚಾರವನ್ನು ಹರಡಿದ ಸಂಘಪರಿವಾರ, ಸಿಂದ್ ಮತ್ತು ಬಂಗಾಳದ ಪ್ರಾಂತೀಯ ಸರ್ಕಾರಗಳಲ್ಲಿ (Provincial Government) 1946 ರಲ್ಲಿ ಮುಸ್ಲಿಂ ಲೀಗ್ ಜೊತೆಗೆ ಅಧಿಕಾರವನ್ನು ಹಂಚಿಕೊಂಡ ಹಿಂದೂ ಮಹಾಸಭಾ ಸಮ್ಮಿಶ್ರ ಸರ್ಕಾರಗಳನ್ನು ರಚಿಸಿತು.

ಅಖಂಡ ಭಾರತದ ಬಗ್ಗೆ ಪ್ರಚಾರ ಮಾಡಿ ಅಫ್ಘಾನಿಸ್ತಾನದಿಂದ ಬರ್ಮಾದವರೆಗೆ ಇರುವ ಇಡೀ ಉಪಖಂಡ ಎಂದಿಗೂ ಹಿಂದೂ ದೇಶ ಎಂದು ಸುಳ್ಳು ಪ್ರಚಾರ ಮಾಡುವುದು ಆರ್‌ಎಸ್‌ಎಸ್ ನೀತಿಯಾಗಿದೆ. ಆದರೆ ಮುಸ್ಲಿಮ್ ಲೀಗ್ ನಂತೆ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಬಲಪಡಿಸಿ ದೇಶದ ವಿಭಜನೆಗೆ ಕೊಡುಗೆ ನೀಡಿತು.

ದೇಶದ ವಿಭಜನೆಯ ನಂತರ, ಆರ್‌ಎಸ್‌ಎಸ್ ದೇಶಾದ್ಯಂತ ಕೋಮುಗಲಭೆಗಳಿಗೆ ತೊಡಗಿಕೊಂಡಿತು. ಮಹಾತ್ಮ ಗಾಂಧಿ ನಿರಶನ ದೀಕ್ಷೆಯನ್ನು ಕೈಗೊಂಡು ಜನರಲ್ಲಿ ಸಾಮರಸ್ಯ ನೆಲೆಸುವಂತೆ ಮನವಿ ಮಾಡಿದಾಗ, ಇದಕ್ಕೆ ದೇಶದೆಲ್ಲೆಡೆಯಿಂದ ಬಂದ ಸ್ಪಂದನೆ ಕಂಡು ಸಂಘಪರಿವಾರದ ಮುಖಂಡರು ಗಾಂಧೀಜಿ ಬಳಿ ತೆರಳಿ ನಿರಸನಕ್ಕೆ ಬೆಂಬಲ ಘೋಷಿಸಿದರು.

ಸಾವರ್ಕರ್ ಗೂ, ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ ಎಂದರು

ಕೆಲವೇ ದಿನಗಳಲ್ಲಿ ಎಲ್ಲವೂ ಇತ್ಯರ್ಥವಾಯ್ತು ಅಂದುಕೊಳ್ಳುತ್ತಿರುವಾಗಲೇ ಗಾಂಧೀಜಿಯವರ ಹತ್ಯೆ ಮಾಡಿದರು. ಈ ಷಡ್ಯಂತ್ರದ ಹಿಂದೆ ಸಾವರ್ಕರ್ ಅವರ ಕೈವಾಡ ಇರುವುದು ಸ್ಪಷ್ಟವಾಗಿದೆ. ತಕ್ಷಣ ಆರೆಸ್ಸೆಸ್ ತಮ್ಮ ಸಂಘಟನೆಗೂ ಗಾಂಧಿ ಹತ್ಯೆಗೂ ಸಂಬಂಧವಿಲ್ಲ ಎಂದು... ಸಾವರ್ಕರ್ ಗೂ, ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ ಎಂದು ಘೋಷಿಸಿತು. ಕೆಟ್ಟ ಹೆಸರು ಬಂದರೆ ಗೋಡ್ಸೆಗೂ ಮತ್ತು ಸಾವರ್ಕರ್ ಗೂ ಬರಬೇಕೇ ಹೊರತು ಆ ಮಸಿ ಆರ್‌ಎಸ್‌ಎಸ್‌ಗೆ ಮೆತ್ತಿಕೊಳ್ಳಬಾರದು ಎಂಬುದು ಅವರ ನೀತಿ. ಮೋದಿ ಪ್ರಧಾನಿಯಾದ ನಂತರ ಸಾವರ್ಕರ್ ಅವರನ್ನು ಮತ್ತು ಗೋಡ್ಸೆಯನ್ನು ಆಕಾಶದೆತ್ತರ ಪ್ರಚಾರವನ್ನು ಆರಂಭಿಸಿದರು. ಅವಕಾಶವಾದವು ಆರ್‌ಎಸ್‌ಎಸ್‌ನ ತಂತ್ರವಾಗಿದೆ.

> **ಮೋದಿ ತಂಡ ಮತ್ತು ಆರ್‌ಎಸ್‌ಎಸ್ ನಾಯಕತ್ವದ ನಡುವೆ ಭಿನ್ನಾಭಿಪ್ರಾಯ ಹೆಚ್ಚುತ್ತಿದೆ ಎಂಬುದು ಆ ಪ್ರಚಾರದ ಸಾರಾಂಶ. 'ಈ ಬಾರಿ ಮೋದಿಯವರು ಕೇಳುತ್ತಿರುವ 400 ಸ್ಥಾನಗಳನ್ನಲ್ಲ, ಅವರು ಹೇಗೆ ಬಹುಮತ ಪಡೆಯುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ' ಎಂದು ಎರಡನೇ ಶ್ರೇಯಾಂಕದ ಆರ್‌ಎಸ್‌ಎಸ್ ನಾಯಕರೊಬ್ಬರು ಪತ್ರಿಕಾಗೋಷ್ಠಿಯಲ್ಲಿ ಸವಾಲು ಹಾಕಿರುವ ವಿಡಿಯೋ ವೈರಲ್ ಆಗುತ್ತಿದೆ. ಈ ಪ್ರಚಾರ ಕೂಡಾ ಆರೆಸ್ಸೆಸ್ ಕಾರ್ಯತಂತ್ರದ ಒಂದು ಭಾಗವೇ ಆಗಿದೆ. ಕುಖ್ಯಾತಿ ಪಡೆದು, ಜನರ ನಡುವೆ ಕೆಟ್ಟ ಹೆಸರು ಬಂದು ಚುನಾವಣೆಯಲ್ಲಿ ಸೋಲು ಅನುಭವಿಸಿದರೆ, ಅದನ್ನೆಲ್ಲಾ ಮೋದಿ ತಂಡದ ಮೇಲೆ ಹೊರಿಸಬೇಕೇ ಹೊರತು ಆ ಪಾಪವನ್ನು ಆರ್‌ಎಸ್‌ಎಸ್ ಮೇಲೆ ಹೊರಿಸಬಾರದು ಎಂಬುದು ಆರ್‌ಎಸ್‌ಎಸ್‌ನ ನೀತಿ.**

ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದರು

ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ 1974 ರಲ್ಲಿ ಇಂದಿರಾ ಗಾಂಧಿಯವರ ಸರ್ವಾಧಿಕಾರದ ವಿರುದ್ಧ ಚಳುವಳಿ ಪ್ರಾರಂಭವಾಯಿತು. ಭಾರತೀಯ ಜನಸಂಘ (ಈಗಿನ ಬಿಜೆಪಿಯ ಅಂದಿನ ಹೆಸರು) ಅದರಲ್ಲಿ ಪಾಲುದಾರರಾದರು. 1975ರಲ್ಲಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿ ಆರ್‌ಎಸ್‌ಎಸ್ ಅನ್ನು ನಿಷೇಧಿಸಿದರು. ತಕ್ಷಣವೇ ಆರೆಸ್ಸೆಸ್ ಮುಖ್ಯಸ್ಥ ಬಾಳಾ ಸಾಹೇಬ್ ದೇವರಸ್ ತುರ್ತು ಪರಿಸ್ಥಿತಿಗೆ ಬೆಂಬಲ ಘೋಷಿಸಿದರು. ಜೆಪಿ ಚಳವಳಿಗೂ ಆರ್‌ಎಸ್‌ಎಸ್‌ಗೂ ಯಾವುದೇ ಸಂಬಂಧವಿಲ್ಲ ಎಂದು ಘೋಷಿಸಿದರು. ಜನರು ತುರ್ತು ಪರಿಸ್ಥಿತಿಯನ್ನು ತಿರಸ್ಕರಿಸಿದ ನಂತರ, ಆರೆಸ್ಸೆಸ್ ನಾಯಕರು ಸರ್ವಾಧಿಕಾರವನ್ನು ಸೋಲಿಸಿದ್ದೇವೆ ಎಂದು ಹೇಳಿಕೊಳ್ಳಲಾರಂಭಿಸಿದರು.

ಸರ್ವಾಧಿಕಾರವನ್ನು ಸೋಲಿಸಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದ ಜನತಾ ಪಕ್ಷವನ್ನು ಇಂದಿರಾ ಗಾಂಧಿಯವರು ಮತ್ತೆ ಛಿದ್ರಗೊಳಿಸಿದರು. ಜನತಾ ಪಕ್ಷದ ವಿಘಟನೆಗೆ ಆರೆಸ್ಸೆಸ್ ಪ್ರಮುಖ ಕಾರಣ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ.

ತನಗೇನೂ ಸಂಬಂಧವಿಲ್ಲ ಎನ್ನುತ್ತದೆ

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮಾಡುತ್ತೇವೆ ಎಂದು ದೇಶ ಸುತ್ತಿದರು. ಆದರೆ ಅಲ್ಲಿ ಬಾಬರಿ ಮಸೀದಿ ಕೆಡವಲಾಯಿತು. ಅದರ ವಿರುದ್ಧ ದೇಶಾದ್ಯಂತ ವಿರೋಧ ವ್ಯಕ್ತವಾಗಿತ್ತು. ತಕ್ಷಣವೇ ಆರ್‌ಎಸ್‌ಎಸ್ ತಮಗೂ, ಮಸೀದಿ ಧ್ವಂಸಕ್ಕೂ ಸಂಬಂಧವಿಲ್ಲ ಎಂದು ಘೋಷಿಸಿತು. ಗುಜರಾತಿನಲ್ಲಿ ನಡೆದ ಮಾರಣ ಹೋಮ ವಿಚಾರದಲ್ಲೂ ಇದೇ ಧೋರಣೆ ತಳೆದಿದೆ. ಇಡೀ ಜಗತ್ತು ಅಂದು (2002ರಲ್ಲಿ) ಮೋದಿ ನೇತೃತ್ವದ ಗುಜರಾತ್ ಸರಕಾರವನ್ನು ಖಂಡಿಸಿದಂತೆ ವಾಜಪೇಯಿ ಕೂಡಾ ಖಂಡಿಸಿದರು. ಆದರೆ ಅಂದಿನ ಮೋದಿ ಸರಕಾರಕ್ಕೆ ದಕ್ಕೆಯಾಗದಂತೆ ಅವರು ನೋಡಿಕೊಂಡರು. ಈಗಲೂ ಅವರದು ಅದೇ ವೈಖರಿ. ದೇಶದಲ್ಲಿ ಯಾವುದೇ ಯಶಸ್ಸು ಸಾಧಿಸಿದರೆ ಆ ಕೀರ್ತಿಯೆಲ್ಲವನ್ನೂ ಅವರ ಲೆಕ್ಕಕ್ಕೆ ಸೇರಿಸಿಕೊಳ್ಳುತ್ತಾರೆ. ಬಿಜೆಪಿಯಾಗಲೀ ಅಥವಾ ಆರ್‌ಎಸ್‌ಎಸ್ ಆಗಿರಲಿ ಅವರು ದೇಶಕ್ಕಾಗಿ ಮಾಡಿದ್ದು ಏನೂ ಇಲ್ಲ. ಆದರೆ ಎಲ್ಲವೂ ತಮ್ಮ ಸಾಧನೆ ಎನ್ನುತ್ತಾರೆ. ಅದೇ ಬಡತನ, ಭ್ರಷ್ಟಾಚಾರ, ನಿರುದ್ಯೋಗ, ಹಸಿವು ಮುಂತಾದ ವಿಷಯಗಳ ಬಗ್ಗೆ ಮಾತನಾಡಿದರೆ, ಆ ಪಾಪಗಳೆಲ್ಲಾ 2014 ರ ಮೊದಲು ಆಳಿದವರದು ಎನ್ನುತ್ತಾರೆ.

ಪ್ರತಿ ಬಾರಿ ಜನರು ಸತ್ಯವನ್ನು ಅರಿತು ಪ್ರತಿಕ್ರಿಯಿಸಿದಾಗ, ಪ್ರತಿ ಸಂದರ್ಭದಲ್ಲೂ ಆರ್‌ಎಸ್‌ಎಸ್ ಕೆಲವು ಅನುಯಾಯಿಗಳನ್ನು ಗುರುತಿಸಿ ಅವರನ್ನು ಬಲಿಪಶುಗಳನ್ನಾಗಿ ಮಾಡುತ್ತದೆ. ತಾನು ತಪ್ಪಿಸಿಕೊಳ್ಳುತ್ತದೆ. ಅದಕ್ಕೂ ತನಗೂ ಏನೂ ಸಂಬಂಧವಿಲ್ಲ ಎನ್ನುತ್ತದೆ. ಮತ್ತೆ ಜನರನ್ನು ತನ್ನ ಹಿಂದುತ್ವದ ಮಾಯಾಜಾಲಕ್ಕೆ ಸಿಲುಕಿಸಿ ತನ್ನ ವಿಶ್ವರೂಪವನ್ನು ಪ್ರದರ್ಶಿಸುತ್ತದೆ.

ವಾಜಪೇಯಿ ಪ್ರಧಾನಿಯಾಗಿದ್ದಾಗ, ಈಗ ಮೋದಿ ಪ್ರಧಾನಿಯಾಗಿರುವಾಗ ಅವರ ಅಧಿಕಾರಾವಧಿಯಲ್ಲಿ ಸಂಘಪರಿವಾರದ ಅಜೆಂಡಾವನ್ನು ಎಷ್ಟು ಸಾಧ್ಯವೋ ಅಷ್ಟು ಜಾರಿಗೆ ತರಲಾಯಿತು. ಆ ಕಾರ್ಯಸೂಚಿಯ ಅನುಷ್ಠಾನದಲ್ಲಿ ಆರೆಸ್ಸೆಸ್ ಸಂಪೂರ್ಣ ಏಕತೆಯನ್ನು ಹೊಂದಿದೆ. ಕಾರ್ಪೊರೇಟ್‌ಗಳಿಗೆ ಲೂಟಿ ಮಾಡಲು ಅನುಕೂಲ ಮಾಡಿಕೊಡುವುದೇ ಆರ್‌ಎಸ್‌ಎಸ್‌ನ ನೀತಿಯಾಗಿದೆ. ನಿರಂಕುಶಾಧಿಕಾರವೇ ಆರೆಸ್ಸೆಸ್ ನೀತಿ. ಮೋದಿಗೆ ಬೇರೆ ಅಜೆಂಡಾ ಇಲ್ಲ.

ಈಗ ಮೋದಿ ಸರ್ಕಾರದ ವಿರುದ್ಧ ಗಾಳಿ ಬೀಸುತ್ತಿದೆ. ಆ ಗಾಳಿಗೆ ಕೊಚ್ಚಿಕೊಂಡು ಹೋದರೆ ಮೋದಿ ತಂಡ ಹೋಗಲಿ ವಿನಃ ಆರೆಸ್ಸೆಸ್ ಸಂಘಟನೆಗೆ ಮಾತ್ರ ಧಕ್ಕೆಯಾಗಬಾರದು. ಅದಕ್ಕಾಗಿ ಅಗತ್ಯ ಬಿದ್ದರೆ ಮೋದಿಯನ್ನು ದೂರ ಇಡುತ್ತಾರೆ. ತಾವು ಮಾತ್ರ ಪವಿತ್ರರು ಎಂಬಂತೆ ವೇಷ ಧರಿಸುತ್ತಾರೆ.



ಎಂ.ವಿ.ಎಸ್. ಶರ್ಮಾ

–ಕೃಪೆ: ಪ್ರಜಾಶಕ್ತಿ (ಅನು:ಸಿಚಿ)

> **ಈಗ ಮೋದಿ ಸರ್ಕಾರದ ವಿರುದ್ಧ ಗಾಳಿ ಬೀಸುತ್ತಿದೆ. ಆ ಗಾಳಿಗೆ ಕೊಚ್ಚಿಕೊಂಡು ಹೋದರೆ ಮೋದಿ ತಂಡ ಹೋಗಲಿ ವಿನಃ ಆರ್ ಎಸ್ ಎಸ್ ಸಂಘಟನೆಗೆ ಮಾತ್ರ ಧಕ್ಕೆಯಾಗಬಾರದು. ಅದಕ್ಕಾಗಿ ಅಗತ್ಯ ಬಿದ್ದರೆ ಮೋದಿಯನ್ನು ದೂರ ಇಡುತ್ತಾರೆ. ತಾವು ಮಾತ್ರ ಪವಿತ್ರರು ಎಂಬಂತೆ ವೇಷ ಧರಿಸುತ್ತಾರೆ.**



ಇಸ್ರೇಲಿ ಆಡಳಿತಗಾರರನ್ನು ಯುದ್ಧಾಪರಾಧಗಳಿಗೆ ಹೊಣೆ ಮಾಡಿ

ಪ್ರಕಾಶ್ ಕಾರತ್

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು, ರಕ್ಷಣಾ ಸಚಿವ ಯೊಯಾವ್ ಗ್ಯಾಲಂಟ್ ಅಲ್ಲದೆ ಇಸ್ಮಾಯಿಲ್ ಹನಿಯೆವ್ ಸಹಿತ ಹಮಾಸ್‌ನ ಮೂವರು ನಾಯಕರ ವಿರುದ್ಧ ಬಂಧನ ವಾರಂಟ್ ಹೊರಡಿಸುವಂತೆ ಅಂತಾರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ನ (ಐಸಿಸಿ) ಚೀಫ್ ಪ್ರಾಸಿಕ್ಯೂಟರ್ ಕರೀಂ ಖಾನ್ ಆಗ್ರಹಿಸಿದ್ದಾರೆ. ಗಾಜಾ ಮೇಲೆ ಏಳು ತಿಂಗಳಿಂದ ನಡೆಸುತ್ತಿರುವ ಯುದ್ಧದಲ್ಲಿ ಇಸ್ರೇಲಿ ಪ್ರಧಾನಿ ಹಾಗೂ ರಕ್ಷಣಾ ಮಂತ್ರಿಯು ಮಾನವತೆ ವಿರುದ್ಧ ಅಪರಾಧ ಹಾಗೂ ಯುದ್ಧಾಪರಾಧಗಳನ್ನು ನಡೆಸಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ ಎಂದು ಖಾನ್ ಹೇಳಿದ್ದಾರೆ. ಗಾಜಾದಲ್ಲಿನ ನಾಗರಿಕರು ಹಸಿವಿನಿಂದ ಬಳಲುವಂತೆ ಉದ್ದೇಶಪೂರ್ವಕವಾಗಿ ಪ್ರಯತ್ನಿಸಲಾಗಿದೆ. ಅದರಿಂದಾಗಿ ಮಹಿಳೆಯರು, ಮಕ್ಕಳು ಮತ್ತು ಪುರುಷರು ಸಾವಿಗೀಡಾಗಿದ್ದಾರೆ ಎಂದು ಪ್ರಾಸಿಕ್ಯೂಟರ್ ಹೇಳಿದ್ದಾರೆ. ಹಮಾಸ್ ನಾಯಕರ ವಿಚಾರವಾಗಿ ಹೇಳುವುದಾದಲ್ಲಿ, ಅಕ್ಟೋಬರ್ 7ರ ಆಕ್ರಮಣದ ಸಂದರ್ಭ ಇಸ್ರೇಲ್‌ನ ನಾಗರಿಕರ ಮೇಲೆ ನಡೆದ ದೌರ್ಜನ್ಯವನ್ನು ಖಾನ್ ಉಲ್ಲೇಖಿಸಿದ್ದಾರೆ.

ಪ್ರಾಸಿಕ್ಯೂಟರ್ ಮಂಡಿಸಿರುವ ಮನವಿಯನ್ನು ಐಸಿಸಿಯ ನ್ಯಾಯಮೂರ್ತಿಗಳ ಪೀಠವೊಂದು ಅನುಮೋದಿಸಬೇಕಾಗುತ್ತದೆ. ಆದರೆ, ಪ್ರಾಸಿಕ್ಯೂಟರ್ ಮನವಿಗೆ ಐಸಿಸಿಯ ಐವರು ಪ್ರಮುಖ ಅಂತಾರಾಷ್ಟ್ರೀಯ ನ್ಯಾಯತಜ್ಞರ ತಂಡವೊಂದು ಒಮ್ಮತದಿಂದ ಬೆಂಬಲಿಸಿದೆ.

ನಿರೀಕ್ಷೆಯಂತೆಯೇ ನೇತನ್ಯಾಹು ಬಹಳ ಕೋಪದಿಂದ ಇದಕ್ಕೆ ಪ್ರತಿಕ್ರಿಯಿಸಿದ್ದಾರೆ. 'ಅದೊಂದು ಐತಿಹಾಸಿಕ ಪ್ರಮಾಣದ ನೈತಿಕ ದೌರ್ಜನ್ಯವಾಗಿದೆ' ಎಂದು ಕರೆದಿರುವ ನೇತನ್ಯಾಹು, ಕರೀಂ ಖಾನ್ 'ಆಧುನಿಕ ಯುಗದ ದೊಡ್ಡ ಯೆಹೂದಿ–ವಿರೋಧಿಯಾಗಿದ್ದಾರೆ' ಎಂದು ಜರೆದಿದ್ದಾರೆ. ಬಂಧನ ವಾರಂಟ್‌ಗಳು ಯುದ್ಧದಲ್ಲಿ ಹಸ್ತಕ್ಷೇಪ ಮಾಡುವ 'ಅವಮಾನಕರ' ಪ್ರಯತ್ನವಾಗಿದೆ ಎಂದಿದ್ದಾರೆ. ಇಸ್ರೇಲ್‌ನ ಅತಿ ದೊಡ್ಡ ಬೆಂಬಲಿಗನಾದ ಅಮೆರಿಕ ಅಧ್ಯಕ್ಷ ಜೋ ಬೈಡೆನ್, ಚೀಫ್ ಪ್ರಾಸಿಕ್ಯೂಟರ್‌ರ ಕ್ರಮ 'ಅತಿರೇಕದ್ದು' ಎಂದಿದ್ದಾರೆ. 'ಇಸ್ರೇಲ್ ಮತ್ತು ಹಮಾಸ್‌ಗಳ ನಡುವೆ ಯಾವುದೇ ಸಮಾನತೆ ಇಲ್ಲ' ಎಂದು ಹೇಳಿದ್ದಾರೆ.

ಅಂತಾರಾಷ್ಟ್ರೀಯ ನ್ಯಾಯ ಕೋರ್ಟ್‌ನಂತೆ (ಐಸಿಜೆ) ಐಸಿಸಿಯು ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯೇನೂ ಅಲ್ಲ. ಇದೊಂದು ಒಡಂಬಡಿಕೆ ಆಧಾರಿತ ಕೋರ್ಟ್ ಆಗಿದ್ದು ನರಹತ್ಯೆ ಮತ್ತು ಮಾನವತೆ ವಿರುದ್ಧದ ಅಪರಾಧಗಳಂಥ ಗಂಭೀರ ಅಪರಾಧಗಳನ್ನು ನಡೆಸುವ ವ್ಯಕ್ತಿಗಳಿಗೆ ಶಿಕ್ಷೆ ನೀಡುವ ನ್ಯಾಯಾಲಯವಾಗಿದೆ. ಐಸಿಜೆ, ವ್ಯಕ್ತಿಗಳ ವಿರುದ್ಧ ವಿಚಾರಣೆ ನಡೆಸುವುದಿಲ್ಲ. ಅದು ಸರ್ಕಾರಗಳ ವಿರುದ್ಧ ಮಾತ್ರವೇ ವಿಚಾರಣೆ ನಡೆಸುತ್ತದೆ.

ಅರಬ್, ಆಫ್ರಿಕಾ ಟಾರ್ಗೆಟ್

ಐಸಿಸಿ ಇದುವರೆಗೆ ಅಮೆರಿಕ ಮತ್ತು ಪಾಶ್ಚಾತ್ಯ ದೇಶಗಳೊಂದಿಗೆ ವೈರತ್ವ ಹೊಂದಿರುವ ಅರಬ್ ಮತ್ತು ಆಫ್ರಿಕಾ ದೇಶಗಳ ನಾಯಕರನ್ನು ಮಾತ್ರವೇ ಟಾರ್ಗೆಟ್ ಮಾಡುತ್ತಿತ್ತು. ಅದು ಕಳೆದ ವರ್ಷ, ಯೂಕ್ರೇನ್ ಮೇಲಿನ ಸಮರದಲ್ಲಿನ ಅಪರಾಧಗಳಿಗಾಗಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುತಿನ್ ವಿರುದ್ಧ ವಾರಂಟ್ ಹೊರಡಿಸಿತ್ತು. ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳ ವಿರುದ್ಧವಿರುವ ರಾಷ್ಟ್ರಗಳ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳುವವರೆಗೆ ಏನೂ ಸಮಸ್ಯೆಯಿರುವುದಿಲ್ಲ. ಅಮೆರಿಕವು ಐಸಿಸಿ ಸ್ಥಾಪನೆಯ ಒಪ್ಪಂದಕ್ಕೆ ಸಹಿ ಹಾಕಿರದಿದ್ದರೂ ಅಮೆರಿಕ ಮತ್ತು ಅದರ ಪಾಶ್ಚಾತ್ಯ ಮಿತ್ರ ದೇಶಗಳು ಐಸಿಸಿ ಕ್ರಮಗಳಿಗೆ ಬೆಂಬಲ ನೀಡುತ್ತವೆ.

ಐಸಿಸಿ ಇದೇ ಮೊದಲ ಬಾರಿಗೆ ಅಮೆರಿಕದ ಆಪ್ತ ಮಿತ್ರ ದೇಶದ ನಾಯಕರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗಿದೆ. ಹಾಗಾಗಿಯೇ ಅಮೆರಿಕದ ಆಳುವ ಕೂಟದ ಕಡೆಯಿಂದ ಪ್ರತಿಭಟನೆಯ ಕೂಗೆದ್ದಿದೆ. ರಿಪಬ್ಲಿಕನ್ ಸೆನೆಟರ್‌ಗಳ ಗುಂಪೊಂದು ಕೌಬಾಯ್ ಸ್ಟೈಲ್‌ನಲ್ಲಿ ಹೀಗೆಂದು ಘೋಷಿಸಿದೆ: 'ನೀವು ಇಸ್ರೇಲನ್ನು ಟಾರ್ಗೆಟ್ ಮಾಡಿ. ನಾವು ನಿಮ್ಮನ್ನು ಟಾರ್ಗೆಟ್ ಮಾಡುತ್ತೇವೆ. ನಿಮಗಿದು ಎಚ್ಚರಿಕೆ'. ಐಸಿಸಿಯ ಪ್ರಾಸಿಕ್ಯೂಟರ್ ಮತ್ತು ಜಡ್ಜ್‌ಗಳ ಮೇಲೆ ನಿರ್ಬಂಧ ವಿಧಿಸುವ ಮಾತೂ ಕೇಳಿ ಬರುತ್ತಿದೆ. ಐಸಿಸಿ ಕ್ರಮಕ್ಕೆ ಬ್ರಿಟನ್ ಮತ್ತು ಜರ್ಮನಿ ಅತೃಪ್ತಿ ಸೂಚಿಸಿವೆ. ಆದರೆ, ಐರೋಪ್ಯ ಒಕ್ಕೂಟದ ಸದಸ್ಯರ ಪೈಕಿ ಫ್ರಾನ್ಸ್, ಬೆಲ್ಜಿಯಂ ಮತ್ತು ಸ್ಲೋವೇನಿಯಾ ರಾಷ್ಟ್ರಗಳು ಐಸಿಸಿ ಪ್ರಾಸಿಕ್ಯೂಟರ್ ಕ್ರಮಕ್ಕೆ ಬೆಂಬಲ ದಾಖಲಿಸಿದ್ದು ಇದು ಅಮೆರಿಕ ಮತ್ತು ಇಸ್ರೇಲ್ ತಲೆಬಿಸಿಗೆ ಕಾರಣವಾಗಿದೆ.

ಬಿರುಕು ಆರಂಭ

ಗಾಜಾದಲ್ಲಿನ ಯುದ್ಧದ ಭೀಕರತೆಗಳಿಂದಾಗಿ ಪಾಶ್ಚಿಮಾತ್ಯ ದೇಶಗಳ ಒಕ್ಕೊರಲ ನಿಲವಿನಲ್ಲಿ ಈಗಾಗಲೇ ಬಿರುಕು ಕಾಣಿಸಲು ಆರಂಭವಾಗಿದೆ. ಪ್ಯಾಲೆಸ್ಟೈನ್ ದೇಶವನ್ನು ಮಾನ್ಯ ಮಾಡಲು ನಾರ್ವೆ, ಐರ್ಲೆಂಡ್ ಮತ್ತು ಸ್ಪೇಯ್ನ್ ನಿರ್ಧರಿಸಿವೆ. ಇಸ್ರೇಲ್‌ಗೆ ಶಸ್ತ್ರಾಸ್ತ್ರ ರಫ್ತಿಗೆ ಅವಕಾಶ ನೀಡದಿರಲು ಬೆಲ್ಜಿಯಂ ಮತ್ತು ಸ್ಪೇಯ್ನ್ ನಿರ್ಣಯಿಸಿವೆ.

ಈ ನಡುವೆ, ರಫಾ ನಗರದ ಪೂರ್ವ ಭಾಗವನ್ನು ತೆರೆಯುವಂತೆ ನಾಗರಿಕರಿಗೆ ನೋಟಿಸ್ ನೀಡಿರುವ ಇಸ್ರೇಲ್, ರಫಾ ನಗರದ ಮೇಲೆ ಆಕ್ರಮಣ ನಡೆಸಲು ಸಜ್ಜಾಗಿದೆ.

ಹಸಿವಿನ ಆಯುಧ

ರಫಾ ಪ್ರದೇಶದಲ್ಲಿ ಆಶ್ರಯ ಪಡೆದಿರುವ 15 ಲಕ್ಷ ಜನರ ಪೈಕಿ 8 ಲಕ್ಷಕ್ಕೂ ಅಧಿಕ ನಾಗರಿಕರು ಈಗ ಮಧ್ಯ ಗಾಜಾ ಮತ್ತಿತರ ಜಾಗಗಳಿಗೆ ಪಲಾಯನ ಮಾಡಿದ್ದಾರೆ. ಹಸಿವನ್ನು ಒಂದು ಆಯುಧವಾಗಿ ಇಸ್ರೇಲ್ ಬಳಸುತ್ತಿರುವುದು ಸ್ಪಷ್ಟವಾಗಿದೆ. ಆಹಾರ ಸರಬರಾಜಿನ ಕೊರತೆ ಮತ್ತು ಅಸುರಕ್ಷತೆಯ ಕಾರಣದಿಂದ ರಫಾ ನಗರಕ್ಕೆ ಆಹಾರ ಸರಬರಾಜನ್ನು ರದ್ದುಪಡಿಸಿರುವುದಾಗಿ ವಿಶ್ವ ಸಂಸ್ಥೆ ಮೇ 21ರಂದು ಪ್ರಕಟಿಸಿರುವುದರಿಂದ ಈ ಅಂಶ ದೃಢಪಟ್ಟಿದೆ.

ರಫಾದಲ್ಲಿ ಕಾರ್ಯಾಚರಣೆ ನಡೆಸುವಾಗ ನಾಗರಿಕರ ಪ್ರಾಣ ಹಾನಿಯಾಗದಂತೆ ನೋಡಿಕೊಳ್ಳಿ ಎಂದು ಇಸ್ರೇಲ್‌ಗೆ ಕರೆ ಕೊಟ್ಟಿರುವುದು ಅಮೆರಿಕದ ಬೂಟಾಟಿಕೆಗೆ ಸಾಕ್ಷಿಯಾಗಿದೆ. ಇಸ್ರೇಲ್ ಸೇನೆಗೆ ಮಾರಕ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಲೇ ಈ ರೀತಿ ಕರೆ ಕೊಡುವುದು ಅದರ ಇಬ್ಬಗೆ ನೀತಿಗೆ ಪುರಾವೆಯಾಗಿದೆ.

ಇಸ್ರೇಲ್‌ಗೆ 26 ಶತಕೋಟಿ ಡಾಲರ್ ಮಿಲಿಟರಿ ನೆರವಿನ ಜೋ ಬೈಡೆನ್ ಮಸೂದೆಗೆ ಅಮೆರಿಕ ಕಾಂಗ್ರೆಸ್ ಏಪ್ರಿಲ್ ಮೂರನೇ ವಾರದಲ್ಲಿ ಕೊನೆಗೂ ಅನುಮೋದನೆ ನೀಡಿದೆ. ಯುದ್ಧಾಪರಾಧಗಳಲ್ಲಿ ಅಧ್ಯಕ್ಷ ಬೈಡೆನ್ ಸಹಾಯಕರೆಂದು ಐಸಿಸಿ ಪ್ರಾಸಿಕ್ಯೂಟರ್ ಆರೋಪ ಹೊರಿಸಬೇಕಾಗುತ್ತದೆ.

ಭಾರತ ಸರಕಾರದ ಪಾತ್ರ

ಅಮೆರಿಕಕ್ಕೆ ಹೋಲಿಸಿದರೆ ಚಿಕ್ಕದೇ ಇರಬಹುದಾದರೂ ಇಸ್ರೇಲ್‌ನ ಮಿಲಿಟರಿ ಸಮರಾಪರಾಧ ನಡೆಸುವಲ್ಲಿ ಭಾರತದ ಪಾತ್ರವೂ ಇದೆ. ಕಳೆದ ವಾರ, ಚೆನ್ನೈ ಬಂದರಿನಿಂದ ಪ್ರಯಾಣ ಆರಂಭಿಸಿದ ಡೆನ್ಮಾರ್ಕ್ ಧ್ವಜದ ಸರಕು ಸಾಗಾಟ ಹಡಗಿನ ಪ್ರವೇಶಕ್ಕೆ ಸ್ಪೆಯ್ನ್ ಸರಕಾರ ಅವಕಾಶ ನಿರಾಕರಿಸಿತ್ತು. ಆ ಹಡಗು ಇಸ್ರೇಲ್‌ನ ಹಫಿಯಾ ಬಂದರಿಗೆ ಹೋಗಲಿತ್ತು. ಅದು 27 ಟನ್ ಸ್ಫೋಟಕಗಳನ್ನು ಸಾಗಿಸುತ್ತಿತ್ತು ಎಂದು ಹೇಳಲಾಗಿದೆ. ದೊಡ್ಡ ಪ್ರಮಾಣದಲ್ಲಿ ನಾಗರಿಕರ ಸಾವು ನೋವು ಸಂಭವಿಸಿದ ಇಸ್ರೇಲ್ ನ ಸಂಘರ್ಷ ವಲಯಕ್ಕೆ ಹೆಚ್ಚಿನ ಶಸ್ತ್ರಾಸ್ತ್ರಗಳು ತಲುಪುವುದನ್ನು ಸ್ಪೇಯ್ನ್ ಸರಕಾರ ಬಯಸುವುದಿಲ್ಲ. ಹೀಗಾಗಿಯೇ ಚೆನ್ನೈನಿಂದ ಹೊರಟ ನೌಕೆಯು ಕಾರ್ಟೆಜಿನಾ ಬಂದರಿನಲ್ಲಿ ಲಂಗರು ಹಾಕುವುದಕ್ಕೆ ಸ್ಪೇಯ್ನ್ ಅನುಮತಿ ನೀಡಲಿಲ್ಲ.

ಹಡಗಿನಲ್ಲಿ ಯಾವ ಬಗೆಯ ಶಸ್ತ್ರಗಳಿದ್ದವು ಹಾಗೂ ಅವುಗಳು ಎಲ್ಲಿಂದ ಬಂದವು ಎಂದು ಭಾರತ ಸರಕಾರ ವಿವರಿಸಿಲ್ಲ. ಆದರೆ ಭಾರತವು ಇಸ್ರೇಲ್‌ಗೆ ಶಸ್ತ್ರಗಳನ್ನು ರಫ್ತು ಮಾಡುತ್ತಿದೆಯೆನ್ನುವುದಕ್ಕೆ ದಾಖಲೆಗಳಿವೆ. ಕೆಲವು ತಿಂಗಳ ಹಿಂದೆ, ಭಾರತದಿಂದ ಇಸ್ರೇಲ್‌ಗೆ 20 ಹರ್ಮಿಸ್ ಮಿಲಿಟರಿ ಡ್ರೋನ್‌ಗಳು ರಫ್ತಾಗಿರುವುದು ಬಹಿರಂಗವಾಗಿದೆ. ಅದಾನಿ ಗ್ರೂಪ್ ಮತ್ತು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ಜಂಟಿಯಾಗಿ ಆರಂಭಿಸಿರುವ ಕಾರ್ಖಾನೆಯಲ್ಲಿ ಈ ಡ್ರೋನ್‌ಗಳು ತಯಾರಾಗಿವೆ. ಅಮೆರಿಕ ಮಾಡಿದ ರೀತಿಯಲ್ಲೇ ಭಾರತ ಸರಕಾರ ಕೂಡ ಗಾಜಾದಲ್ಲಿ ನಾಗರಿಕರ ಸಾವು–ನೋವಿನ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ. ಇಸ್ರೇಲ್‌ನ ಮಿಲಿಟರಿ ಪಡೆಗಳಿಗೆ ಶಸ್ತ್ರಗಳನ್ನು ಸರಬರಾಜು ಮಾಡಿ ಅದರೊಂದಿಗೆ ಕೈ ಜೋಡಿಸುತ್ತಲೇ ನಾಗರಿಕರ ಪ್ರಾಣ ಹಾನಿ ಬಗ್ಗೆ ಕಳವಳ ತೋರುವ ದ್ವಂದ್ವ ನೀತಿಯನ್ನು ಅನುಸರಿಸುತ್ತಿದೆ.


ಐಸಿಜೆ ವಿಚಾರಣೆ

ಸದ್ಯಕ್ಕೆ, ಮಾನವ ಮಹಾ ದುರಂತವನ್ನು ತಪ್ಪಿಸಲಿಕ್ಕಾಗಿ ರಫಾದ ಮೇಲೆ ಇಸ್ರೇಲ್ ಆಕ್ರಮಣ ಮಾಡುವುದನ್ನು ತಡೆಯಲು ತಕ್ಷಣವೇ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿ ದಕ್ಷಿಣ ಆಫ್ರಿಕಾ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಐಸಿಜೆ ನಡೆಸುತ್ತಿದೆ. ದಕ್ಷಿಣ ಆಫ್ರಿಕಾ ಮತ್ತು ದೇಶಗಳ ಗುಂಪೊಂದು ದಕ್ಷಿಣಾರ್ಧ ಗೋಳದ ದನಿಯಾಗಿ ಮತ್ತು ಪ್ಯಾಲೆಸ್ಟೈನ್ ಜನರಿಗೆ ನ್ಯಾಯದ ದೃಢ ರಕ್ಷಕರಾಗಿ ಹೊರಹೊಮ್ಮಿದೆ. ಆದರೆ, ಇಂಥ ಮಹತ್ವದ ಹೋರಾಟದಲ್ಲಿ ಮೋದಿ ಸರಕಾರ ಇತಿಹಾಸದ ತಪ್ಪು ದಿಕ್ಕಿನಲ್ಲಿ ನಿಂತಿದೆ.

ಅನು: ವಿಶ್ವ

ಮೋದಿಯವರ 41 ಸಂದರ್ಶನಗಳು: ಬರೀ ಆಲಿಸುವುದಷ್ಟೆ

ಕಠಿಣ ಪ್ರಶ್ನೆಗಳಿಲ್ಲ... ಖಂಡನೆಯ ಮಾತುಗಳಿಲ್ಲ ಸತ್ಯಾಸತ್ಯತೆ ತಿಳಿಯುವ ಪ್ರಯತ್ನಗಳಿಲ್ಲ






ಪ್ರಧಾನಿ ನರೇಂದ್ರ ಮೋದಿಯವರು ಮಾರ್ಚ್ 31 ಮತ್ತು ಮೇ 14 ರ ನಡುವೆ ವಾರಣಾಸಿ ಲೋಕಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸುವಷ್ಟರಲ್ಲಿ 41 ಸಂದರ್ಶನಗಳನ್ನು ನೀಡಿದ್ದಾರೆ. ಈ ಎಲ್ಲಾ ಸಂದರ್ಶನಗಳನ್ನು ಗಮನಿಸಿದರೆ, ಮೋದಿ ಅವರು ಕೆಲವೇ ಕೆಲವು ಕಠಿಣ ಪ್ರಶ್ನೆಗಳನ್ನು ಎದುರಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಚುನಾವಣಾ ಬಾಂಡ್ ವಿವಾದ, ಮೋದಿಯವರ ಮುಸ್ಲಿಂ ವಿರೋಧಿ ಹೇಳಿಕೆಗಳು, ಪ್ರಜ್ವಲ್ ರೇವಣ್ಣನ ಲೈಂಗಿಕ ದೌರ್ಜನ್ಯ ಪ್ರಕರಣ, ಅಗ್ನಿಪಥ್ ಯೋಜನೆ, ಮಣಿಪುರದಲ್ಲಿನ ಅಂತರ್ಯುದ್ಧ, ಕರೋನ ವೈರಸ್ ನಿಭಾಯಿಸಿದ ಬಗೆ, ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಇನ್ನಿತರೆ ರಾಷ್ಟ್ರ ಮತ್ತು ಪ್ರಾದೇಶಿಕ ಸಮಸ್ಯೆಗಳಂತಹ ಪ್ರಮುಖ ವಿಷಯಗಳ ಬಗ್ಗೆ ಪ್ರಧಾನಿ ಮೇಲೆ ಒತ್ತಡ ಹೇರಿ ಸರಿಯಾದ ಉತ್ತರ ಪಡೆಯುವ ಪ್ರಯತ್ನವನ್ನೇ ಸಂದರ್ಶಕರು ಮಾಡಲಿಲ್ಲ.

ಸಿ.ಸಿದ್ದಯ್ಯ

ನ್ಯೂಸ್ 18 ಇಂಡಿಯಾ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಮೋದಿಯವರಿಗೆ ಒಂದು ಕಠಿಣ ಪ್ರಶ್ನೆ ಎದುರಾಯ್ತು. ರಾಜಸ್ಥಾನದ ಬನ್ಸ್ವಾರಾದಲ್ಲಿ ನಡೆದ ರ್‍ಯಾಲಿಯಲ್ಲಿ "ಒಳನುಸುಳುಕೋರರು" ಮತ್ತು "ಹೆಚ್ಚು ಮಕ್ಕಳನ್ನು ಹೊಂದಿರುವವರು" ಎಂಬ ಮೋದಿಯವರ ಮುಸ್ಲಿಂ ವಿರೋಧಿ ಹೇಳಿಕೆಗಳಿಗೆ ಸಂಬಂಧಿಸಿದ ಪ್ರಶ್ನೆ ಅದು. ರೂಬಿಕಾ ಲಿಯಾಕತ್ ರಿಂದ ಎದುರಾದ ಪ್ರಶ್ನೆಗೆ ಸ್ವಲ್ಪ ಸಮಯದ ನಂತರ ಅವರು ಹೇಳಿದ್ದು ಹೀಗೆ; “ಹೆಚ್ಚು ಮಕ್ಕಳನ್ನು ಹೊಂದಿರುವವರ ಬಗ್ಗೆ ರಾಜಸ್ಥಾನದ ಬನ್ಸ್‌ವಾರಾದಲ್ಲಿ ಮುಸ್ಲಿಮರು ತಮ್ಮ ಹೇಳಿಕೆಗೆ ಗುರಿಯಾಗಿರುವುದು ನನಗೆ ಆಶ್ಚರ್ಯ ತಂದಿದೆ. ತಾನು ಹಿಂದೂಗಳು ಅಥವಾ ಮುಸಲ್ಮಾನರು ಎಂದು ಹೇಳಲಿಲ್ಲ, ಅಂತಹ ದಿನ ನಾನು ಸಾರ್ವಜನಿಕ ಜೀವನಕ್ಕೆ ಅನರ್ಹನಾಗುತ್ತೇನೆ. ‘ಹೆಚ್ಚು ಮಕ್ಕಳನ್ನು ಹೊಂದಿರುವವರು’ ಎಂಬ ಪದವನ್ನು ಮುಸ್ಲಿಮರಿಗಾಗಿ ಮಾತ್ರ ಹೇಳಿಲ್ಲ. ‘ಎಲ್ಲಾ ಬಡ ಕುಟುಂಬಗಳು ಹೆಚ್ಚು ಮಕ್ಕಳನ್ನು ಹೊಂದಿವೆ. ಅವರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಸಾಧ್ಯವಿಲ್ಲ. ಎಲ್ಲಿ ಬಡತನವಿದೆಯೋ ಅಲ್ಲಿ ಹೆಚ್ಚಿನ ಸಂತಾನ ಕಾಣುತ್ತದೆ.”

ಆದರೆ, "ಒಳನುಸುಳುಕೋರರು" ಎಂದರೆ ಯಾರು ಎಂದು ವಿವರಿಸುವಂತೆ ಮೋದಿಯವರನ್ನು ಸಂದರ್ಶಕರು ಕೇಳಲಿಲ್ಲ. ಸ್ಪಷ್ಟನೆ ನೀಡಲು ಮೋದಿ ತಲೆಕೆಡಿಸಿಕೊಳ್ಳಲಿಲ್ಲ. ಸಂದರ್ಶನ ಮುಂದುವರೆಯಿತು.

ಈ ಸಂಭಾಷಣೆಯು 2024 ರ ಲೋಕಸಭೆ ಚುನಾವಣೆಯ ಪ್ರಚಾರದ ಸಮಯದಲ್ಲಿ ಮೋದಿ ಅವರು ನೀಡಿದ ಸಂದರ್ಶನಗಳ ಸರಣಿಯ ಸಮಯದಲ್ಲಿ ಸ್ವತಃ ನಡೆಸಿದ ಟೆಂಪ್ಲೇಟ್ ಆಗಿದೆ. ಮಾರ್ಚ್ 31 ಮತ್ತು ಮೇ 14 ರ ನಡುವೆ ವಾರಣಾಸಿ ಲೋಕಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸುವಷ್ಟರಲ್ಲಿ ಪ್ರಧಾನಿ 41 ಸಂದರ್ಶನಗಳನ್ನು ನೀಡಿದ್ದಾರೆ. ಈ ಎಲ್ಲಾ ಸಂದರ್ಶನಗಳನ್ನು ಗಮನಿಸಿದರೆ, ಮೋದಿ ಅವರು ಕೆಲವೇ ಕೆಲವು ಕಠಿಣ ಪ್ರಶ್ನೆಗಳನ್ನು ಎದುರಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಉದಾಹರಣೆಗೆ, ಕಾರ್ಯಕ್ರಮದ 24 ದಿನಗಳ ನಂತರ ಮೊದಲ ಬಾರಿಗೆ ನ್ಯೂಸ್ 18 ಸಂದರ್ಶನವು, ಬನ್ಸ್‌ವಾರಾ ರ್‍ಯಾಲಿಯಲ್ಲಿ ಮೋದಿಯವರ ಹೇಳಿಕೆಗಳ ಬಗ್ಗೆ ನೇರವಾಗಿ ಪ್ರಶ್ನಿಸಲ್ಪಟ್ಟಿದ್ದು.

ನ್ಯೂಸ್ 18 ಸಂದರ್ಶನದಂತೆ, ವಿವಾದಾತ್ಮಕ ವಿಷಯಗಳ ಬಗ್ಗೆ ಮೋದಿಗೆ ಪ್ರಶ್ನೆಗಳನ್ನು ಕೇಳಿದಾಗಲೂ ಸಂದರ್ಶಕರು ಮರು ಪ್ರಶ್ನೆಗಳನ್ನು ಕೇಳಲಿಲ್ಲ ಅಥವಾ ತಪ್ಪುದಾರಿಗೆಳೆಯುವ ಮೋದಿಯವರ ಪ್ರಯತ್ನಗಳನ್ನು ಪ್ರಶ್ನಿಸಲಿಲ್ಲ. ಅಪರೂಪಕ್ಕೊಮ್ಮೆ ತಮ್ಮ ಸರ್ಕಾರವು ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾದ ಬಗ್ಗೆ ಪ್ರಧಾನಿಗೆ ಪ್ರಶ್ನೆಗಳನ್ನು ಕೇಳಲಾಯಿತು.

ಕಠಿಣ ಪ್ರಶ್ನೆಗಳು ಕಾಣೆಯಾಗಿವೆ

ಈ ಹೆಚ್ಚಿನ ಮಾಧ್ಯಮ ಸಂವಾದಗಳಲ್ಲಿ, ಮೋದಿ ಅವರು ತಮ್ಮ ಮೂರನೇ ಅವಧಿಯ ಬಗ್ಗೆ ಮಾತ್ರವಲ್ಲ, ಭಾರತ 2047 ರ ಭಾರತೀಯ ಜನತಾ ಪಕ್ಷದ ದೃಷ್ಟಿಕೋನದ ಬಗ್ಗೆ ಹೆಚ್ಚು ಮಾತನಾಡಿದರು. ಆದಾಗ್ಯೂ, ಸಂದರ್ಶಕರು ಅವರ ಆಡಳಿತದ ಸಾಧನೆಯ ಬಗ್ಗೆ ಸಾಕಷ್ಟು ಕಠಿಣ ಪ್ರಶ್ನೆಗಳನ್ನು ಕೇಳಲಿಲ್ಲ.

ಕರೋನ ವೈರಸ್ ನಿಭಾಯಿಸಿದ ಬಗ್ಗೆ: 41 ಸಂದರ್ಶನಗಳಲ್ಲಿ, ಮೋದಿ ಸರ್ಕಾರವು ಕರೋನ ವೈರಸ್ ಸಾಂಕ್ರಾಮಿಕ ರೋಗವನ್ನು ನಿಭಾಯಿಸಿದ ಬಗ್ಗೆ, ಅವೈಜ್ಞಾನಿಕವಾಗಿ ಲಾಕ್ ಡೌನ್ ಘೋಷಣೆ, ಅದರಿಂದ ಜನರು ಅನುಭವಿಸಿದ ಸಂಕಷ್ಟಗಳು, ಇದರಲ್ಲಿ ಸಾವನ್ನಪ್ಪಿದವರ ಬಗ್ಗೆ ಒಂದೇ ಒಂದು ಪ್ರಶ್ನೆಯನ್ನು ಯಾವ ಸಂದರ್ಶಕರೂ ಕೇಳಲಿಲ್ಲ.

ಮಣಿಪುರದಲ್ಲಿನ ಅಂತರ್ಯುದ್ಧ: ದಿ ಅಸ್ಸಾಂ ಟ್ರಿಬ್ಯೂನ್ ಮಾಡಿದ ಒಂದೇ ಒಂದು ಸಂದರ್ಶನವು ಮಣಿಪುರದಲ್ಲಿನ ಅಂತರ್ಯುದ್ಧದ ಬಗ್ಗೆ ಒಂದು ಪ್ರಶ್ನೆಯನ್ನು ಒಳಗೊಂಡಿತ್ತು. ಅಸ್ಸಾಂ ಟ್ರಿಬ್ಯೂನ್ ನ ಆ ಸಂದರ್ಶನ ಮತ್ತು ನ್ಯೂಸ್ ವೀಕ್ ನ ಇನ್ನೊಂದು ಸಂದರ್ಶನದಲ್ಲಿ ಚೀನಾದೊಂದಿಗಿನ ಗಡಿ ಉದ್ವಿಗ್ನತೆಯ ಬಗ್ಗೆ ಮೋದಿಯವರನ್ನು ಕೇಳಲಾಯಿತು.

ಚುನಾವಣಾ ಬಾಂಡ್: ಕೇವಲ ನಾಲ್ಕು ಸುದ್ದಿವಾಹಿನಿಗಳು (ತಂತಿ ಟಿವಿ, ANI, ರಾಜಸ್ಥಾನ ಪತ್ರಿಕಾ ಮತ್ತು ದಿವ್ಯ ಭಾಸ್ಕರ್) ಚುನಾವಣೆಗಳು ಪ್ರಾರಂಭವಾಗುವ ಮೊದಲು ಭುಗಿಲೆದ್ದ ಚುನಾವಣಾ ಬಾಂಡ್ ಗಳ ವಿವಾದದ ಬಗ್ಗೆ ಪ್ರಧಾನಿಯನ್ನು ಪ್ರಶ್ನಿಸಿವೆ. ಈ ಯೋಜನೆಯು ಪಾರದರ್ಶಕವಾಗಿದೆ ಮತ್ತು ಅದನ್ನು ರದ್ದುಗೊಳಿಸುವ ಸುಪ್ರೀಂ ಕೋರ್ಟಿನ ನಿರ್ಧಾರವು ಚುನಾವಣಾ ಪ್ರಕ್ರಿಯೆಯಲ್ಲಿ ಕಪ್ಪು ಹಣದ ಒಳಹರಿವಿಗೆ ಕಾರಣವಾಗುತ್ತದೆ ಎಂದು ಮೋದಿ ತಮ್ಮ ಉತ್ತರಗಳಲ್ಲಿ ಸಮರ್ಥಿಸಿಕೊಂಡರು. ಆದರೆ, ಯಾವುದೇ ಸಂದರ್ಶನಗಳಲ್ಲಿ, ಎಲೆಕ್ಟೋರಲ್ ಬಾಂಡ್ ಯೋಜನೆಯ ಮೂಲಕ ಕಾರ್ಪೊರೇಟ್‌ಗಳು ಮತ್ತು ಬಿಜೆಪಿ ನಡುವಿನ ‘ಕೊಡು–ಕೊಳ್ಳುವ’ (quid pro quo) ಸಂಬಂಧದ ಆರೋಪಗಳ ಬಗ್ಗೆ ಯಾರೂ ಮೋದಿಯವರಿಗೆ ಪ್ರಶ್ನೆಗಳನ್ನು ಹಾಕಲಿಲ್ಲ.

ಪ್ರಜ್ವಲ್ ರೇವಣ್ಣ ಪ್ರಕರಣ: ಏಪ್ರಿಲ್ 27 ರಲ್ಲಿ, ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಗಳು ಹೊರಬಂದ ನಂತರ ನಡೆದ, ಮೋದಿ ಅವರ 29 ಸಂದರ್ಶನಗಳಲ್ಲಿ ಕೇವಲ ಮೂರರಲ್ಲಿ ಈ ವಿಷಯದ ಬಗ್ಗೆ ಪ್ರಶ್ನಿಸಲಾಯಿತು. ಸುದ್ದಿ ವಾಹಿನಿ ಟೈಮ್ಸ್ ನೌ, ಹಿಂದಿ ದೈನಿಕ ಹಿಂದೂಸ್ತಾನ್ ಮತ್ತು ಇಂಗ್ಲಿಷ್ ದೈನಿಕ ಹಿಂದೂಸ್ತಾನ್ ಟೈಮ್ಸ್ ಮಾತ್ರ ಬಿಜೆಪಿಯ ಮಿತ್ರ ಪಕ್ಷವಾಗಿರುವ ಜೆಡಿಎಸ್ ನ ಪ್ರಮುಖ ಸದಸ್ಯರ ವಿರುದ್ಧದ ಆರೋಪಗಳ ಬಗ್ಗೆ ಪ್ರಶ್ನೆ ಕೇಳಿವೆ. ಪ್ರಜ್ವಲ್ ಘಟನೆಯನ್ನು ಪ್ರಸ್ತಾಪಿಸಿದರೆ, ಮೋದಿಯವರು, ಅಂತಹ ವಿಷಯಗಳನ್ನು ತಾನು ಸಹಿಸುವುದಿಲ್ಲ ಎಂದು ಹೇಳುತ್ತಲೇ, ಕಾಂಗ್ರೆಸ್ ಪಕ್ಷ ಹಿಂದೆ ಪ್ರಜ್ವಲ್ ರೇವಣ್ಣ ಪಕ್ಷದ ಜೊತೆ ಸಂಬಂಧಗಳನ್ನು ಇಟ್ಟುಕೊಂಡಿತ್ತು ಎಂದು ಸಮಸ್ಯೆಯ ತೀವ್ರತೆಯನ್ನು ಬದಿಗೆ ಸರಿಸಲು ಪ್ರಯತ್ನಿಸಿದರು. ರೇವಣ್ಣ ಹೇಗೆ ದೇಶದಿಂದ ಪಲಾಯನ ಮಾಡಿದರು ಅಥವಾ ಜೆಡಿಎಸ್ ಜೊತೆಗಿನ ಮೈತ್ರಿಯ ಸಂಭಾವ್ಯ ಪತನದ ಬಗ್ಗೆ ಬಿಜೆಪಿ ತನ್ನ ನಾಯಕನ ಎಚ್ಚರಿಕೆಯನ್ನು ಏಕೆ ನಿರ್ಲಕ್ಷಿಸಿತು ಎಂದು ಪತ್ರಿಕೆಯ ಪತ್ರಕರ್ತರು ಮೋದಿಯನ್ನು ಕೇಳಲಿಲ್ಲ.

ಟೈಮ್ಸ್ ನೌ ನಲ್ಲಿ, ಮೋದಿಯವರಿಗೆ ಕೇಳಿದ ಮೂರು ಪ್ರಶ್ನೆಗಳಲ್ಲಿ ಪ್ರಜ್ವಲ್ ರೇವಣ್ಣ ಅವರ ಕುರಿತ ಪ್ರಶ್ನೆಗೆ ಮೋದಿ ಅವರು ತಮ್ಮ "ಶೂನ್ಯ ಸಹಿಷ್ಣುತೆ" ರೇಖೆಯನ್ನು ಪುನರಾವರ್ತಿಸಿದರು, ಇದು ಕಾನೂನು ಮತ್ತು ಸುವ್ಯವಸ್ಥೆಯ ವಿಷಯವಾಗಿದೆ ಮತ್ತು ಇದಕ್ಕೆ ರಾಜ್ಯ ಸರ್ಕಾರವೇ ಹೊಣೆಯಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತವಿದೆ ಎಂದು ಹೇಳಿದರು.

ಧರ್ಮಾಧಾರಿತ ಮೀಸಲಾತಿಯ ಬಗ್ಗೆ ಸುಳ್ಳು ಹೇಳಿಕೆಗಳು: ಪ್ರಧಾನಿಯವರು, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಧರ್ಮದ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ನೀಡುವುದನ್ನು ಉಲ್ಲೇಖಿಸಲಾಗಿದೆ ಎಂದು ಸುಳ್ಳು ಹೇಳಿರುವ ಬಗ್ಗೆ ಟೈಮ್ಸ್ ನೌ ಕನ್ಸಲ್ಟಿಂಗ್ ಎಡಿಟರ್ ಸುಶಾಂತ್ ಸಿನ್ಹಾ ಅವರು, ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಧರ್ಮದ ಆಧಾರದ ಮೇಲೆ ಮೀಸಲಾತಿಯನ್ನು ಅನುಮತಿಸುವ ಅಪಾಯವನ್ನು ವಿವರಿಸಲು ಮೋದಿಯವರನ್ನು ಕೇಳಿದರು. ಈ ವಿಷಯ ಕಾಂಗ್ರೆಸ್ ಪ್ರಣಾಳಿಕೆಯಲ್ಲಿದೆ ಎಂದು ಮೋದಿ ಸುಳ್ಳು ಹೇಳಿದರು.

ಚುನಾವಣೆ ಸಂದರ್ಭದ ಮೂರು ವಾರಗಳಲ್ಲಿ ಹಲವಾರು ಸಂದರ್ಶನಗಳಲ್ಲಿ, ಕಾಂಗ್ರೆಸ್ ಖಾಸಗಿ ಸಂಪತ್ತನ್ನು ವಶಪಡಿಸಿಕೊಳ್ಳಲು ಮತ್ತು ಮುಸ್ಲಿಮರಿಗೆ ಮರುಹಂಚಿಕೆ ಮಾಡಲು ಯೋಜಿಸಿದೆ ಎಂದು ಮೋದಿ ಅವರು ತಮ್ಮ ಸುಳ್ಳು ಹೇಳಿಕೆಗಳನ್ನು ಪುನರಾವರ್ತಿಸಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಕಾಂಗ್ರೆಸ್ ಕಸಿದುಕೊಂಡು ಮುಸ್ಲಿಮರಿಗೆ ನೀಡಲಿದೆ ಎಂದು ಅವರು ಕಿಡಿಕಾರಿದ್ದಾರೆ. ಸ್ಕ್ರಾಲ್ ಮತ್ತು ಇತರ ಪ್ರಕಟಣೆಗಳು ಈ ಎರಡೂ ಆರೋಪಗಳನ್ನು ನಿರಾಕರಿಸಿವೆ. ಯಾವ ಸಂದರ್ಶಕರೂ ಭಾರತದಲ್ಲಿ ಮುಸ್ಲಿಮರ ವಿರುದ್ಧದ ಹಿಂಸಾಚಾರದ ಬಗ್ಗೆ ಪ್ರಶ್ನೆಗಳನ್ನು ಕೇಳಲಿಲ್ಲ.

ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆಯ ಎರಡು ವಾರಗಳ ನಂತರ

ಮೋದಿ ಅವರು ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಬಗ್ಗೆ ಮಾತನಾಡುತ್ತಿರುವುದಾಗಿ ಹೇಳಿಕೊಂಡರೂ, ಏಪ್ರಿಲ್ 21 ರಂದು ಬನ್ಸ್ ವಾರಾದಲ್ಲಿ ಅವರು ಮಾಡಿದ ಭಾಷಣದ ನಂತರವೇ ಅವರ ಸಂದರ್ಶನಗಳಲ್ಲಿ ಈ ರೀತಿಯ ಹೇಳಿಕೆಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು. ಇದು ಏಪ್ರಿಲ್ 5 ರಂದು ಕಾಂಗ್ರೆಸ್ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ಎರಡು ವಾರಗಳ ನಂತರ.

ಉದಾಹರಣೆಗೆ, ಏಪ್ರಿಲ್ 15 ರಂದು ಸುದ್ದಿ ಸಂಸ್ಥೆ ANI ಗೆ ಮೋದಿ ನೀಡಿದ ಸಂದರ್ಶನದಲ್ಲಿ, ಇಡೀ ಸಂಭಾಷಣೆಯಲ್ಲಿ "ಮುಸ್ಲಿಂ" ಮತ್ತು "ಮೀಸಲಾತಿ" ಎಂಬ ಪದಗಳು ಕಾಣಿಸಿಕೊಂಡಿಲ್ಲ. ಇದು ಈ ಚುನಾವಣಾ ಋತುವಿನಲ್ಲಿ ಪ್ರಧಾನಿ ನೀಡಿದ ಸುದೀರ್ಘ ಸಂದರ್ಶನಗಳಲ್ಲಿ ಒಂದಾಗಿದ್ದರೂ ಸಹ. 77 ನಿಮಿಷಗಳಲ್ಲಿ ಅವರು ಕಾಂಗ್ರೆಸ್ ಪ್ರಣಾಳಿಕೆ ಅಥವಾ ಸಂಪತ್ತಿನ ಮರುಹಂಚಿಕೆಯ ಸುತ್ತಲಿನ ಚರ್ಚೆಯ ಬಗ್ಗೆ ಮಾತನಾಡುವುದಿಲ್ಲ.

ಏಪ್ರಿಲ್ 20 ರಂದು ಕನ್ನಡ ಸುದ್ದಿ ವಾಹಿನಿ ಏಷ್ಯಾನೆಟ್ ಸುವರ್ಣಗೆ ನೀಡಿದ ಸಂದರ್ಶನದಲ್ಲಿ ಇದು ಕಾಣಿಸಿಕೊಂಡಿಲ್ಲ. ಮೋದಿಯವರು ಕರ್ನಾಟಕದ ಕಾಂಗ್ರೆಸ್ ಸರ್ಕಾರವನ್ನು ಹಲವಾರು ವಿಷಯಗಳಲ್ಲಿ ಟೀಕಿಸಿದರೂ, ಮುಸ್ಲಿಮರಿಗೆ ನೀಡಲು OBC ಕೋಟಾವನ್ನು ಕಿತ್ತುಕೊಂಡಿದ್ದಾರೆ ಎಂದು ಅವರು ಹೇಳಲಿಲ್ಲ.

ಆದರೆ ಬನ್ಸ್ ವಾರಾ ರ್‍ಯಾಲಿಯ ನಂತರದ ಪ್ರತಿಯೊಂದು ಸಂದರ್ಶನದಲ್ಲೂ ಮೋದಿಯವರು ಧರ್ಮಾಧಾರಿತ ಕೋಟಾಗಳ ಬೊಗಸೆಯನ್ನು ಹೆಚ್ಚಿಸುವ ಕೆಲಸವನ್ನು ಮಾಡಿದರು. ಕೆಲವೊಮ್ಮೆ, ಸಂದರ್ಶಕರು ಈ ವಿಷಯದ ಬಗ್ಗೆ ಕೇಳದೆಯೂ ಸಹ.

ಉದಾಹರಣೆಗೆ, ಏಪ್ರಿಲ್ 29 ರಂದು ಟೈಮ್ಸ್ ಆಫ್ ಇಂಡಿಯಾಗೆ ನೀಡಿದ ಸಂದರ್ಶನದಲ್ಲಿ ಮೊದಲ ಪ್ರಶ್ನೆ, ಮೊದಲ ಎರಡು ಹಂತದ ಮತದಾನದ ಮೌಲ್ಯಮಾಪನ ಮತ್ತು ಅವರ ಪಕ್ಷವು 400 ಸ್ಥಾನಗಳನ್ನು ಗೆಲ್ಲುತ್ತದೆಯೇ ಎಂಬುದಾಗಿತ್ತು.

ತಮ್ಮ ಉತ್ತರದ ಭಾಗವಾಗಿ, ಮೋದಿ ಹೇಳಿದರು: “ನಮಗೆ, ನಾವು 400 ಸ್ಥಾನಗಳನ್ನು ಗೆಲ್ಲಲು ಬಯಸುವ ಪ್ರಮುಖ ಕಾರಣವೆಂದರೆ ನಮ್ಮ ದೇಶದಲ್ಲಿ ಎಸ್.ಟಿ., ಎಸ್.ಟಿ. ಮತ್ತು ಒಬಿಸಿಗಳ ಹಕ್ಕುಗಳನ್ನು ರಕ್ಷಿಸುವುದು. ಅವರ ಮೀಸಲಾತಿ ಮತ್ತು ಹಕ್ಕುಗಳನ್ನು ಕಸಿದುಕೊಂಡು ಅವರ ವೋಟ್ ಬ್ಯಾಂಕ್ ಗೆ ನೀಡುವ ವಿರೋಧ ಪಕ್ಷದ ದುಷ್ಟ ವಿನ್ಯಾಸಗಳನ್ನು ವಿಫಲಗೊಳಿಸಲು ನಾವು ಬಹುಮತವನ್ನು ಬಯಸುತ್ತೇವೆ.

ಪ್ರಾದೇಶಿಕ ಸಮಸ್ಯೆಗಳು

‘ಅಗ್ನಿಪಥ್’ ಯೋಜನೆ: ಸಂದರ್ಶಕರು ಪ್ರಾದೇಶಿಕ ಸಮಸ್ಯೆಗಳು, ಅಥವಾ ತಮ್ಮದೇ

ಪುಟ 14 ಕ್ಕೆ


ಕಾರ್ಖಾನೆ ಆಡಳಿತ ಮಂಡಳಿಯ ಬೇಜವಾಬ್ದಾರಿತನಕ್ಕೆ ಬಲಿಯಾದ ಮೂವರು ಕಾರ್ಮಿಕರು





ಜಿಂದಾಲ್ ಉಕ್ಕು ಕಾರ್ಖಾನೆ: ಸುರಕ್ಷಾ ಕ್ರಮಗಳ ಕೊರತೆ ಮೂವರು ಕಾರ್ಮಿಕರ ಸಾವು–ನ್ಯಾಯಕ್ಕಾಗಿ ಹೋರಾಟ

ವರದಿ: ಆರ್. ರಾಮಕೃಷ್ಣ
ಜೆ. ಸತ್ಯಬಾಬು

ಜಿಂದಾಲ್ ಸೌತ್ ವೆಸ್ಟ್ ಸ್ಟೀಲ್ ಲಿ. (ಜೆ.ಎಸ್.ಡಬ್ಲ್ಯೂ. ಸ್ಟೀಲ್ ಲಿ.) ಎಂಬುದು ಮುಂಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ ಭಾರತ ಮೂಲದ ಒಂದು ಬಹುರಾಷ್ಟ್ರೀಯ ಕಂಪನಿ. ಕರ್ನಾಟಕದ ಬಳ್ಳಾರಿ ಜಿಲ್ಲೆ ತೋರಣಗಲ್ಲಿನಲ್ಲಿರುವ ಈ ಕಂಪನಿಯ ಉಕ್ಕಿನ ಕಾರ್ಖಾನೆಯು ನಮ್ಮ ದೇಶದ ಎರಡನೇ ದೊಡ್ಡ ಖಾಸಗಿ ಉಕ್ಕಿನ ಕಾರ್ಖಾನೆ. ಅಲ್ಲದೇ ಜಗತ್ತಿನ ಆರನೇ ದೊಡ್ಡ ಉಕ್ಕಿನ ಕಾರ್ಖಾನೆಯಾಗಿದೆ ಎಂದೂ ಹೇಳಲಾಗಿದೆ. ಈ ಕಾರ್ಖಾನೆಯಲ್ಲಿ ಸುಮಾರು ಹದಿನಾಲ್ಕು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಂಪನಿಯ ಒಟ್ಟು ಸ್ವತ್ತಿನ ಮೌಲ್ಯ 2.28 ಲಕ್ಷ ಕೋಟಿಗೂ ಅಧಿಕ ಎಂಬ ಮಾಹಿತಿ ಇದೆ. ಈ ಕಾರ್ಖಾನೆಯ ಕೆಲಸಗಾರರಲ್ಲಿ ಖಾಯಂ ಕೆಲಸಗಾರರಿದ್ದರೂ ಗುತ್ತಿಗೆ, ಅರೆ ಗುತ್ತಿಗೆ ಕೆಲಸಗಾರರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಆದರೆ ಕಾರ್ಖಾನೆಯಲ್ಲಿ ಕಾರ್ಮಿಕರ ಸುರಕ್ಷತೆ, ಆರೋಗ್ಯ ರಕ್ಷಣೆಯ ಪರಿಸ್ಥಿತಿ ಮಾತ್ರ ಬಹಳ ಶೋಚನೀಯವಾಗಿದೆ. ಆತಂಕಕಾರಿಯಾಗಿದೆ.

ಅಪಘಾತ: ಮೂವರ ದುರ್ಮರಣ

ಕಾರ್ಖಾನೆಯಲ್ಲಿ ಮೇ 9, 2024 ಗುರುವಾರದಂದು ರಾತ್ರಿ ನಡೆದ ಭೀಕರ ಅಪಘಾತದಲ್ಲಿ ಮೂವರು ಪ್ರಾಣ ಕಳೆದುಕೊಂಡ ದುರಂತವೊಂದು ನಡೆದಿದೆ. ಕಾರ್ಖಾನೆಯಲ್ಲಿ ಬಿಸಿ ನೀರು ಹರಿಸುವ ಪೈಪ್ ಲೈನ್ ದುರಸ್ಥಿಯಲ್ಲಿ ಕಾರ್ಯನಿರತರಾಗಿದ್ದ ಯುವ ಇಂಜಿನಿಯರ್‌ಗಳಾದ ಹೊಸಪೇಟೆ ತಾಲೂಕಿನ ಭುವನಹಳ್ಳಿ ಗ್ರಾಮದ ಸಹಾಯಕ ಇಂಜನಿಯರ್ ಗಂಟೆ ಜಡೆಪ್ಪ (31), ಸಹಾಯಕ ವ್ಯವಸ್ಥಾಪಕ ಚೆನ್ನೈನ ಶಿವ ಮಹದೇವ್ (22), ಬೆಂಗಳೂರಿನ ಸಿವಿಲ್ ಇಂಜನಿಯರ್ ಸುಶಾಂತ್ ಕೃಷ್ಣ ನೈನಾರು (23) ಎಂಬ ನೌಕರರು ಈ ಅಪಘಾತದಲ್ಲಿ ಮೃತರಾಗಿದ್ದಾರೆ. ಈ ಮೂವರೂ ಯುವಕರಾಗಿದ್ದು ಕೆಲಸದ ಅನುಭವದ ಕೊರತೆಯುಳ್ಳವರಾಗಿದ್ದರು. ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಮತ್ತು ಸೂಕ್ತ ಎಚ್ಚರಿಕೆಗಳನ್ನು ವಹಿಸದೇ ಇವರನ್ನು ಅಪಾಯಕಾರಿ ಕೆಲಸದಲ್ಲಿ ತೊಡಗಿಸಿರುವುದು ಆಡಳಿತ ಮಂಡಳಿಯು ಬೇಜವಾಬ್ದಾರಿತನ ಮತ್ತು ಸ್ಪಷ್ಟವಾಗಿ ಕಾನೂನು ಉಲ್ಲಂಘನೆಯಾಗಿದೆ. ಆದ್ದರಿಂದ ಅಪಘಾತದ ಹೊಣೆಗಾರರಾದವರ ವಿರುದ್ಧ ದೂರು ದಾಖಲಿಸಬೇಕು. ಮೃತರ ಕುಟುಂಬಗಳಿಗೆ ಕಾರ್ಖಾನೆಯ ಆಡಳಿತ ಮಂಡಳಿ ಸಮರ್ಪಕವಾದ ಪರಿಹಾರವನ್ನು ನೀಡಬೇಕು, ಕಾರ್ಖಾನೆಯಲ್ಲಿ ಸಮರ್ಪಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಪ್ರಮುಖ ಬೇಡಿಕೆಗಳಿಗಾಗಿ ಒತ್ತಾಯಿಸಿ ಬಳ್ಳಾರಿ ಜಿಲ್ಲೆಯ ಜನಪರ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸುತ್ತಿವೆ.

ಒಳಗೂ ಹೊರಗೂ ಅನ್ಯಾಯ

ಈ ಉಕ್ಕಿನ ಕಾರ್ಖಾನೆಯಲ್ಲಿ ಸ್ಥಳೀಯ ಕಾರ್ಮಿಕರಿದ್ದರೂ, ಸ್ಥಳೀಯ ಕಾರ್ಮಿಕರಿಗೆ ಹೆಚ್ಚಿನ ಆದ್ಯತೆ ನೀಡದೆ ಬೇರೆ ರಾಜ್ಯದ ಕಾರ್ಮಿಕರನ್ನು ಹೆಚ್ಚಿನ ಪ್ರಮಾಣದಲ್ಲಿ ನೇಮಕ ಮಾಡಿಕೊಂಡು ದುಡಿಸಿಕೊಳ್ಳಲಾಗುತ್ತಿದೆ. ಏಕೆಂದರೆ ಸ್ಥಳೀಯರು ಬಹುಬೇಗ ಸಂಘಟಿತರಾಗಿ ನ್ಯಾಯ ಕೇಳುತ್ತಾರೆ. ಹೀಗಾಗಿ ದೂರದ ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ತೆಲಂಗಾಣ ಇನ್ನಿತರ ಭಾಗಗಳ ಕಾರ್ಮಿಕರನ್ನು ದೊಡ್ಡ ಸಂಖ್ಯೆಯಲ್ಲಿ ನೇಮಿಸಿಕೊಳ್ಳಲಾಗಿದೆ.

ಈ ಕಾರ್ಖಾನೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಹಲವಾರು ಅಪಘಾತಗಳಾಗಿದ್ದು ತಮ್ಮ ವ್ಯಾಪ್ತಿಯಲ್ಲಿ ಆಗಿರುವ ಸಾವುಗಳನ್ನು ತಮ್ಮ ವ್ಯಾಪ್ತಿಯಲ್ಲಿ ಆಗಿಲ್ಲವೆಂದು ಬಿಂಬಿಸುವುದಕ್ಕಾಗಿ ಮೃತ ದೇಹಗಳನ್ನು ಹೊರಗಡೆ ತಂದು ಬಿಸಾಕಿರುವುದೂ ಇದೆ, ಇಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಹೀಗೆ ಅನಾಥ ಶವಗಳಾಗಿ ಸಿಕ್ಕಿರುವ ದುರಂತಗಳು ಸಾಕಷ್ಟು ನಡೆದಿವೆ. ಕೈಗಾರಿಕೆಯಲ್ಲೂ ಮತ್ತು ಕಾರ್ಖಾನೆ ಸಂಬಂಧಿತ ವಾಹನ ಸಂಚಾರಗಳ ಕಾರಣದಿಂದ ರಸ್ತೆ ಅಪಘಾತಗಳಲ್ಲಿಯೂ ಜನರು ಹಾಗೂ ಕಾರ್ಮಿಕರ ಸರಣಿ ಸಾವು ನೋವುಗಳು ಸಂಭವಿಸುತ್ತಿದ್ದು, ಕೈಗಾರಿಕೆಗಳ ಮಾಲೀಕರ ಭಯದಿಂದ ಅಪಘಾತ ಸಂತ್ರಸ್ಥ ಕುಟುಂಬಗಳು ದೂರು ದಾಖಲಿಸಲು ಹಿಂಜರಿಯುತ್ತಿವೆ ಎನ್ನುತ್ತಾರೆ ಚಳುವಳಿಯ ನಾಯಕರು.


2018 ರಲ್ಲಿ ಕಾರ್ಖಾನೆಯೊಳಗೆ ಅಪಘಾತವಾಗಿ ಕೈಕಾಲುಗಳನ್ನು ಕಳೆದುಕೊಂಡ ಶ್ರೀಧರ ಒಡೆಯರ್ ಅವರಿಗೆ ಇಂದಿನವರೆಗೂ ಪರಿಹಾರ ದೊರೆತಿಲ್ಲ.



ಕಾಯಿದೆಯಡಿಯಲ್ಲಿ ಕಾರ್ಮಿಕ ಪರಿಹಾರ ಸೌಲಭ್ಯಗಳಿದ್ದರೂ ಅಪಘಾತಗಳನ್ನು ಮುಚ್ಚಿ ಹಾಕುವುದರಿಂದ ಸಂತ್ರಸ್ತ ಕುಟುಂಬಗಳು ಪರಿಹಾರದಿಂದ ವಂಚಿತರಾಗುತ್ತಿದ್ದಾರೆ. ಗುತ್ತಿಗೆ ಹಾಗೂ ವಲಸೆ ಕಾರ್ಮಿಕರ ಅಪಘಾತಗಳ ವಿಷಯದಲ್ಲಂತೂ ಗುತ್ತಿಗೆದಾರರು ಮತ್ತು ಕೈಗಾರಿಕೆ ಮಾಲೀಕರು ಅಮಾನವೀಯವಾಗಿ ವರ್ತಿಸುತ್ತಿದ್ದಾರೆ. ಅವುಗಳನ್ನು ಬೆಳಕಿಗೆ ತರದೆ ಮುಚ್ಚಿ ಹಾಕಲಾಗುತ್ತಿದೆ. ಕಾರ್ಖಾನೆಗಳಲ್ಲಿ ಸುರಕ್ಷತಾ ಕ್ರಮಗಳ ಕೊರತೆ ಮತ್ತು ರಾಜ್ಯದ ಕಾರ್ಮಿಕ ಇಲಾಖೆ ಮತ್ತು ಕಾರ್ಖಾನೆಗಳ ಬಾಯ್ಲರ್ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಕರ್ತವ್ಯ ಲೋಪವನ್ನು ಇದು ತೋರಿಸುತ್ತದೆ.

‘ದೈತ್ಯ’ ಕಂಪನಿ, ‘ದಟ್ಟ’ ಪ್ರಭಾವ

ದೈತ್ಯ ಜಿಂದಾಲ್ ಕೈಗಾರಿಕೆಯ ಪ್ರಭಾವದಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಈ ಭಾಗದ ಶಾಸಕರು, ಮಂತ್ರಿಗಳು ಸಹ ಕಾರ್ಖಾನೆಯ ಅನ್ಯಾಯಗಳ ವಿರುದ್ಧ ಮಾತನಾಡುವ ಧೈರ್ಯವನ್ನು ತೋರಲಾಗದ ಪರಿಸ್ಥಿತಿ ಇದೆ. ಸ್ಥಳೀಯ ಶಾಸಕರಾದ ಈ.ತುಕಾರಾಮ್ ರವರಾಗಲಿ, ಇದೇ ಊರಿನವರಾದ ರಾಜ್ಯ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರಾಗಲಿ ಇತ್ತೀಚಿನ ಅಪಘಾತದ ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡಿಲ್ಲ. ಸಾಂತ್ವನ ಹೇಳಿಲ್ಲ.

ಕಾರ್ಖಾನೆ ಪ್ರಾರಂಭವಾದರೆ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತವೆ, ಈ ಪ್ರದೇಶದ ಯುವಜನರಿಗೆ ಉದ್ಯೋಗ ಸಿಗುತ್ತದೆ ಎಂಬ ಆಸೆಯಿಂದ ಈ ಭಾಗದ ರೈತರು ಕಾರ್ಖಾನೆಗೆ ಕೃಷಿ ಭೂಮಿಯನ್ನು ನೀಡಿದ್ದಾರೆ. ಕಂಪನಿ 1982 ರಲ್ಲಿ ರೈತರ ಜಮೀನುಗಳನ್ನು ಪ್ರಾರಂಭದಲ್ಲಿ ಎಕರೆಗೆ ಕೇವಲ 1,500 ರೂಪಾಯಿಯಿಂದ ರೂ 3000 ಗಳಷ್ಟು ಅಂದರೆ ಅತ್ಯಂತ ಕಡಿಮೆ ಬೆಲೆ ನೀಡಿ ಭೂಮಿಗಳನ್ನು ವಶಪಡಿಸಿಕೊಂಡಿದೆ. ಈ ಭಾಗದಲ್ಲಿ ಇರುವ ಸುಮಾರು 25 ರಿಂದ 30 ಗ್ರಾಮಗಳ ರೈತರ ತ್ಯಾಗದಿಂದ ಕೈಗಾರಿಕೆ ಪ್ರಾರಂಭವಾಗಿದೆ. ಆದರೆ ಈ ಭಾಗದ ರೈತರಿಗೆ ನ್ಯಾಯ ಒದಗಿಸದೆ ಕಂಪನಿ ದಬ್ಬಾಳಿಕೆ ನಡೆಸುತ್ತಿದೆ. ಕೊಟ್ಟ ಭರವಸೆಯಂತೆ, ಭೂಮಿ ನೀಡಿರುವ ರೈತರ ಕುಟುಂಬ ಸದಸ್ಯರಿಗೆ ಇಲ್ಲಿವರೆಗೂ ಉದ್ಯೋಗ ನೀಡದೆ ಜಿಂದಾಲ್ ಕಂಪನಿ ವಿಶ್ವಾಸ ದ್ರೋಹ ಎಸಗಿದೆ.

ಕೇಂದ್ರ ಸರ್ಕಾರದ ಬೆಂಬಲದಿಂದ ಈ ಕಂಪನಿ ಬಳ್ಳಾರಿಯಲ್ಲಿ ಏಕಸೌಮ್ಯವಾಗಿ ಬೆಳೆದಿದೆ. ಸುಮಾರು ಹತ್ತು ಸಾವಿರ ಎಕರೆ ಪ್ರದೇಶದಲ್ಲಿ ಹರಡಿರುವ ಈ ಕಾರ್ಖಾನೆಯು ಅದು ಸಾಲದೆಂದು, ಈ ಭಾಗದಲ್ಲಿ ಸುಮಾರು 3,000 ಎಕರೆಗಿಂತ ಹೆಚ್ಚಿನ ಸರ್ಕಾರಿ ಭೂಮಿ, ಹಳ್ಳ, ಪೋರಂ ಭೋಕು, ಗುಡ್ಡ ಭೂಮಿಗಳನ್ನು ಅನಧಿಕೃತವಾಗಿ ವಶಪಡಿಸಿಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಕಾರ್ಖಾನೆಯ ಕಾರ್ಮಿಕರನ್ನು ಸಂಘಟನೆ ಮಾಡಲು ಸಿ.ಐ.ಟಿ.ಯು. ಬಳ್ಳಾರಿ ಜಿಲ್ಲಾ ಸಮಿತಿಯು ಹಲವು ಪ್ರಯತ್ನಗಳು ಮಾಡಿದೆ. ಅದರೆ ಆಡಳಿತ ಮಂಡಳಿಯ ಕಾನೂನುಬಾಹಿರ ಕುತಂತ್ರಗಳು ಮತ್ತು ದೌರ್ಜನ್ಯಕಾರಿ ನೀತಿಯಿಂದಾಗಿ ಅದು ಸಾಧ್ಯವಾಗಿಲ್ಲ.

ಜಿಂದಾಲ್ ಕಂಪನಿಯ, ವಿಷಪೂರಿತ ಹೊಗೆ ಉಗುಳುವ ಇ.ಸಿ.ಪಿ.ಎಲ್. ಕಾರ್ಖಾನೆಯನ್ನು ಮಹಾರಾಷ್ಟ್ರದಿಂದ ಕರ್ನಾಟಕದ ಬಳ್ಳಾರಿ ಜಿಲ್ಲೆಗೆ

ಪುಟ 15 ಕ್ಕೆ

ವಿಜಯನಗರದ ಉಕ್ಕು–ಕರ್ನಾಟಕದ ಹಕ್ಕು ಹೋರಾಟದ ಮೆಲುಕು

ಕೇಂದ್ರ ಸರಕಾರದ ಒಂದು ಸಾರ್ವಜನಿಕ ಉದ್ದಿಮೆಯಾಗಿ ಬಳ್ಳಾರಿ ಜಿಲ್ಲೆಯಲ್ಲಿ ಉಕ್ಕಿನ ಕಾರ್ಖಾನೆ ಆರಂಭವಾಗಬೇಕು ಎಂಬುದು ಈ ಭಾಗದ ಮತ್ತು ರಾಜ್ಯದ ಜನರ ಬಹುಕಾಲದ ಕನಸಾಗಿತ್ತು. ಈ ನಿಟ್ಟಿನಲ್ಲಿ ‘ವಿಜಯನಗರದ ಉಕ್ಕು–ಕರ್ನಾಟಕದ ಹಕ್ಕು’ ಎಂಬ ಘೋಷಣೆ ಅಡಿ ರಾಜ್ಯದಲ್ಲಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆಗಾಗಿ ಹಲವಾರು ಹೋರಾಟಗಳು ನಡೆದಿದ್ದವು.

ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಕಾರ್ಖಾನೆಗೆ ಅಡಿಗಲ್ಲು ಹಾಕಿರುವ ಪ್ರದೇಶದಿಂದ 1982 ರಲ್ಲಿ ಬಳ್ಳಾರಿಯಿಂದ ಬೆಂಗಳೂರಿಗೆ ಡಿ.ವೈ.ಎಫ್.ಐ. ಸಂಘಟನೆಯ ನೇತೃತ್ವದಲ್ಲಿ ಸೈಕಲ್ ಜಾಥಾ ಸಹ ನಡೆಸಲಾಗಿತ್ತು. 1983 ರಲ್ಲಿ ರಾಜ್ಯದ ಕಮ್ಯೂನಿಸ್ಟ್ ಚಳುವಳಿಯ ಹಿರಿಯ ನಾಯಕರಾದ ಸಂಗಾತಿ ಸೂರ್ಯನಾರಾಯಣ ರಾವ್ ಅವರು ಉದ್ಘಾಟನೆ ಮಾಡಿದ್ದರು. ತೋರಣಗಲ್‌ನಿಂದ ಬಳ್ಳಾರಿ ಜಿಲ್ಲಾಧಿಕಾರಿ ಕಛೇರಿವರೆಗೂ ಡಿ.ವೈ.ಎಫ್.ಐ., ಎಸ್.ಎಫ್.ಐ. ಸಂಘಟನೆಗಳಿಂದ ಪಾದಯಾತ್ರೆಯನ್ನು ಸಹ ಸಂಘಟಿಸಲಾಗಿತ್ತು. ರಾಜ್ಯದ ಜನರ ಕನಸು ನನಸಾಗದೆ ಈ ಭಾಗದಲ್ಲಿ ಜಿಂದಾಲ್ ಕಂಪನಿಯ ಖಾಸಗಿ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಯಿತು. ಇದರ ದುಷ್ಪರಿಣಾಮವನ್ನು ರಾಜ್ಯದ ಜನತೆ ಅನುಭವಿಸುವಂತಾಗಿದೆ.

ಮತೀಯ ದ್ವೇಷ ಬಿತ್ತುತ್ತಲೇ ಇರುವ ಮೋದಿ ಮತ್ತು ಬಿಜೆಪಿ ನಾಯಕರುಗಳ ವಿರುದ್ಧ ಕ್ರಮ ಕೈಗೊಳ್ಳಿ

ಚುನಾವಣಾ ಆಯೋಗಕ್ಕೆ ಸೀತಾರಾಂ ಯೆಚೂರಿ ಮತ್ತೊಂದು ಪತ್ರ

ಪ್ರಸಕ್ತ ಲೋಕಸಭಾ ಚುನಾವಣೆಯ ಪ್ರಚಾರದಲ್ಲಿ, ದೇಶದ ಪ್ರಧಾನಿ ಹಾಗೂ ಭಾರತೀಯ ಜನತಾ ಪಕ್ಷ-ಬಿಜೆಪಿಯ ಉನ್ನತ ನಾಯಕರಾದ ನರೇಂದ್ರ ಮೋದಿ ಮತ್ತು ಇತರ ಹಲವು ಬಿಜೆಪಿ ನಾಯಕರು ಪದೇ ಪದೇ ಮಾದರಿ ನೀತಿ ಸಂಹಿತೆ(ಎಂ.ಸಿ.ಸಿ.)ಯನ್ನು ಉಲ್ಲಂಘಿಸಿ ಮತೀಯ ದ್ವೇಷ ಆಧಾರಿತ, ವಿಭಜನಕಾರಿ ಭಾಷಣಗಳನ್ನು ಮಾಡುತ್ತಿರುವ ಬಗೆಗೆ ಸರಣಿ ದೂರುಗಳನ್ನು ದಾಖಲಿಸಿದ್ದರೂ ಈ ಬಗೆಗೆ ಯಾವುದೇ ಕ್ರಮ ವಹಿಸದೇ ದಿವ್ಯ ಮೌನ ವಹಿಸಿರುವ ದೇಶದ ಚುನಾವಣಾ ಆಯೋಗದ ಧೋರಣೆಯ ಬಗೆಗೆ ಕಳವಳ ವ್ಯಕ್ತಪಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರು ಮೇ 19, 2024 ರಂದು, ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ ರಾಜೀವ್ ಕುಮಾರ್ ಅವರಿಗೆ (ಎಂ.ಸಿ.ಸಿ.)ಯ ಪುನರಾವರ್ತಿತ ಉಲ್ಲಂಘನೆಗಳ ಬಗ್ಗೆ ಪತ್ರ ಬರೆದಿದ್ದಾರೆ. ಪತ್ರದ ತಿರುಳು ಹೀಗಿದೆ.

ಭಾರತೀಯ ಜನತಾ ಪಕ್ಷದ ಹಲವಾರು ನಾಯಕರು ಮಾಡುತ್ತಿರುವ ಮಾದರಿ ನೀತಿ ಸಂಹಿತೆಯ ಗಂಭೀರ ಉಲ್ಲಂಘನೆಗಳನ್ನು ನಾವು ಈ ಹಿಂದೆಯೇ ಭಾರತದ ಚುನಾವಣಾ ಆಯೋಗದ ಗಮನಕ್ಕೆ ತಂದಿದ್ದೇವೆ. ಈ ಕುರಿತು ಸರಣಿ ದೂರುಗಳು ದಾಖಲಾಗಿವೆ. ಈ ದೂರುಗಳಲ್ಲಿ ಬಿಜೆಪಿ ನಾಯಕರ ಮಾತುಗಳಲ್ಲಿನ ಹಸಿ ಹಸಿ ಸುಳ್ಳುಗಳು ಮತ್ತು ಕಟ್ಟು ಕಥೆಗಳು, ಜನರಲ್ಲಿ ಭಯವನ್ನು ಬಿತ್ತುವಂತಹ ಅಂಶಗಳನ್ನು ಮತ್ತು ನಗ್ನ ಕೋಮುವಾದಿ ಪ್ರಚಾರವನ್ನು ಎತ್ತಿ ತೋರಿಸಲಾಗಿದೆ. ದುಃಖಕರ ವಿಚಾರವೆಂದರೆ, ಈ ಯಾವುದೇ ದೂರುಗಳಿಗೆ ಸಂಬಂಧಿಸಿ ಚುನಾವಣಾ ಆಯೋಗವು ತಪ್ಪಿತಸ್ಥರನ್ನು ಶಿಕ್ಷಿಸಿಲ್ಲ.

ದ್ವೇಷ ಭಾಷಣದ ಈ ರೋಗವನ್ನು ಮೊಗ್ಗಿನಲ್ಲೇ ಕಿತ್ತು ಹಾಕಲು ಅಪರಾಧಿಗಳ ವಿರುದ್ಧ ಚುನಾವಣಾ ಆಯೋಗವು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದೆವು. ದುರದೃಷ್ಟವಶಾತ್, ಚುನಾವಣಾ ಆಯೋಗವು ಈ ಸಂಬಂಧ ಯಾವುದೇ ಕ್ರಮ ವಹಿಸದೇ ಇರಲು ಪ್ರಯತ್ನಿಸಿತು.

ಪ್ರಧಾನಿ ವಿರುದ್ಧದ ದೂರಿನಲ್ಲಿ ಅವರಿಗೆ ನೋಟಿಸ್ ಕಳುಹಿಸಬೇಕಿತ್ತು. ಈ ಹಿಂದೆ ಹೀಗೆ ನಡೆದಿರುವ ಉದಾಹರಣೆಗಳಿದ್ದರೂ ಅದನ್ನು ಬಿಟ್ಟು, ಚುನಾವಣಾ ಆಯೋಗವು ಹಲವು ದಿನಗಳ ನಂತರ ಮತ್ತು ವಿವಿಧ ವೇದಿಕೆಗಳಲ್ಲಿ ವಿಷಯ ಪ್ರಸ್ತಾಪಿಸಿದ ನಂತರ ನೋಟಿಸನ್ನು ಬಿಜೆಪಿ ಅಧ್ಯಕ್ಷರಿಗೆ ಕಳುಹಿಸಿದೆ.

ಆದರೆ ಬಿಜೆಪಿಯ ಮೇಲೆ ಈ ನೋಟೀಸ್ ಯಾವುದೇ ಪರಿಣಾಮ ಬೀರಿಲ್ಲ. ಪ್ರಧಾನಿ ಮತ್ತು ಬಿಜೆಪಿಯ ಇತರ ನಾಯಕರು ಅದೇ ಮತೀಯ ದ್ವೇಷದ ವಿಭಜನಕಾರಿ ಮಾತುಗಳನ್ನು ಪುನರಾವರ್ತಿಸುತ್ತಿರುವುದು ಕಂಡು ಬರುತ್ತಿದೆ.

ಬಿಜೆಪಿಯ ಹೆಚ್ಚೆಚ್ಚು ನಾಯಕರು ಈಗ ಮುಸ್ಲಿಮ್ ವಿರೋಧಿ ಧೋರಣೆಗಳನ್ನು ಬಳಸಿಕೊಂಡು ಮುಸ್ಲಿಂ ಸಮುದಾಯದ ವಿರುದ್ಧ ದ್ವೇಷವನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿದ್ದಾರೆ.

ಇದೇ ಮೇ 16, 2024 ರಂದು ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರು, "ಎಸ್‌ಪಿ ಮತ್ತು ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ರಾಮ್ ಲಲ್ಲಾ ಮತ್ತೆ ಟೆಂಟ್‌ನಲ್ಲಿ ಇರುತ್ತಾರೆ ಮತ್ತು ಅವರು ರಾಮ ಮಂದಿರದ ಮೇಲೆ ಬುಲ್ಡೋಜರ್ ಓಡಿಸುತ್ತಾರೆ" ಎಂದು ಹೇಳಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮೇ 17, 2024 ರಂದು ಸರನ್‌ನಲ್ಲಿ ನಡೆದ ರ್‍ಯಾಲಿಯಲ್ಲಿ "ಇದು ಕಾಂಗ್ರೆಸ್‌ನ ತುಷ್ಟೀಕರಣದ ರಾಜಕೀಯದ ಭಾಗವಾಗಿದೆ. ಅವರು ಮುಸ್ಲಿಮರಿಗೆ ಮಾತ್ರ ಅನುಕೂಲವಾಗುವಂತೆ ಧರ್ಮದ ಆಧಾರದ ಮೇಲೆ ಮೀಸಲಾತಿಯನ್ನು ನೀಡಲು ಬಯಸುತ್ತಾರೆ. ಕಾಂಗ್ರೆಸ್ ಮತ್ತು ಆರ್‌ಜೆಡಿ ಎಸ್.ಸಿ./ಎಸ್.ಟಿ. ಮತ್ತು ಒಬಿಸಿ ಕೋಟಾಗಳನ್ನು ಕಿತ್ತು ಮುಸ್ಲಿಮರಿಗೆ ಕೊಡಲು ಪ್ರಯತ್ನಿಸುತ್ತಿವೆ." ಎಂದು ಹೇಳಿದರು.

ಮೇ 18, 2024 ರಂದು ಸಿವಾನ್‌ನ ರಘುನಾಥಪುರದಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಅಸ್ಸಾಂ ಮುಖ್ಯಮಂತ್ರಿ ಮತ್ತು ಬಿಜೆಪಿ ಸ್ಟಾರ್ ಪ್ರಚಾರಕ ಹಿಮಂತ ಬಿಸ್ವಾ ಶರ್ಮಾ ಅವರು ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬಂದರೆ, ಸಮಾನ ನಾಗರೀಕಸಂಹಿತೆ(ಯು.ಸಿ.ಸಿ.)ಯನ್ನುತರುವುದಾಗಿ ಮತ್ತು "ನಾಲ್ಕು ಬಾರಿ ಮದುವೆಯಾಗುವ ಈ ವ್ಯವಹಾರವನ್ನು" ಕೊನೆಗೊಳಿಸುವುದಾಗಿ ಹೇಳಿದರು. ಇದಲ್ಲದೆ, ಮದರಸಾಗಳ ಕುರಿತು ಸ್ಪಷ್ಟವಾಗಿ ಉಲ್ಲೇಖಿಸಿ, "ನಾವು ಮುಲ್ಲಾಗಳನ್ನು ಉತ್ಪಾದಿಸುವ ಅಂಗಡಿಗಳನ್ನು ಮುಚ್ಚುತ್ತೇವೆ" ಎಂದು ಹೇಳಿದರು.

ನಾವು ಈ ಹಿಂದೆ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ದೂರುಗಳ ಬಗ್ಗೆ ಕ್ರಮಕ್ಕಾಗಿ ನಮ್ಮ ಬೇಡಿಕೆಯನ್ನು ಪುನರುಚ್ಚರಿಸುತ್ತೇವೆ. ಮತ್ತು ಈ ಮೇಲಿನ ದೂರುಗಳಿಗಾಗಿ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್ ಮತ್ತು ಹೇಮಂತ ಬಿಸ್ವಾಸ್ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳುವಂತೆ ನಾವು ಆಯೋಗವನ್ನು ಒತ್ತಾಯಿಸುತ್ತೇವೆ.

ನಮ್ಮ ಹಿಂದಿನ ದೂರುಗಳ ಮೂಲಕ ನಾವು ಚುನಾವಣಾ ಆಯೋಗಕ್ಕೆ ಎಚ್ಚರಿಕೆ ನೀಡಿದ್ದೇವೆ, ಅಪರಾಧಿಗಳು ಅಧಿಕಾರದ ಉನ್ನತ ಸ್ಥಾನಗಳಲ್ಲಿ ಇರುವ ಪ್ರಕರಣಗಳಲ್ಲಿ ನಿರ್ಣಾಯಕ ಕ್ರಮ ತೆಗೆದುಕೊಳ್ಳಲು ವಿಫಲವಾದರೆ, ಭಾರತದ ಚುನಾವಣಾ ಆಯೋಗದ ನಿಷ್ಪಕ್ಷಪಾತತನದ ಬಗೆಗೆ ಪ್ರಶ್ನೆಗಳು ಏಳುತ್ತವೆ ಮತ್ತು ಚುನಾವಣಾ ಆಯೋಗದ ವಿಶ್ವಾಸಾರ್ಹತೆಗೆ ಧಕ್ಕೆಯಾಗುತ್ತದೆ. ●

ಒರಿಸ್ಸಾ: ಬಿಜೆಡಿ-ಬಿಜೆಪಿಗಳ ಹುಸಿ ಕಾಳಗದ ನಡುವೆ

ಸಿಪಿಐ(ಎಂ) ಮತ್ತು ಎಡಪಕ್ಷಗಳ ಹೋರಾಟ

ಒರಿಸ್ಸಾ ರಾಜ್ಯದಲ್ಲಿ ಲೋಕಸಭಾ ಚುನಾವಣೆಗಳು ಮತ್ತು ರಾಜ್ಯ ವಿಧಾನ ಸಭಾ ಚುನಾವಣೆಗಳೂ ಒಟ್ಟಿಗೆ ನಡೆಯುತ್ತಿವೆ. ಆಡಳಿತಾರೂಢ ಬಿಜು ಜನತಾದಳ(ಬಿಜೆಡಿ) ಮತ್ತು ಬಿಜೆಪಿ ಪಕ್ಷಗಳ ನಡುವೆ ಈ ಸಾರಿ ಚುನಾವಣಾ ಹೊಂದಾಣಿಕೆ ಆಗಿಲ್ಲ. ಈ ಎರಡೂ ಪಕ್ಷಗಳೂ ಪರಸ್ಪರ ವೈರಿಗಳೆಂಬಂತೆ ಪರಸ್ಪರ ವಾಗ್ದಾಳಿಗಳನ್ನು ನಡೆಸುತ್ತಿದ್ದರೂ ಸಹ ಅದೊಂದು 'ಹುಸಿ ಕಾಳಗ' ಎಂಬುದು ವಾಸ್ತವ. ಈ ನಡುವೆ ರಾಜ್ಯ ಬಿಜೆಪಿ ಮತ್ತು ಬಿಜೆಡಿ ವಿರುದ್ಧವಿರುವ ಎಲ್ಲ ಶಕ್ತಿಗಳನ್ನೂ ಒಂದುಗೂಡಿಸಿ ಹೋರಾಡಬೇಕೆಂಬ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಯತ್ನ ಕಾಂಗ್ರೆಸ್ ಪಕ್ಷದ ಇಚ್ಛಾಶಕ್ತಿಯ ಕೊರತೆಯಿಂದ ಯಶಸ್ವಿಯಾಗಲಿಲ್ಲ. ಅದೇನಿದ್ದರೂ ಸಿಪಿಐ(ಎಂ) ಮತ್ತು ಎಡಪಕ್ಷಗಳು ಜನರ ಬದುಕಿನ ಪ್ರಶ್ನೆಗಳ ಆಧಾರದಲ್ಲಿ ರಾಜ್ಯವ್ಯಾಪಿ ಗಂಭೀರವಾದ ಪ್ರಚಾರಾಂದೋಲನ ನಡೆಸುತ್ತಿವೆ. ಇಂಡಿಯಾ ಕೂಟದ ಪ್ರಮುಖ ಪಕ್ಷವಾದ ಕಾಂಗ್ರೆಸ್ ಸ್ಪರ್ಧಿಸುತ್ತಿರುವ ಕಡೆ ಕಾಂಗ್ರೆಸ್ ಪರವಾಗಿ ಮತ್ತು ಉಳಿದಂತೆ ಸಿಪಿಐ(ಎಂ), ಸಿಪಿಐ ಮತ್ತಿತರ ಎಡಪಕ್ಷಗಳ ಪರವಾಗಿ ಪ್ರಚಾರಾಂದೋಲನ ನಡೆದಿದೆ.

ಒಂದು ಹಿನ್ನೋಟ

ಇದೇ ಫೆಬ್ರವರಿ 2024 ರಲ್ಲಿ ಬಿಜೆಡಿ ಮತ್ತು ಬಿಜೆಪಿಗಳ ನಡುವೆ ಸೀಟು ಹೊಂದಾಣಿಕೆ ಬಗೆಗೆ ಮಾತುಕತೆಗಳು ನಡೆದಿದ್ದವು. ಮಾರ್ಚ್ 5, 2024 ರಂದು ನರೇಂದ್ರ ಮೋದಿ ಮತ್ತು ಒರಿಸ್ಸಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಕಾರ್ಯಕ್ರಮವೊಂದರಲ್ಲಿ ಒಂದೇ ವೇದಿಕೆಯಲ್ಲಿ ಸಂತೋಷದಿಂದ ಪಾಲ್ಗೊಂಡಿದ್ದರು. ಬಹುಶಃ ರಾಜ್ಯದಲ್ಲಿ ಅಧಿಕಾರದ ಮೇಲೆ ಕಣ್ಣಿರುವ ಬಿಜೆಪಿ ತನಗೆ ಹೆಚ್ಚು ಸೀಟುಗಳನ್ನು ಕೇಳಿದ್ದರಿಂದ ಮಾತುಕತೆ ಮುರಿದು ಬಿತ್ತು. ರಾಜ್ಯದಲ್ಲಿ ಬಿಜೆಪಿ ಹೆಚ್ಚು ಸೀಟು ಗೆದ್ದರೆ ಮಹಾರಾಷ್ಟ್ರ ಮುಂತಾದ ಕಡೆ ಕೆಲ ಪಕ್ಷಗಳಿಗೆ ಆಗಿರುವಂತೆ ತನ್ನ ಮೂಲಕ್ಕೆ ಪೆಟ್ಟು ಬೀಳಬಹುದು ಎಂಬ ಭಯ ಬಿಜೆಡಿಗೆ ಇದೆ. ಈಗ ಮೋದಿ ಮತ್ತಿತರ ಬಿಜೆಪಿ ನಾಯಕರು ಕೀಳು ಭಾಷೆಯಲ್ಲಿ ಬಿಜೆಡಿ ಸರಕಾರವನ್ನು ಟೀಕಿಸುತ್ತಿದ್ದರೂ ಸಹ ಬಿಜೆಡಿಯು ಬಿಜೆಪಿಯ 'ಅಘೋಷಿತ ಮಿತ್ರ ಪಕ್ಷ' ಎಂಬುದನ್ನು ಮರೆಯುವಂತಿಲ್ಲ.

ಜನರ ಬದುಕು

ರಾಜ್ಯದಲ್ಲಿ ನಿರುದ್ಯೋಗ ತಾರಕಕ್ಕೇರಿದೆ. ಸರಕಾರದಲ್ಲಿ ಗಣನೀಯ ಪ್ರಮಾಣದ ಹುದ್ದೆಗಳು ಖಾಲಿ ಇವೆ. ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿಯ ಖಾತ್ರಿ ಇಲ್ಲ. ಪ್ರತಿ ವರ್ಷವೂ ಒರಿಸ್ಸಾದಿಂದ ಸುಮಾರು ಇಪ್ಪತ್ತು ಲಕ್ಷಕ್ಕೂ ಹೆಚ್ಚು ಜನರು ಬೇರೆ ಬೇರೆ ರಾಜ್ಯಗಳಿಗೆ ಉದ್ಯೋಗವನ್ನು ಹುಡುಕಿಕೊಂಡು ವಲಸೆ ಹೋಗುತ್ತಾರೆ. ಆದಿವಾಸಿಗಳ ಜೀವನ ಕಷ್ಟಕರವಾಗುತ್ತಾ ಹೋಗುತ್ತಿದೆ. ರಾಜ್ಯದಲ್ಲಿನ ಬಾಕ್ಸೈಟ್, ಮ್ಯಾಂಗನೀಸ್, ಕಬ್ಬಿಣ ಮುಂತಾದ ಶ್ರೀಮಂತ ಖನಿಜ ಸಂಪನ್ಮೂಲವು ಸರಕಾರದ ಬೆಂಬಲದಿಂದಲೇ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತುತ್ತಾಗಿದೆ. ಬಿಜೆಪಿಯ ಕೋಮುವಾದಿ ಪ್ರಚಾರ ವಿಚಾರಗಳ ಅಪಾಯಗಳನ್ನು ಬಿಜೆಡಿ ಗಂಭೀರವಾಗಿ ಪರಿಗಣಿಸಿಲ್ಲ. ಜಾತ್ಯತೀತ ಸಂವಿಧಾನಕ್ಕೆ ಎದುರಾಗಿರುವ ಅಪಾಯದ ಬಗೆಗೂ ಬಿಜೆಡಿಗೆ ಆತಂಕವಿಲ್ಲ.

ಬಿಜೆಪಿಯು ಸಂಕುಚಿತ ರಾಜಕೀಯ ಲಾಭಕ್ಕಾಗಿ ರಾಮಮಂದಿರ ನಿರ್ಮಾಣದ ವಿಷಯದಲ್ಲಿ ತನ್ನ ಬಗೆಗೆ ಕೊಚ್ಚಿಕೊಂಡರೆ, ಬಿಜೆಡಿಯು ಪುರಿಯ ಜಗನ್ನಾಥ ದೇಗುಲದ ಪರಿಕ್ರಮ ಗೋಡೆ ನಿರ್ಮಾಣ ಮಾಡಿದ್ದು ತನ್ನ ಸಾಧನೆ ಎಂದು ಹೇಳಿಕೊಳ್ಳುತ್ತಿದೆ.

ಬಿಜೆಪಿ, ಬಿಜೆಡಿ ಎರಡೂ ಪಕ್ಷಗಳೂ ಜನರ ಬದುಕಿನ ಬವಣೆಗಳ ಕುರಿತು ಮಾತನಾಡದೇ ಜನರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಪ್ರಯತ್ನ ಮಾಡುತ್ತಿವೆ. ಆದರೆ ಎಡಪಕ್ಷಗಳು ಜನರನ್ನು ಕಾಡುತ್ತಿರುವ ಉದ್ಯೋಗ, ಕೂಲಿ ಮುಂತಾದ ನೈಜ ಪ್ರಶ್ನೆಗಳ ಆಧಾರದಲ್ಲಿ ನಿರಂತರ ಹೋರಾಟಗಳನ್ನೂ ಮಾಡಿಕೊಂಡು ಬಂದಿವೆ ಮತ್ತು ಈ ಸಮಸ್ಯೆಗಳ ಆಧಾರದಲ್ಲಿ ಈಗ ಚುನಾವಣೆ ಎದುರಿಸುತ್ತಿವೆ.

ರಾಜ್ಯದ ಒಟ್ಟು 21 ಲೋಕಸಭಾ ಕ್ಷೇತ್ರಗಳ ಪೈಕಿ ಸಿಪಿಐ(ಎಂ), ಭುವನೇಶ್ವರ ಕ್ಷೇತ್ರದಲ್ಲಿ ಸುರೇಶ್ ಚಂದ್ರ ಪಾಣಿಗ್ರಾಹಿ ಅವರನ್ನು ಕಣಕ್ಕೆ ಇಳಿಸಿದೆ. ಹಾಗೆಯೇ 147 ವಿಧಾನ ಸಭಾ ಕ್ಷೇತ್ರಗಳ ಪೈಕಿ ಬೊನಾಯ್, ರಾಣ್ಪುರ್, ನಿಲ್‌ಗಿರಿ, ಸಾಲಿಪುರ್, ಖುರ್ದಾ, ಮೊರದಾ, ಮತ್ತು ಚಿತ್ರಕೊಂಡ ಈ ಏಳು ವಿಧಾನ ಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಆದಿವಾಸಿ ಜನರೇ ಹೆಚ್ಚಾಗಿರುವ ಬೊನಾಯ್ ಪ್ರಾಂತದಲ್ಲಿ ಇತ್ತೀಚಿನ ದಿನಗಳಲ್ಲಿ ಗಣಿಗಾರಿಕೆಯಲ್ಲಿ ಬಾರಿ ಯಂತ್ರಗಳು ಬಂದಿವೆ. ಅದಾನಿ, ಮಿತ್ತಲ್, ವೇದಾಂತ, ಜಿಂದಾಲ್, ಟಾಟಾ ಮುಂತಾದ ಕಂಪನಿಗಳು ಹೊಸದಾಗಿ ಇಲ್ಲಿಗೆ ತಮ್ಮ ಸಾಮ್ರಾಜ್ಯ ವಿಸ್ತರಿಸಿವೆ. ಯಾಂತ್ರೀಕರಣದಿಂದ ಆದಿವಾಸಿಗಳು ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬೊನಾಯ್ ವಿಧಾನ ಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಸತತವಾಗಿ ನಾಲ್ಕು ಬಾರಿ ಗೆದ್ದಿದ್ದು ಈಗಲೂ ತೀವ್ರ ಸ್ಪರ್ಧೆ ಒಡ್ಡಿದೆ. ಬೊನಾಯ್ ಕ್ಷೇತ್ರದ ಹಾಲಿ ಶಾಸಕ ಲಕ್ಷ್ಮಣ ಮುಂಡ ಅವರು ನಾಮಪತ್ರ ಸಲ್ಲಿಸುವ ಸಂದರ್ಭಕ್ಕೆ ಸುಡುವ ಬಿಸಿಲಿನಲ್ಲಿಯೂ ಸುಮಾರು ಇಪ್ಪತ್ತು ಸಾವಿರ ಜನರು ಸೇರಿ ಅಮೋಘ ಬೆಂಬಲ ತೋರಿದ್ದಾರೆ. ಸುಮಾರು ಐದು ಸಾವಿರ ಜನ ಆದಿವಾಸಿ ಮಹಿಳೆಯರು ಈ ಸಂದರ್ಭದಲ್ಲಿ ಪಾಲ್ಗೊಂಡು ಆದಿವಾಸಿ ನೃತ್ಯವನ್ನೂ ಮಾಡಿ ತಮ್ಮ ಸಂಭ್ರಮ ಹಂಚಿಕೊಂಡಿದ್ದಾರೆ. ಸೀತಾರಾಮ ಯೆಚೂರಿ, ಸೂರ್ಯಕಾಂತ ಮಿಶ್ರ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಆಲಿ ಕಿಶೋರ್ ಪಾಟ್ನಾಯಕ್ ಮುಂತಾದವರು ಬಹಿರಂಗ ಸಭೆಯಲ್ಲಿ ಮಾತನಾಡಿದ್ದಾರೆ.

ಬೊನಾಯ್ ಕ್ಷೇತ್ರವು ಸುಂದರ್‌ಗಡ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇದ್ದು ಕಾಂಗ್ರೆಸ್ ಬೊನಾಯ್ ಕ್ಷೇತ್ರದಲ್ಲಿ ಸಿಪಿಐ(ಎಂ) ಅನ್ನು ಬೆಂಬಲಿಸಿದೆ ಮತ್ತು ಕಾಂಗ್ರೆಸ್‌ನ ಸುಂದರ್‌ಗಡ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನು ಸಿಪಿಐ(ಎಂ) ಬೆಂಬಲಿಸುತ್ತಿದೆ.

ಕಳೆದ 25 ವರ್ಷಗಳಿಂದಲೂ ಅಧಿಕಾರದಲ್ಲಿದ್ದು ದೈತ್ಯ ಕಾರ್ಪೋರೇಟ್ ಕಂಪನಿಗಳ ಹಿತ ಕಾಯುತ್ತಿರುವ ಬಿಜೆಡಿಯು ಈ ಅವಧಿಯಲ್ಲಿ ಎನ್.ಡಿ.ಎ. ಸರಕಾರದ ಬಹುತೇಕ ಎಲ್ಲ ಜನವಿರೋಧಿ ನೀತಿಗಳನ್ನು ಬೆಂಬಲಿಸುತ್ತಾ ಅವಕಾಶವಾದಿತನ ತೋರುತ್ತಾ ಬರುತ್ತಿದೆ. ಇಂತಹ ಜನವಿರೋಧಿ ನೀತಿಗಳು ಅವಕಾಶವಾದಿತನಗಳ ವಿರುದ್ಧ ಮತ್ತು ಬಿಜೆಪಿಯ ಅಪಾಯಕಾರಿ ಕೋಮುವಾದಿ ನೀತಿಗಳ ವಿರುದ್ಧ ರಾಜ್ಯವ್ಯಾಪಿಯಾದ ಪರಿಣಾಮಕಾರಿ ಪ್ರಚಾರಾಂದೋಲನ ನಡೆಯುತ್ತಿದೆ. ●

ಮಹಾರಾಷ್ಟ್ರ: ಬಿಜೆಪಿಯ 'ಡಬಲ್ ಆಪರೇಶನ್' ಅದಕ್ಕೆ ಮುಳುವಾಗುತ್ತಾ?

ಶಿವಸೇನೆ ಮತ್ತು ಎನ್.ಸಿ.ಪಿ.ಯನ್ನು ನಾಶ ಮಾಡುವ ಬಿಜೆಪಿಯ 'ಡಬಲ್ ಆಪರೇಶನ್' ಮಹಾರಾಷ್ಟ್ರದ ಲೋಕಸಭಾ ಚುನಾವಣೆಯಲ್ಲಿ ಅದಕ್ಕೆ ಮುಳುವಾಗುವ ಲಕ್ಷಣಗಳು ಕಾಣುತ್ತಿವೆ. ಶಿವಸೇನಾ ಮತ್ತು ಎನ್.ಸಿ.ಪಿ.ಯನ್ನು ಒಡೆಯಲಾಗಿದ್ದರೂ ಅವು ಕಾಂಗ್ರೆಸ್ ಜತೆ ಕಟ್ಟಿಕೊಂಡ ಮಹಾರಾಷ್ಟ್ರ ವಿಕಾಸ ಅಘಾಡಿಯ ಜಂಟಿ ಚುನಾವಣಾ ಸಭೆಗಳಿಗೆ ಭಾರೀ ಜನಸ್ಪಂದನೆ ವ್ಯಕ್ತವಾಗುತ್ತಿದ್ದು, ಶಿವಸೇನಾ ನಾಯಕ ಉದ್ಧವ ಠಾಕ್ರೆ ಮತ್ತು ಎನ್.ಸಿ.ಪಿ.ಯ ನಾಯಕ ಶರದ್ ಪವಾರ್ ಗೆ ಭಾರೀ ಅನುಕಂಪದ ಅಲೆ ಎದ್ದಿದೆ. ದೇಶದ ಇತರ ಭಾಗಗಳಂತೆ ಮಹಾರಾಷ್ಟ್ರದಲ್ಲಿ ಸಹ ಕೃಷಿ ಬಿಕ್ಕಟ್ಟು, ನಿರುದ್ಯೋಗ, ಬೆಲೆಏರಿಕೆ, ರೇಶನ್ ಇತ್ಯಾದಿ ಜನರ ನಿಜವಾದ ಸಮಸ್ಯೆಗಳು ಈ ಚುನಾವಣೆಗಳಲ್ಲಿ ಮುನ್ನೆಲೆಗೆ ಬಂದಿವೆ. ಇವೆಲ್ಲ ಸೇರಿ ಬಿಜೆಪಿ ಹಿಂದಿನ ಬಾರಿಗಿಂತ ಹಲವು ಸೀಟುಗಳನ್ನು ಕಳೆದುಕೊಳ್ಳುವುದು ಖಚಿತ. ಎನ್.ಡಿ.ಎ. 24 ಸೀಟುಗಳಿಗೆ ಕುಸಿದರೂ ಆಶ್ಚರ್ಯ ಪಡಬೇಕಾಗಿಲ್ಲವೆಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಮಹಾರಾಷ್ಟ್ರ ಬಹುಶಃ ಬಿಜೆಪಿಯ ಅಧಿಕಾರ ದಾಹದ ಮತ್ತು ಪ್ರಜಾಪ್ರಭುತ್ವ ಬುಡಮೇಲು ಮಾಡುವ ರಾಜಕೀಯ ತಂತ್ರಗಾರಿಕೆ ಅತ್ಯಂತ ಕೀಳು ಮಟ್ಟಕ್ಕೆ ಹೋದ ರಾಜ್ಯ. ಇದು ಬಹುಶಃ ಯಾರೂ ಊಹಿಸಲಾರದ ಅತ್ಯಂತ ಕೀಳುಮಟ್ಟಕ್ಕೆ ಹೋಗಿದ್ದನ್ನು ಮಹಾರಾಷ್ಟ್ರ ಕಂಡಿತು. ಮಾತ್ರವಲ್ಲ, ಇದು ಮಹಾರಾಷ್ಟ್ರದ ಲೋಕಸಭಾ ಚುನಾವಣೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಲ್ಲಿ ಒಂದು ಎಂಬುದಕ್ಕೆ ಸಂಶಯವಿಲ್ಲ. ಅಕ್ಟೋಬರ್ 2019ರಲ್ಲಿ ನಡೆದ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯ ನಂತರ ಅಲ್ಲಿನ ರಾಜಕೀಯ ಸನ್ನಿವೇಶದಲ್ಲಿ ಹಿಂದೆ ಯಾರೂ ಊಹಿಸಲಾರದ ಭಾರಿ ಬದಲಾವಣೆಗಳು ಸಹ ಕಂಡವು.

2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನಾ ಎನ್.ಡಿ.ಎ ಕೂಟದ ಭಾಗವಾಗಿ ಮತ್ತು ಎನ್.ಸಿ.ಪಿ ಮತ್ತು ಕಾಂಗ್ರೆಸ್ ಯು.ಪಿ.ಎ ಕೂಟದ ಭಾಗವಾಗಿ ಸ್ಪರ್ಧಿಸಿದ್ದವು. ಬಿಜೆಪಿ 105 ಮತ್ತು ಶಿವಸೇನಾ 56 ಸೀಟು ಗಳಿಸಿ ಎನ್.ಡಿ.ಎ ಕೂಟಕ್ಕೆ ಒಟ್ಟು 288 ಸೀಟುಗಳ ಸದನದಲ್ಲಿ ನಿಚ್ಚಳ ಬಹುಮತ ಬಂದಿತ್ತು. ಎನ್.ಸಿ.ಪಿ 54 ಮತ್ತು ಕಾಂಗ್ರೆಸ್ 44 ಸೀಟುಗಳಿಗೆ ತೃಪ್ತಿಪಡಬೇಕಾಗಿತ್ತು. ಆದರೆ ಮುಖ್ಯಮಂತ್ರಿ ಯಾರಾಗಬೇಕು ಎಂಬುದರ ಬಗ್ಗೆ ತೀವ್ರ ವಿವಾದಯೆದ್ದು ಬಿಜೆಪಿ–ಶಿವಸೇನಾ ಸಂಬಂಧ ಕಡಿದು ಬಿತ್ತು. ಇದರ ಲಾಭ ಪಡೆದ ಶಿವಸೇನಾವನ್ನು ಮುಖ್ಯಮಂತ್ರಿ ಪದವಿಯನ್ನು ಕೊಟ್ಟು ಎನ್.ಸಿ.ಪಿ– ಕಾಂಗ್ರೆಸ್ ಸಹ ಇರುವ ಮಹಾರಾಷ್ಟ್ರ ವಿಕಾಸ ಅಘಾಡಿ (ಎಂ.ವಿ.ಎ) ಎಂಬ ಹೊಸ ರಂಗಕ್ಕೆ ಎನ್.ಸಿ.ಪಿ ನಾಯಕ ಶರದ್ ಪವಾರ್ ಆಹ್ವಾನಿಸಿದರು. ಈ ಸರಕಾರ ರಚನೆಯಾಗಿ ಜೂನ್ 2022 ವರೆಗೆ ಸುಮಾರು ಎರಡುವರೆ ವರ್ಷ ಕಾಲ ಸಾಕಷ್ಟು ಉತ್ತಮವಾಗಿಯೇ ಕೆಲಸ ಮಾಡಿತು. ವಿಶೇಷವಾಗಿ ಕೊರೊನಾ ಅವಧಿಯಲ್ಲಿ ಜನನಿಬಿಡ ಮುಂಬಯಿ ಮತ್ತಿತರ ಕಡೆ ಗಂಭೀರ ಸವಾಲುಗಳನ್ನು ನಿರ್ವಹಿಸಿತು,

ಬಿಜೆಪಿಯ ಡಬಲ್ ಆಪರೇಶನ್

ಒಂದು ರಾಜ್ಯ ಹೀಗೆ ಶಾಶ್ವತವಾಗಿ ತನ್ನ ಕೈ ಬಿಟ್ಟು ಹೋಗುವುದನ್ನು ಸಹಿಸಲಾಗದ ಬಿಜೆಪಿ ಸೇಡಿನ ಕ್ರಮ ಕೈಗೊಂಡಿತು. ಶಿವಸೇನಾ ಪಕ್ಷದ ಮೇಲೆ 'ಆಪರೇಶನ್ ಕಮಲ' ನಡೆಸಿತು. ಶಿವಸೇನಾದ ನಾಯಕ ಏಕನಾಥ್ ಶಿಂಧೆಯನ್ನು ಬುಟ್ಟಿಗೆ ಹಾಕಿಕೊಂಡು 56 ಶಾಸಕರಲ್ಲಿ 44 ಶಾಸಕರ ಮೇಲೆ 'ಆಪರೇಶನ್' ನಡೆಸಿತು. ಅವರನ್ನು ಬಿಜೆಪಿ ಆಡಳಿತದ ರಾಜ್ಯಗಳಾದ ಗುಜರಾತ್, ಆಸ್ಸಾಂ, ಗೋವಾಗಳಲ್ಲಿ ರೆಸಾರ್ಟು 7–ಸ್ಟಾರ್ ಹೊಟೆಲುಗಳಲ್ಲಿ ಕೂಡಿಟ್ಟು ವಿಧಾನಸಭೆಯಲ್ಲಿ ವಿಶ್ವಾಸ ಮತದ ದಿನವೇ ಮುಂಬಯಿಗೆ ಕರೆ ತರಲಾಯಿತು. ಈ ಸನ್ನಿವೇಶದಲ್ಲಿ ಎಂ.ವಿ.ಎ ಸರಕಾರ ಬಹುಮತ ಕಳೆದುಕೊಂಡು ಮುಖ್ಯಮಂತ್ರಿಯಾಗಿ ಉದ್ಭವ ಠಾಕ್ರೆ ರಾಜೀನಾಮೆ ಕೊಡಬೇಕಾಯಿತು. ಇದು ಮಹಾರಾಷ್ಟ್ರದ ಜನತೆಗೆ ಶಾಕ್ ನೀಡಿತು. ಜನತೆಯ ಆಕ್ರೋಶ ಮತ್ತು ಮುಂದಿನ ಚುನಾವಣೆಗೆ ಹೆದರಿ ಕೆಲವರು ವಾಪಸು ಹೋಗಬಹುದು ಎಂಬ ಬೀತಿ ಬಿಜೆಪಿಯನ್ನು ಸದಾ ಕಾಡುತ್ತಿತ್ತು. ಮುಂದಿನ ಚುನಾವಣೆಯ ವರೆಗೆ ಅಧಿಕಾರದಲ್ಲಿರಬೇಕಾದರೆ ಇನ್ನಷ್ಟು ಸಂಖ್ಯೆ ಹೆಚ್ಚಿಸಿಕೊಳ್ಳಬೇಕೆಂದು ಎನ್.ಸಿ.ಪಿ ಯ ಮೇಲೆ ಎರಡನೆಯ 'ಆಪರೇಶನ್' ಮಾಡಿದರು. ಅಜೀತ್ ಪವಾರ್ ಅವರನ್ನು ಬುಟ್ಟಿಗೆ ಹಾಕಿಕೊಂಡು ಅವರ ಬೆಂಬಲದಿಂದ 40 ಎನ್.ಸಿ.ಪಿ ಶಾಸಕರನ್ನು ಬಳಸಿ ಎನ್.ಸಿ.ಪಿ ಯನ್ನು ಒಡೆದರು. ಅಜೀತ್ ಪವಾರ್ ಅವರನ್ನು ಉಪಮುಖ್ಯಮಂತ್ರಿ ಮತ್ತು ಇತರ ಹಲವು ಶಾಸಕರನ್ನು ಮಂತ್ರಿ ಮಾಡಲಾಯಿತು. ಚುನಾವಣಾ ಕಮಿಶನ್ ಮೇಲಿನ ಪ್ರಭಾವ ಬಳಸಿ



ಒಡೆದು ಹೋದ ಶಿವಸೇನಾ ಮತ್ತು ಎನ್.ಸಿ.ಪಿ ಬಣಗಳೇ ಮೂಲ ಪಕ್ಷವೆಂದು ಘೋಷಿಸಿ ಮೂಲ ಚುನಾವಣಾ ಚಿಹ್ನೆ ಅವರಿಗೆ ಲಭಿಸುವಂತೆ ಮೋದಿ–ಶಾ ನೋಡಿಕೊಂಡರು.

ಇಷ್ಟು ದೊಡ್ಡ ಪ್ರಮಾಣದಲ್ಲಿ ಶಿವಸೇನಾ ಮತ್ತು ಎನ್.ಸಿ.ಪಿ ಶಾಸಕರನ್ನು ಪಕ್ಷ ಒಡೆಯುವಂತೆ ಮಾಡುವುದು ಹೇಗೆ ಸಾಧ್ಯವಾಯಿತು? ಬಿಜೆಪಿ ಮಾಮೂಲಿ ತಂತ್ರ ಬಳಸಿ ಅಂದರೆ ಕೋಟ್ಯಂತರ ರೂಪಾಯಿಗಳ ಹಣದಾಸೆ ಮತ್ತು/ಅಥವಾ ಸಿಬಿಐ–ಇಡಿ–ಐಟಿ ಯಂತಹ ಕೇಂದ್ರೀಯ ಸಂಸ್ಥೆಗಳನ್ನು ಬಳಸಿ ಜೈಲಿಗೆ ಕಳಿಸುವ ಬೆದರಿಕೆಯಿಂದ 'ಆಪರೇಶನ್' ಮಾಡಿದ್ದು. 2014ರಿಂದ 25 ಇತರ ಪಕ್ಷಗಳ ಪ್ರಮುಖರು ಬಿಜೆಪಿಗೆ ಪಕ್ಷಾಂತರ ಮಾಡಿದ್ದಾರೆ. ಅವರಲ್ಲಿ 12 ಅಂದರೆ ಸುಮಾರು ಅರ್ಧದಷ್ಟು ಮಹಾರಾಷ್ಟ್ರದವರು. ಇದರಿಂದಲೇ ಮಹಾರಾಷ್ಟ್ರದಲ್ಲಿ ಯಾವ ಪ್ರಮಾಣದ 'ಆಪರೇಶನ್' ನಡೆಯಿತು ಎಂದು ತಿಳಿಯುತ್ತದೆ. ಇವರಲ್ಲಿ ಮಹಾರಾಷ್ಟ್ರದ ತಲಾ 4 ಶಿವಸೇನಾ, ಎನ್.ಸಿ.ಪಿ, ಕಾಂಗ್ರೆಸ್ ನ ನಾಯಕರು ಇದ್ದರು. ಈ ನಾಯಕರ ವಿರುದ್ಧ ಗುರುತರ ಭ್ರಷ್ಟಾಚಾರದ ಆಪಾದನೆಗಳಿದ್ದು ಅದನ್ನು ಬಳಸಿ ಅವರು ಜೈಲಿಗೆ ಹೋಗದಿರಬೇಕಾದರೆ ಇಷ್ಟು ಶಾಸಕರನ್ನು ತರಬೇಕೆಂದು ವಿಧಿಸಲಾಯಿತು. ಇವರಲ್ಲಿ ಪ್ರಮುಖರು, ಅಜೀತ್ ಪವಾರ್, ಪ್ರಫುಲ್ಲ ಪಟೇಲ್, ಛಗನ್ ಭುಜಬಲ್, ಅಶೋಕ ಚೌಹಾನ್. ಉದಾಹರಣೆಗೆ ಅಜೀತ್ ಪವಾರ್ ಅವರ ವಿರುದ್ಧ 70 ಸಾವಿರ ಕೋಟಿ ನೀರಾವರಿ ಹಗರಣ ಮತ್ತು 25,000 ಕೋಟಿ ರೂ ನ ಕೋಆಪರೇಟಿವ್ ಬ್ಯಾಂಕ್ ಹಗರಣದ ಆಪಾದನೆಗಳಿದ್ದವು. ಅದುವರೆಗೆ ಮಹಾರಾಷ್ಟ್ರದಲ್ಲಿ ಭ್ರಷ್ಟಾಚಾರ ಮತ್ತು ಪರಿವಾರವಾದದ ಪ್ರತೀಕವೆಂದೇ ಬಿಜೆಪಿ ಅಜೀತ್ ಪವಾರ್ ಅವರನ್ನು ತೀಕ್ಷ್ಣ ಟೀಕೆಗೆ ಗುರಿ ಮಾಡಿತ್ತು. ಆದರೆ ಬಿಜೆಪಿ ಜತೆ ಕೈಜೋಡಿಸಿದ ಕೂಡಲೇ ಈ ಹಗರಣದ ಕಲೆಗಳು'ಮೋದಿ–ಶಾ ವಾಶಿಂಗ್ ಪೌಡರ್' ಹಾಕಿದ ಕೂಡಲೇ ಮಾಯವಾದವು. ಅದೇ ರೀತಿ ರಾಜಾ ಠಾಕ್ರೆ (ಎಂ.ಎನ್.ಎಸ್) ಅವರನ್ನು ಇಡಿ–ಸಿಬಿಐ ಬೆದರಿಕೆ ಬಳಸಿ ಲೋಕಸಬಾ ಚುನಾವಣೆಯಲ್ಲಿ ಯಾವುದೇ ಸೀಟು ಕೊಡದೆ ಸಹ ಎನ್.ಡಿ.ಎ ಗೆ ಬೇಷರತ್ ಬೆಂಬಲ ಕೊಡುವಂತೆ ಮಾಡಲಾಯಿತು.

ಶಿವಸೇನೆ ಮತ್ತು ಎನ್.ಸಿ.ಪಿ ಯನ್ನು ನಾಶ ಮಾಡುವ ಬಿಜೆಪಿಯ 'ಡಬಲ್ ಆಪರೇಶನ್' ಮಹಾರಾಷ್ಟ್ರದ ಲೋಕಸಭಾ ಚುನಾವಣೆಯಲ್ಲಿ ಅದಕ್ಕೆ ಮುಳುವಾಗುವ ಆಗುವ ಲಕ್ಷಣಗಳು ಕಾಣುತ್ತಿವೆ. ಶಿವಸೇನಾ ಮತ್ತು ಎನ್.ಸಿ.ಪಿ ಯನ್ನು ಒಡೆಯಲಾಗಿದ್ದರೂ ಅವು ಕಾಂಗ್ರೆಸ್ ಜತೆ ಕಟ್ಟಿಕೊಂಡ ಮಹಾರಾಷ್ಟ್ರ ವಿಕಾಸ ಅಘಾಡಿ (ಎಂ.ವಿ.ಎ)ಯ ಭಾಗವಾಗಿ ಚುನಾವಣೆಗಳನ್ನು ಎದುರಿಸುತ್ತಿವೆ. ಎಂ.ವಿ.ಎ ಜಂಟಿ ಚುನಾವಣಾ ಸಭೆಗಳಿಗೆ ಭಾರೀ ಜನಸ್ಪಂದನೆ ವ್ಯಕ್ತವಾಗುತ್ತಿದ್ದು, ಭೀಕರ ಅನೈತಿಕ ಕ್ರಮಗಳಿಂದ ಒಡೆಯಲಾದ ಶಿವಸೇನಾ ನಾಯಕ ಉದ್ಭವ ಠಾಕ್ರೆ ಮತ್ತು ಎನ್.ಸಿ.ಪಿ.ಯ ಶರದ್ ಪವಾರ್ ಗೆ ಭಾರೀ ಅನುಕಂಪದ ಅಲೆ ಇದಕ್ಕೆ ಒಂದು ಕಾರಣವೆಂದು ಹೇಳಲಾಗಿದೆ.

ಈರುಳ್ಳಿ, ಕಬ್ಬು ಮತ್ತಿತರ ರೈತರ ಆಕ್ರೋಶ

ಉದ್ಧವ ಠಾಕ್ರೆ ಮತ್ತು ಶರದ್ ಪವಾರ್ ಗೆ ಅನುಕಂಪದ ಅಲೆ ಮಾತ್ರವಲ್ಲದೆ, ಇನ್ನೂ ಹಲವು ಕಾರಣಗಳಿಗೆ ಬಿಜೆಪಿ ಡಬ್ಬಲ್ ಇಂಜಿನ್ ಸರಕಾರದ ವಿರುದ್ಧ ತೀವ್ರ ಅತೃಪ್ತಿಯ ಅಲೆಯಿದೆ. ದೇಶದ ಇತರ ಭಾಗಗಳಂತೆ ಮಹಾರಾಷ್ಟ್ರದಲ್ಲಿ ಸಹ ಕೃಷಿ ಬಿಕ್ಕಟ್ಟು, ನಿರುದ್ಯೋಗ, ಬೆಲೆಏರಿಕೆ, ರೇಶನ್ ಇತ್ಯಾದಿ ಜನರ ನಿಜವಾದ ಸಮಸ್ಯೆಗಳು ಈ ಚುನಾವಣೆಗಳಲ್ಲಿ ಮುನ್ನೆಲೆಗೆ ಬಂದಿವೆ.

ಹಲವು ಹಣದ ಬೆಳೆಗಳ ತವರಾದ ಮಹಾರಾಷ್ಟ್ರದಲ್ಲಿ ಕೃಷಿ ಲಾಗುವಾಡುಗಳ ಬೆಲೆ ಏರಿಕೆ, ಸಾಲಬಾಧೆ, ಉತ್ಪಾದನಾ ವೆಚ್ಚ ತೂಗಿಸುವ ಕನಿಷ್ಠ ಬೆಂಬಲ ಬೆಲೆಯ ಅಲಭ್ಯತೆಯಿಂದ ಈ ರಾಜ್ಯ ರೈತರ ಆತ್ಮಹತ್ಯೆಯಲ್ಲಿ ಹಲವು ವರ್ಷಗಳಿಂದ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ರೈತರ ಆತ್ಮಹತ್ಯೆಗಳ ಸಂಖ್ಯೆ 2023ರಲ್ಲಿ ಹಿಂದಿನ ವರ್ಷಕ್ಕಿಂತ ಏರಿಕೆ ಕಂಡಿದ್ದು 2527ಕ್ಕೆ (ಎನ್.ಸಿ.ಆರ್.ಬಿ ಅಂಕಿ–ಅಂಶ) ಏರಿದೆ. ಕಳೆದ ಕೆಲವು ವರ್ಷಗಳ ನೆರೆ, ಬರ ಪರಿಸ್ಥಿತಿಯನ್ನು ಇನ್ನಷ್ಟು ದುರ್ಭರಗೊಳಿಸಿದೆ.

ಈರುಳ್ಳಿ ರಫ್ತಿನ ಮೇಲೆ ಡಿಸೆಂಬರ್ 2023ರಲ್ಲಿ ನಿಷೇಧ ಹೇರಿದ ಬಿಜೆಪಿ ಕೇಂದ್ರ ಸರಕಾರದ ಕ್ರಮದಿಂದಾಗಿ ಈರುಳ್ಳಿ ಬೆಲೆ ಪ್ರತಿ ಕ್ವಿಂಟಾಲ್ ಗೆ 1200–1500ಕ್ಕೆ ಕುಸಿಯಿತು. ಇದು ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆಯಿದ್ದು ರೈತರ ತೀವ್ರ ಆಕ್ರೋಶ, ಪ್ರತಿಭಟನೆಗಳಿಗೆ ಕಾರಣವಾಯಿತು. ಚುನಾವಣೆಯ ಮೇಲೆ ಇದರ ಪರಿಣಾಮದಿಂದ ಆತಂಕಿತರಾಗಿ ಮೇ ಮೊದಲ ವಾರದಲ್ಲಿ ರಫ್ತು ನಿಷೇಧ ತೆಗೆಯಲಾಯಿತು. ಇದರ ಪರಿಣಾಮವಾಗಿ ಈರುಳ್ಳಿ ಬೆಲೆ ಪ್ರತಿ ಕ್ವಿಂಟಾಲ್ ಗೆ 2200–2500ಕ್ಕೆ ಏರಿತು. ಆದರೆ ನಿಷೇಧ ತೆಗೆಯುವ ಭಾಗವಾಗಿ ರಫ್ತಿಗೆ ವಿಧಿಸಿದ ಪ್ರತಿಟನ್ ಗೆ 550 ಡಾಲರಿನ ಕನಿಷ್ಠ ರಫ್ತು ಬೆಲೆ ಮತ್ತು ಶೇ.40 ರಫ್ತು ಸುಂಕದ ಷರತ್ತುಗಳ ಪರಿಣಾಮ ಅರ್ಥವಾಗುತ್ತಿದ್ದಂತೆ ಎರಡೇ ದಿನದಲ್ಲಿ ಮತ್ತೆ 1200–1500ಕ್ಕೆ ಕುಸಿಯಿತು. ಈ ರೈತ–ವಿರೋಧಿ ಕ್ರಮಗಳಿಂದ ರೈತರು ಎಷ್ಟು ಆಕ್ರೋಶಿತರಾಗಿದ್ದರೆಂದರೆ ಮೇ 15ರಂದು ನಾಸಿಕ್ ಜಿಲ್ಲೆಯ ಡಿಂಡೋರಿ ಕ್ಷೇತ್ರದಲ್ಲಿ ಮೋದಿ ಅವರ ಬಹಿರಂಗ ಸಭೆಯಲ್ಲೇ ತೀವ್ರ ಪ್ರತಿಭಟನೆ ನಡೆಸಿದರು.

ಇದೇ ರೀತಿ ವಿದರ್ಭ, ಮರಾಠವಾಡಾದ ಪ್ರಮುಖ ಬೆಳೆಗಳಾದ ಹತ್ತಿ ಮತ್ತು ಸೋಯಾ ಬೀನ್ ಗಳನ್ನು ಬೆಳೆಯುವ ರೈತರು ಸಹ ಅಷ್ಟೇನೂ ಲಾಭದಾಯಕವಲ್ಲದ ಕನಿಷ್ಠ ಬೆಂಬಲ ಬೆಲೆ ಸಿಗದೆ ಆಕ್ರೋಶಿತರಾಗಿದ್ದಾರೆ. ರಾಜ್ಯದ ಪಶ್ಚಿಮ ಭಾಗದ ಕಬ್ಬು ಮತ್ತು ಡೈರಿ ರೈತರು ಸಹ ಗಂಭಿರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಲಾಭದಾಯಕವಲ್ಲದ ಕನಿಷ್ಠ ಬೆಂಬಲ ಬೆಲೆ ಸಿಗದಿರುವುದು ಮಾತ್ರವಲ್ಲ, ಸಕ್ಕರೆ ರಫ್ತು ಮತ್ತು ಇಥನೋಲ್ ಉತ್ಪಾದನೆಯಲ್ಲಿ (ಸಕ್ಕರೆ ಕಾರ್ಖಾನೆಗಳ ಉಪ–ಉತ್ಪನ್ನವಾದ) ಕಾಕಂಬಿಯ ಬಳಕೆಯ ನಿಷೇಧ ಕಬ್ಬು ರೈತರನ್ನು ಇನ್ನಷ್ಟು ಕಂಗೆಡಿಸಿದೆ.

ನಿರುದ್ಯೋಗ ಮತ್ತು ಮೀಸಲಾತಿ

ಇತ್ತೀಚಿನ ಎರಡು ಸರಕಾರಿ ನೇಮಕಾತಿಗೆ ಬಂದ ಅರ್ಜಿಗಳ ಸಂಖ್ಯೆ ರಾಜ್ಯದಲ್ಲಿ ನಿರುದ್ಯೋಗದ ಭೀಕರ ಚಿತ್ರಣವನ್ನು ಕೊಡುತ್ತದೆ. ಮಾರ್ಚ್–ಎಪ್ರಿಲ್ ನಲ್ಲಿ ಪೊಲೀಸ್ ಪಡೆಯಲ್ಲಿ 17,471 ಹುದ್ದೆಗಳ ಭರ್ತಿಗೆ ಅರ್ಜಿ ಕರೆದಾಗ, 17.76 ಲಕ್ಷ ಅರ್ಜಿಗಳು ಬಂದವು. ಅವುಗಳಲ್ಲಿ ಶೇ.41 ಪದವೀಧರ, ಡಬ್ಬಲ್ ಪದವೀಧರರು ಇದ್ದರು. ಅದೇ ರೀತಿ 1800 ಜೈಲು ಗಾರ್ಡಿನ ಹುದ್ದೆಗಳಿಗೆ 3.72 ಲಕ್ಷ ಅರ್ಜಿಗಳು ಬಂದವು. ರೇಗಾ ರಾಜ್ಯದಲ್ಲಿ ಎಂದೂ ಸರಿಯಾಗಿ ಜಾರಿಯಾಗದೆ ಗ್ರಾಮೀಣ ನಿರುದ್ಯೋಗದ ಅಲ್ಪ ಪರಿಹಾರಕ್ಕೂ ಸಹಾಯಕವಾಗಿಲ್ಲ.

ಇನ್ನೊಂದು ಬಿಜೆಪಿಯ ಪುಟ 12 ಕ್ಕೆ

ಮಹಾರಾಷ್ಟ್ರ: ಬಿಜೆಪಿಯ 'ಡಬಲ್ ಆಪರೇಶನ್' ಅದಕ್ಕೆ ಮುಳುವಾಗುತ್ತಾ......

ಪುಟ 11 ರಿಂದ

ವಿರುದ್ಧ ಆಕ್ರೋಶಕ್ಕೆ ಕಾರಣವಾದ ವಿಷಯವೆಂದರೆ, ಮಹಾರಾಷ್ಟ್ರದಲ್ಲಿ ಸ್ಥಾಪಿತವಾಗಲು ಉದ್ದೇಶಿಸಿದ್ದ ಹಲವು ಸಾರ್ವಜನಿಕ–ಖಾಸಗಿ ಕೈಗಾರಿಕೆಗಳು, ಪ್ರಾಜೆಕ್ಟುಗಳನ್ನು ಮೋದಿ–ಶಾ ಪ್ರಭಾವದಿಂದ ಗುಜರಾತಿಗೆ ವರ್ಗಾಯಿಸಲಾಯಿತು. ಬಿಜೆಪಿಗೆ ಕರ್ನಾಟಕದಂತೆ ಮಹಾರಾಷ್ಟ್ರದಲ್ಲೂ 'ರಾಜ್ಯ–ವಿರೋಧಿ' ಪಟ್ಟ ಬಂದಿದೆ.

ಕೃಷಿ ಬಿಕ್ಕಟ್ಟು ಮತ್ತು ಭೀಕರ ನಿರುದ್ಯೋಗದ ಈ ಪರಿಸ್ಥಿತಿಯಿಂದಾಗಿ ತೀವ್ರ ಸಾಮಾಜಿಕ ಅಶಾಂತಿ ಉಂಟಾಗಿದ್ದು, ಶಿಕ್ಷಣ ಮತ್ತು ಉದ್ಯೋಗದಲ್ಲಿಮೀಸಲಾತಿಗೆಹಕ್ಕೊತ್ತಾಯದರೂಪ ಪಡೆದಿದೆ. ಕೃಷಿ ಬಿಕ್ಕಟ್ಟು ಮತ್ತು ಭೀಕರ ನಿರುದ್ಯೋಗ ರಾಜ್ಯದ ಎಲ್ಲ ಸಮುದಾಯಗಳನ್ನು ಗಾಢವಾಗಿ ತಟ್ಟಿದ್ದು, ರಾಜ್ಯದಲ್ಲಿ ಪ್ರಬಲವೂ ಆಗಿರುವ ಮತ್ತು ಗಮನಾರ್ಹ (ಶೇ.28ರಷ್ಟು) ಪ್ರಮಾಣದಲ್ಲಿರುವ ಮರಾಠಾ ಸಮುದಾಯವನ್ನೂ ಇದು ಬಿಟ್ಟಿಲ್ಲ. ಈ ಸಮುದಾಯದ ಮೇಲ್ಪದರ ಸಾಮಾಜಿಕ ಆರ್ಥಿಕ ರಾಜಕೀಯವಾಗಿ ಪ್ರಬಲವಾಗಿದ್ದರೂ, ಕೆಳಪದರಗಳ ಪರಿಸ್ಥಿತಿ ಸಾಕಷ್ಟು ಕೆಟ್ಟದಿದೆ. ಮರಾಠಾ ಸಮುದಾಯದ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯ ಕುರಿತು ನ್ಯಾಯಮೂರ್ತಿ ಸುಶೀಲ್ ಶುಕ್ರೆ ಕಮಿಶನ್ 2024ರಲ್ಲಿ ವರದಿ ಸಲ್ಲಿಸಿದೆ. ಹಿಂದೆ ನ್ಯಾಯಮೂರ್ತಿ ಗಾಯಕವಾಡ್ ಕಮಿಶನ್ 2018ರಲ್ಲಿ ಸಲ್ಲಿಸಿದ ವರದಿಗೆ ಹೋಲಿಸಿದರೆ ಈಗ ಪರಿಸ್ಥಿತಿ ಸಾಕಷ್ಟು ಬಿಗಡಾಯಿಸಿದೆ.

ಇದರ ಪ್ರಕಾರ ರಾಜ್ಯದ ಜನಸಂಖ್ಯೆಯಲ್ಲಿ ಶೇ.28ರಷ್ಟಿರುವ ಮರಾಠಾ ಸಮುದಾಯದ ಸುಮಾರು ಶೇ.45 ಜನ ಕೂಲಿ ಮಾಡಿ ಬದುಕುತ್ತಿದ್ದಾರೆ. ಬಾಲ್ಯವಿವಾಹ ಶೇ.0.32 ನಿಂದ ಶೇ. 13.7 ಕ್ಕೇರಿದೆ. ಸರಕಾರಿ ಉದ್ಯೋಗಗಳಲ್ಲಿ ಪ್ರಮಾಣ ಶೇ. 14.6ರಿಂದ ಶೇ.9 ಕ್ಕೆ ಇಳಿದಿದೆ. ಭೂಹೀನರ ಪ್ರಮಾಣ ಶೇ.8ರಿಂದ ಶೇ.31.2 ಕ್ಕೇರಿದೆ. ಆತ್ಮಹತ್ಯೆಗಳಲ್ಲಿ ಪ್ರಮಾಣ ಶೇ.80.3 ರಿಂದ ಶೇ.94.1 ಕ್ಕೇರಿದೆ. ಇತ್ತೀಚಿನ ಅವಧಿಯಲ್ಲಿ ಮನೋಜ್–ಜಾರಂಗೆ ಪಾಟೀಲ್ ನೇತೃತ್ವದಲ್ಲಿ ಒಬಿಸಿ ಕೋಟಾದಿಂದ ಮರಾಠಾ ಸಮುದಾಯಕ್ಕೆ ಶೇ. 10 ಮೀಸಲಾತಿ ಕೊಡುವಂತೆ ದೀರ್ಘ ಪಾದಯಾತ್ರೆ, ಶಾಸಕರ ಭವನಕ್ಕೆ ಲಗ್ಗೆ ಇತ್ಯಾದಿ ಭಾರೀ ಚಳುವಳಿ ನಡೆಯಿತು.

ಇದಕ್ಕೆ ಮಣಿದು ಬಿಜೆಪಿ ಸರಕಾರ ಮರಾಠಾ ಸಮುದಾಯಕ್ಕೆ ಶೇ.10 ಪ್ರತ್ಯೇಕ ಮೀಸಲಾತಿಗೆ ನಿರ್ಧರಿಸಿತು. ಇದು ಆರ್ಥಿಕ ದುರ್ಬಲ ವರ್ಗಗಳಿಗೆ ಶೇ.10 ಸೇರಿದಂತೆ ಶೇ. 62 ಇರುವ ಒಟ್ಟು ಶೇ. 62 ಮೀಸಲಾತಿಗೆ ಹೆಚ್ಚುವರಿಯಾಗಿರುವಂಥದ್ದು. ಇದನ್ನು ಸುಪ್ರೀಂ ಕೋರ್ಟು ವಜಾ ಮಾಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಒಬಿಸಿ ಮೀಸಲಾತಿಯ ಪಾಲನ್ನು ಕೊಡಬೇಕೆಂದು ಮನೋಜ್–ಜಾರಂಗೆ ಪಾಟೀಲ್ ಒತ್ತಾಯಿಸುತ್ತಿದ್ದಾರೆ. ಇದನ್ನು ಇತರ ಒಬಿಸಿ ಸಮುದಾಯಗಳು ಬಲವಾಗಿ ವಿರೋಧಿಸುತ್ತಿವೆ. ಇದು ಸಾಮಾಜಿಕ ವಿಭಜನೆಗೆ ಕಾರಣವಾಗಿದ್ದು ಇದರ ರಾಜಕೀಯ ಪರಿಣಾಮವೂ ಖಂಡಿತ ಲೋಕಸಭಾ ಚುನಾವಣೆಗಳ ಮೇಲೆ ಆಗುತ್ತದೆ.

ಶಿಕ್ಷಣ, ಆರೋಗ್ಯ, ರೇಶನ್

ಶಿಕ್ಷಣ ಕ್ಷೇತ್ರದಲ್ಲೂ ಬಿಜೆಪಿ ಹಲವು ಜನ–ವಿರೋಧಿ ಕ್ರಮಗಳನ್ನು ಕೈಗೊಂಡಿದೆ. ಸರಕಾರಿ ಶಾಲೆ ಒಂದು ಕಿಮಿ ಒಳಗೆ ಶಾಲೆಯಿದ್ದರೆ, ಖಾಸಗಿ ಶಾಲೆಗಳು ಆರ್.ಟಿ.ಇ ಕಾನೂನು ಪ್ರಕಾರ ಕೊಡಬೇಕಾದ ಶೇ. 25 ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಸೀಟುಗಳನ್ನು ಕೊಡಬೇಕಾಗಿಲ್ಲವೆಂಬ ತಿದ್ದುಪಡಿ ಇವುಗಳಲ್ಲಿ ಒಂದು. ಇದನ್ನು ಹೈಕೋರ್ಟು ರದ್ದು ಮಾಡಿದರೂ ಈ ಕ್ರಮದ ವಿರುದ್ಧ ಆಕ್ರೋಶ ಮುಂದುವರೆದಿದೆ. ಇದಲ್ಲದೆ ನೂರಾರು ಸರಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ.

ರಾಜ್ಯದ ಅಪೌಷ್ಟಿಕತೆ, ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಮಿಕರಿಗೆ ವೇತನ ಹೆಚ್ಚಳ ಮಾಡಲು ನಿರಾಕರಿಸಿ ಅವರ ಚಳುವಳಿಯನ್ನು ದಮನ ಮಾಡಿದ್ದರ ವಿರುದ್ಧ ಸರಕಾರದ ಕ್ರಮಗಳ ವಿರುದ್ಧವೂ ತೀವ್ರ ಆಕ್ರೋಶವಿದೆ. ರಾಜ್ಯದ ಆರೋಗ್ಯ ಮೂಲಸೌಕರ್ಯವನ್ನು ಉತ್ತಮ ಪಡಿಸುವಲ್ಲಿ ಬಿಜೆಪಿ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

ಐದು ಕೆಜಿ ಉಚಿತ ರೇಶನ್ ಕುರಿತು ಕೊಚ್ಚಿಕೊಳ್ಳುವ ಬಿಜೆಪಿ ಸರಕಾರ ಈ ವ್ಯವಸ್ಥೆಯನ್ನು ಸಹ ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ. ಅಗ್ಗದ ಬೆಲೆಯ ರೇಶನ್ ಕಡಿತ ಮಾಡಿದೆ. ಹೊಸ ರೇಶನ್ ಕಾರ್ಡುಗಳನ್ನು ಕೊಡುತ್ತಿಲ್ಲ. ಸಾವಿರಾರು ಇರುವ ರೇಶನ್ ಕಾರ್ಡುಗಳನ್ನು ಬೋಗಸ್ ಎನ್ನುವ ನೆಪದಲ್ಲಿ ರದ್ದು ಮಾಡುತ್ತಿದೆ.


ಹೀಗೆ ಹಲವು ರಂಗಗಳಲ್ಲಿ ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಕ್ರಮಗಳು, ಅಕ್ರಮಗಳ ವಿರುದ್ಧ ಜನತೆಗೆ ತೀವ್ರ ಆಕ್ರೋಶವುಂಟಾಗಿದೆ. ಇದರ ರಾಜಕೀಯ ಪರಿಣಾಮ ಈ ಚುನಾವಣೆಯ ಫಲಿತಾಂಶಗಳಲ್ಲಿ ಖಂಡಿತ ಕಾಣಲಿದೆ.

2019ರ ಫಲಿತಾಂಶ

ಕಳೆದ 2019ರ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಶಿವಸೇನಾದ ಎನ್.ಡಿ.ಎ ಕೂಟ 48 ಸೀಟುಗಳಲ್ಲಿ 41 ಸೀಟು ಹಾಗೂ ಶೇ.51.4 ಮತ ಪಡೆಯುವ ಮೂಲಕ ತನ್ನ ಪ್ರಾಬಲ್ಯ ಮೆರೆದಿತ್ತು. ಆಗ ದೇಶದ ಇತರ ರಾಜ್ಯಗಳಲ್ಲಿದ್ದಂತೆ ಮಹಾರಾಷ್ಟ್ರದಲ್ಲೂ ಪುಲ್ವಾಮಾ ಭಯೋತ್ಪಾದಕ ಕೃತ್ಯ ಮತ್ತು ಬಾಲಕೋಟ್ ಪ್ರತಿದಾಳಿಯ "ಉಗ್ರ ರಾಷ್ಟ್ರೀಯವಾದಿ' ಅಲೆ ತೀವ್ರ ಪರಿಣಾಮ ಬೀರಿತ್ತು. ಮಹಾರಾಷ್ಟ್ರದಲ್ಲಿ ಇನ್ನೊಂದು ಅಂಶ ಎನ್.ಡಿ.ಎ ಕೂಟದ ಭಾರೀ ಗೆಲುವಿಗೆ ಕಾರಣವಾಗಿತ್ತು. ಆ ಚುನಾವಣೆಯಲ್ಲಿ ಪ್ರಕಾಶ್ ಅಂಬೇಡ್ಕರ್ ಅವರ ನಾಯಕತ್ವದ 'ವಂಚಿತ ಬಹುಜನ ಅಘಾಡಿ' (ವಿಬಿಎ) ಮತ್ತು ಒವೈಸಿ ಅವರ ಎಐಎಂಐಎಂ ಪಕ್ಷಗಳ ಕೂಟ ಎಲ್ಲ 48 ಸೀಟುಗಳಲ್ಲಿ ಸ್ಪರ್ಧಿಸಿತ್ತು. ಎಐಎಂಐಎಂ ನ 1 ಸೀಟು ಬಿಟ್ಟರೆ ಯಾವ ಸೀಟು ಗಳಿಸದಿದ್ದರೂ ಶೇ. 7.7 ಮತ ಗಳಿಸಿತ್ತು. ವಿಬಿಎ+ಎಐಎಂಐಎಂ ಕೂಟದ ಸ್ಪರ್ಧೆ ಕನಿಷ್ಠ 10 ಸೀಟುಗಳಲ್ಲಿ ಎನ್.ಡಿ.ಎ ಗೆಲುವಿಗೆ ಕಾರಣವಾಗಿತ್ತು.

2024ರ ಸ್ಪರ್ಧೆ ಮತ್ತು ಟ್ರೆಂಡ್

ಈ ಬಾರಿ ಎರಡೂ ಕೂಟಗಳು ಎಲ್ಲ ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ. ಎಂವಿಎ ಕೂಟ ಎಪ್ರಿಲ್ 9 ರಂದೇ ತನ್ನ ಪತ್ರಿಕಾ ಗೋಷ್ಠಿಯಲ್ಲಿ ಸೀಟು ಹಂಚಿಕೆ ಘೋಷಿಸಿತು. ಶಿವಸೇನಾ (ಉದ್ಧವ ಠಾಕ್ರೆ ಬಣ) 21, ಕಾಂಗ್ರೆಸ್ 17 ಮತ್ತು ಎನ್.ಸಿ.ಪಿ (ಶರದ್ ಪವಾರ್ ಬಣ) 10 ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ. ಎನ್.ಡಿ.ಎ ಕೂಟದಲ್ಲಿ ಸೀಟು ಹಂಚಿಕೆ ಕಗ್ಗಂಟಾಗಿತ್ತು. ಮೂರು ವಾರಗಳ ನಂತರ ಅದೂ ಬರಿಯ ಪತ್ರಿಕಾ ಹೇಳಿಕೆಯ ಮೂಲಕ ಸೀಟು ಹಂಚಿಕೆ ಘೋಷಿಸಲಾಯಿತು. ಬಿಜೆಪಿ 28, ಶಿವಸೇನಾ (ಶಿಂದೆ) 15, ಮತ್ತು ಎನ್.ಸಿ.ಪಿ (ಅಜಿತ್ ಪವಾರ್ ಬಣ) 4 ಸೀಟುಗಳಲ್ಲಿ ಸ್ಪರ್ಧೆ ಘೋಷಿಸಲಾಯಿತು. ವಿಬಿಎ 38 ಸೀಟುಗಳಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸುತ್ತಿದೆ.



ಬಿಜೆಪಿ ತನ್ನ ವಿವಿಧ ಸ್ಕೀಮುಗಳ ಲಾಭಾರ್ಥಿಗಳನ್ನು ಸಂಪರ್ಕಿಸಿ ವ್ಯವಸ್ಥಿತವಾಗಿ ಪ್ರಚಾರ ಮಾಡಿತ್ತು. ಇದಲ್ಲದೆ ರಾಮಮಂದಿರ, ಸಿಎಎ, ಏಕರೂಪ ನಾಗರಿಕ ಸಂಹಿತೆ, ಕಲಮು 370 ಮುಂತಾದ ಅದರ ಹಿಂದುತ್ವ ವಿಷಯಗಳ ಪ್ರಚಾರ ನಡೆಸಿತ್ತು. ರಾಜ್ಯ ಸರಕಾರ ಅದರ ಕೈಯಲ್ಲಿ ಇದ್ದಿದ್ದು ಇವಕ್ಕೆಲ್ಲ ಸಹಾಯಕವಾಯಿತು. ಶಿವಸೇನಾ (ಶಿಂದೆ) 15, ಮತ್ತು ಎನ್.ಸಿ.ಪಿ (ಅಜಿತ್ ಪವಾರ್ ಬಣ) ಗಳಿಗೆ ಮೂಲ ಪಕ್ಷದ ಚಿಹ್ನೆ ದೊರಕಿದ್ದು ಎನ್.ಡಿ.ಎ ಗೆ ಸಹಾಯಕವಾಗಿಯೇ ಇತ್ತು. ಬಿಜೆಪಿ ಸ್ಟಾರ್ ಪ್ರಚಾರಕರ ಸಭೆಗಳು, ರೋಡ್ ಶೋ ಗಳು, ಕಾರ್ಪೊರೇಟ್ ಮಾಧ್ಯಮದ ಪ್ರಚಾರವೆಲ್ಲ ಎನ್.ಡಿ.ಎ ಪರವಾಗಿಯೇ ಇತ್ತು.

ಎನ್.ಡಿ.ಎ ಗೆ ಗಮನಾರ್ಹ ನಷ್ಟ ಖಚಿತ

ಈಗಾಗಲೇ ಹೇಳಿದ ಹಾಗೆ ಬಿಜೆಪಿ–ಎನ್.ಡಿ.ಎ ವಿರುದ್ಧ ಆಡಳಿತ–ವಿರೋಧಿ ಅತೃಪ್ತಿ ಆಕ್ರೋಶ ಅಲ್ಲದೆ, ಉದ್ಧವಠಾಕ್ರೆ, ಸರದ್ ಪವಾರ್ ಅವರಿಗೆ ಅನುಕಂಪದ ಅಲೆಯಂತೂ ಎಂ.ವಿ.ಎ ಪರವಾಗಿದೆ. ಇದು ಮೂಲ ಚಿಹ್ನೆ ಅವರಿಗೆ ದೊರೆಯದೇ ಇರುವುದನ್ನೂ ಮೀರಿ ಮುಖ್ಯ ಅಂಶವಾಗಬಹುದು. ಅಲ್ಲದೆ ಜಾತಿ ಸಮೀಕರಣಗಳೂ ಅದಕ್ಕೆ ವಿರುದ್ಧಾಗಿರುವ ಲಕ್ಷಣಗಳಿವೆ. ಸಾಮಾನ್ಯವಾಗಿ ಬಿಜೆಪಿ–ಎನ್.ಡಿ.ಎ ಪರವಾಗಿರುವ ಮರಾಠಾ ಸಮುದಾಯದ ದೊಡ್ಡ ವಿಭಾಗ ಅದರ ವಿರುದ್ಧ ತಿರುಗಿ ಬೀಳುವ ಸಾಧ್ಯತೆಯಿದೆ. ಕಳೆದ ಬಾರಿ ವಿಬಿಎ ಕೂಟದ ಪ್ರತಿಕೂಲ ಪರಿಣಾಮ ಈ ಬಾರಿ ಇರಲಿಕ್ಕಿಲ್ಲ. ವಿಬಿಎ ಮತ್ತು ಎಐಎಂಐಎಂ ಸೀಟು ಹೊಂದಾಣಿಕೆ ಈ ಬಾರಿ ಇಲ್ಲ. ಕಳೆದ ಬಾರಿ ಎಲ್ಲ ಕ್ಷೇತ್ರಗಳಲ್ಲಿ ಮುಸ್ಲಿಂ ಮತ್ತು ನವಬೌದ್ಧ ದಲಿತರ ಮತಗಳನ್ನು ಒಡೆದದ್ದು ಈ ಬಾರಿ ಪುನರಾವರ್ತನೆಯಾಗುವ ಸಾಧ್ಯತೆ ಕಡಿಮೆ. ವಿಬಿಎ ಯ ಅವಕಾಶವಾದಿ ರಾಜಕಾರಣವನ್ನು ದಲಿತ ಗುಂಪುಗಳೇ ಪ್ರಶ್ನಿಸಿವೆ. 36 ದಲಿತ ಗುಂಪುಗಳು, ದಲಿತ ಪ್ಯಾಂಥರ್ ಗುಂಪುಗಳು, ರಿಪಬ್ಲಿಕನ್ ಪಕ್ಷಗಳು ಒಟ್ಟಾಗಿ ವಿಬಿಎ ರಾಜಕಾರಣವನ್ನು ಟೀಕಿಸಿವೆ. ಈ ಎಲ್ಲಾ ಗುಂಪುಗಳು ಸೇರಿ ಪ್ರಗತಿಪರ ರಿಪಬ್ಲಿಕನ್ ಪಕ್ಷ ರಚಿಸಿ ಈ ಬಾರಿ ಎಂವಿಎ ಕೂಟವನ್ನು ಎಲ್ಲ ಸೀಟುಗಳಲ್ಲಿ ಬೆಂಬಲಿಸಲು ನಿರ್ಧರಿಸಿವೆ. ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನ ಉಳಿಸಿಕೊಳ್ಳುವುದು ಮನುವಾದಿಗಳನ್ನು ಸೋಲಿಸುವುದು ಆದ್ಯತೆಯೆಂದು ದಲಿತ ಶೋಷಿತ ಸಮುದಾಯಗಳಿಗೆ ಮನವಿ ಮಾಡಿವೆ. ವಿಬಿಎ ಗೆ ಮತ ಬಿಜೆಪಿ ಗೆ ಅನುಕೂಲಕರವಾಗುತ್ತದೆಯೆಂದು ವಿ.ಬಿ.ಎ. ಬೆಂಬಲಿಗರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದೆ. ಹೀಗಾಗಿ ವಿಬಿಎ ಸ್ಪರ್ಧೆ ಕಳೆದ ಬಾರಿಯಷ್ಟು ಪ್ರತಿಕೂಲವಾಲಿಕ್ಕಿಲ್ಲ.

ರಾಷ್ಟ್ರ ಮಟ್ಟದಲ್ಲಿ ಇಂಡಿಯಾ ಕೂಟದ ರಚನೆ ಮತ್ತು ರಾಷ್ಟ್ರ ಮಟ್ಟದಲ್ಲೂ ತೀವ್ರ ಬದಲಾವಣೆಯ ಸಾಧ್ಯತೆ ಹೊಸ ಉತ್ಸಾಹ ತಂದಿದೆ. ಕಾರ್ಪೊರೇಟ್ 'ಗೋದಿ ಮೀಡಿಯಾ'ಗಳನ್ನು ಬಯಲು ಮಾಡುವ, ನಿಜ ಪರಿಸ್ಥಿತಿಯ ಕುರಿತು ಮಾಹಿತಿ ನೀಡುವ, ಬಿಜೆಪಿ ಆಡಳಿತದ ಕಟು ಟೀಕೆ ಮತ್ತು ನೈಜ ವಿಷಯಗಳ ವಿಶ್ಲೇಷಣೆ ಮಾಡುವ ಹೊಸ ಮರಾಠಿ ಸಾಮಾಜಿಕ ಮಾಧ್ಯಮಗಳ ಉದಯ ಹಾಗೂ ಬೆಳವಣಿಗೆ ಇಂಡಿಯಾ ಕೂಟಕ್ಕೆ ಅನುಕೂಲಕರವಾಗಿದೆ. 'ನಿರ್ಭಯ ಬನೋ ಆಂದೋಲನ', 'ನಿರ್ಧಾರ್ ಮಹಾರಾಷ್ಟ್ರಾಚಾ' ಮುಂತಾದ ಹಲವು ನಾಗರಿಕ ಸಮಾಜದ ಗುಂಪುಗಳೂ ಬಿಜೆಪಿ–ಎನ್.ಡಿ.ಎ. ವಿರುದ್ಧ ಸ್ವತಂತ್ರವಾದ ಬಿರುಸಿನ ಪ್ರಚಾರ ಕೈಗೊಂಡಿದ್ದು ಇದೂ ಎಂವಿಎ ಕೂಟಕ್ಕೆ ಅನುಕೂಲಕರವಾಗಿದೆ. ದೇಶದ ಇತರ ಭಾಗಗಳಂತೆ ಮಹಾರಾಷ್ಟ್ರದಲ್ಲೂ ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರು "ಆಮದಾದ ಭ್ರಷ್ಟ ಸ್ಪರ್ಧಿ"ಗಳು ಮತ್ತು "ಪ್ರಾಮಾಣಿಕ ಬಿಜೆಪಿ ಕಾರ್ಯಕರ್ತರ ನಿರ್ಲಕ್ಷ್ಯ" ದಿಂದ ಬೇಸತ್ತು ಎಂದಿನ ಬಿರುಸಿನ ಕೆಲಸ ಮಾಡಿಲ್ಲ. ಹಾಗಾಗಿ ಬಿಜೆಪಿ ಪ್ರಬಲವಾದ ಪ್ರದೇಶಗಳಲ್ಲಿ ಮತದಾನ ಕಡಿಮೆಯಾಗಿದೆಯೆಂಬ ವರದಿಗಳಿವೆ.

ಇವೆಲ್ಲ ಸೇರಿ ಬಿಜೆಪಿ ಹಿಂದಿನ ಬಾರಿಗಿಂತ ಹಲವು ಸೀಟುಗಳನ್ನು ಕಳೆದುಕೊಳ್ಳುವುದು ಖಚಿತ. ಎನ್.ಡಿ.ಎ. 24 ಸೀಟುಗಳಿಗೆ ಕುಸಿದರೂ ಆಶ್ಚರ್ಯ ಪಡಬೇಕಾಗಿಲ್ಲವೆಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ. ●

ಯುಎಸ್ ನಲ್ಲಿ ಇಸ್ರೇಲಿ ನರಮೇಧದ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ: ಕುತರ್ಕ ಮತ್ತು ಮಾನವೀಯತೆಯ ನಡುವಿನ ಹೋರಾಟ



ಯುಎಸ್ ವಿದ್ಯಾರ್ಥಿಗಳ ಪ್ರತಿಭಟನೆಗಳು ನೆಲಸಿಗ ವಸಾಹತುಶಾಹಿಯ ನರಮೇಧದ ಬಗ್ಗೆ ಮತ್ತು ಝಿಯೋನಿಸ್ಟ್ ಆಳ್ವಿಕೆಯೊಂದಿಗೆ ಸಾಮ್ರಾಜ್ಯಶಾಹಿಯ ಶಾಮೀಲಿನ ಬಗ್ಗೆ ಅಸಹ್ಯತೆಯ ಭಾವದ, ಶಾಂತಿ ಮತ್ತು ಭ್ರಾತೃತ್ವಕ್ಕಾಗಿ ಮಾನವ ಕುಲದ ಅನ್ವೇಷಣೆಯ ಅಭಿವ್ಯಕ್ತಿಯಾಗಿವೆ. ಮತ್ತೊಂದೆಡೆ, ಯುಎಸ್ ಆಳುವ ವ್ಯವಸ್ಥೆಯ ಇಬ್ಬಂದಿ ಮಾತುಗಳು ಒಂದೆಡೆ ಶಾಂತಿಯ ಮಂತ್ರವನ್ನು ಪಠಿಸುತ್ತಲೇ, ಮುಗ್ಧ ನಾಗರಿಕರ ಮೇಲೆ ಕ್ರೌರ್ಯವನ್ನು ವಿರೋಧಿಸುತ್ತಲೇ, ಅಂತಹ ಕ್ರೌರ್ಯವನ್ನು ನಡೆಸಲು ಶಸ್ತ್ರಾಸ್ತ್ರಗಳ ಪೂರೈಕೆಯನ್ನು ಮುಂದುವರಿಸುತ್ತಿವೆ. ಒಂದಡೆ, ವಿದ್ಯಾರ್ಥಿಗಳ ಕಡೆಯಿಂದ ಮಾನವೀಯತೆಗೆ ತದ್ವಿರುದ್ಧವಾಗಿ ಇನ್ನೊದೆಡೆಯಲ್ಲಿ ಕಾಣುತ್ತಿರುವುದು ಕುತರ್ಕ. ಮೊದಲನೆಯದು ಭವಿಷ್ಯದ ಭರವಸೆಯ ಮುನ್ಸೂಚನೆಯಾಗಿದ್ದರೆ, ಎರಡನೆಯದು ತತ್ತರಿಸುತ್ತಿರುವ ಸಾಮ್ರಾಜ್ಯಶಾಹಿಯ ಹತೋಟಿ ಮೀರಿದ ಅಪ್ರಾಮಾಣಿಕತೆಯನ್ನು ಪ್ರತಿನಿಧಿಸುತ್ತದೆ. ಯುಎಸ್ ಕ್ಯಾಂಪಸ್‌ಗಳಲ್ಲಿ ಮಾನವೀಯತೆ ಮತ್ತು ಕುತರ್ಕದ ನಡುವೆ ನಡೆಯುತ್ತಿರುವ ಈ ಹೋರಾಟವು ಮುಂದಿನ ದಿನಗಳಲ್ಲಿ ನಿರ್ಣಾಯಕ ವರ್ಗ ಹೋರಾಟಗಳ ಮುನ್ಸೂಚನೆಯಾಗಿದೆ.

ಅಮೆರಿಕನ್ ವಿಶ್ವವಿದ್ಯಾನಿಲಯ ಕ್ಯಾಂಪಸ್‌ಗಳಲ್ಲಿ ಇಸ್ರೇಲ್‌ನ ಮಿಲಿಟರಿ ಯಂತ್ರದೊಂದಿಗೆ ಸಂಬಂಧವಿರುವ ಕಂಪನಿಗಳಿಂದ "ದೂರ ಸರಿಯಬೇಕು" ಎಂದು ಒತ್ತಾಯಿಸುವ ಪ್ರಸಕ್ತ ಪ್ರತಿಭಟನೆಗಳು ಅರವತ್ತರ ದಶಕದ ಉತ್ತರಾರ್ಧದಲ್ಲಿ ಮತ್ತು ಎಪ್ಪತ್ತರ ದಶಕದ ಆರಂಭದಲ್ಲಿ ವಿಯೆಟ್ನಾಂ ಯುದ್ಧವನ್ನು ಕೊನೆಗೊಳಿಸುವಂತೆ ಒತ್ತಾಯಿಸಿ ಈ ಕ್ಯಾಂಪಸ್‌ಗಳನ್ನೆಲ್ಲ ಆವರಿಸಿದ್ದ ಪ್ರತಿಭಟನೆಗಳನ್ನು ನೆನಪಿಸುತ್ತದೆ. ಆದರೆ ಒಂದು ಪ್ರಮುಖ ವ್ಯತ್ಯಾಸವಿದೆ: ಯುಎಸ್ ಆಗ ನೇರವಾಗಿ ಯುದ್ಧದಲ್ಲಿ ಭಾಗಿಯಾಗಿತ್ತು, ಆದರೆ ಇಂದು ಅದು ನೇರವಾಗಿ ಭಾಗಿಯಾಗಿಲ್ಲ. ಆದ್ದರಿಂದ ಆಗ ಮಿಲಿಟರಿಯಲ್ಲಿ ಕಡ್ಡಾಯವಾಗಿ ಕೆಲಸ ಮಾಡಬೇಕಿತ್ತು. ಆದರೆ ಇಂದು ಹಾಗೇನಿಲ್ಲ. ಇದರಿಂದಾಗಿ ಈಗಿನ ವಿದ್ಯಾರ್ಥಿ ಪ್ರತಿಭಟನೆಗಳಲ್ಲಿ ಸ್ವಹಿತಾಸಕ್ತಿಯ ನೆರಳೂ ಇಲ್ಲ. ಅದೇ ಕಾರಣದಿಂದಾಗಿ, ಆ ಯುದ್ಧದಲ್ಲಿ ಯುಎಸ್ ನೇರವಾಗಿ ತೊಡಗಿದ್ದು, ಪ್ರತಿದಿನ ಅಮೆರಿಕನ್ ಸಿಬ್ಬಂದಿಯ ದೈನಂದಿನ ಸಾವು–ನೋವುಗಳು ವಿಯೆಟ್ನಾಂ ಯುದ್ಧವನ್ನು ಕೊನೆಗೊಳಿಸಬೇಕೆಂದು ಯುಎಸ್ ನ ಆಳುವ ವ್ಯವಸ್ಥೆಯೊಳಗಿಂದಲೂ ಬರುತ್ತಿದ್ದ ಕರೆಗಳಲ್ಲಿ ಇರುತ್ತಿದ್ದ ಗಂಭೀರತೆ ಈ ಬಾರಿ ಬರುತ್ತಿರುವ ಕಾಣುತ್ತಿಲ್ಲ. ಯುಎಸ್ ನೇರವಾಗಿ ಯುದ್ಧದಲ್ಲಿ ತೊಡಗಿಲ್ಲ ಎಂಬುದು ವಿದ್ಯಾರ್ಥಿಗಳ ಪ್ರತಿಭಟನೆಗಳನ್ನು ಹೆಚ್ಚು ತಾತ್ವಿಕ ಮತ್ತು ಗಂಭೀರವಾಗಿಸಿದರೆ, ಆಳುವ ವ್ಯವಸ್ಥೆಯೊಳಗಿಂದ ಶಾಂತಿಯ ಕುರಿತು ಬರುವ ಮಾತುಗಳು ಅಷ್ಟೇನೂ ತಾತ್ವಿಕವಾಗಿಲ್ಲ, ಗಂಭೀರವಾಗಿಯೂ ಇಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ವಿದ್ಯಾರ್ಥಿಗಳ ನಡೆ ಶುದ್ಧ ಮಾನವೀಯತೆಯ ಪ್ರಜ್ಞೆಯಿಂದ ಕೂಡಿದೆ. ಅವರ ಪ್ರತಿಭಟನೆಗಳು ನೆಲಸಿಗ ವಸಾಹತುಶಾಹಿಯ ನರಮೇಧದ ಬಗ್ಗೆ ಮತ್ತು ಝಿಯೋನಿಸ್ಟ್ ಆಳ್ವಿಕೆಯೊಂದಿಗೆ ಸಾಮ್ರಾಜ್ಯಶಾಹಿಯ ಶಾಮೀಲಿನ ಬಗ್ಗೆ ಅಸಹ್ಯತೆಯ ಭಾವದಿಂದ ಪ್ರೇರಿತವಾಗಿವೆ; ಅವು ಶಾಂತಿ ಮತ್ತು ಭ್ರಾತೃತ್ವಕ್ಕಾಗಿ ಮಾನವ ಕುಲದ ಅನ್ವೇಷಣೆಯ ಅಭಿವ್ಯಕ್ತಿಯಾಗಿವೆ. ಮತ್ತೊಂದೆಡೆ, ಯುಎಸ್ ಆಳುವ ವ್ಯವಸ್ಥೆಯ ಮಾತುಗಳು ಇಬ್ಬಂದಿತನದಿಂದ ಕೂಡಿವೆ. ಒಂದೆಡೆ ಶಾಂತಿಯ ಮಂತ್ರವನ್ನು ಪಠಿಸುತ್ತಲೇ, ಅದು ಸಂಘರ್ಷವನ್ನು ಉಲ್ಬಣಗೊಳಿಸಲು ಎಲ್ಲವನ್ನೂ ಮಾಡುತ್ತದೆ; ಮುಗ್ಧ ನಾಗರಿಕರ ಮೇಲೆ ಕ್ರೌರ್ಯವನ್ನು ವಿರೋಧಿಸುತ್ತಲೇ, ಅಂತಹ ಕ್ರೌರ್ಯವನ್ನು ನಡೆಸಲು ಶಸ್ತ್ರಾಸ್ತ್ರಗಳ ಪೂರೈಕೆಯನ್ನು ಮುಂದುವರಿಸುತ್ತದೆ. ಒಂದೆಡೆ, ವಿದ್ಯಾರ್ಥಿಗಳ ಕಡೆಯಿಂದ ಮಾನವೀಯತೆಗೆ ತದ್ವಿರುದ್ಧವಾಗಿ ಇನ್ನೊದೆಡೆಯಲ್ಲಿ ಕಾಣುತ್ತಿರುವುದು ಕುತರ್ಕ. ಮೊದಲನೆಯದು ಭವಿಷ್ಯದ ಭರವಸೆಯ ಮುನ್ಸೂಚನೆಯಾಗಿದ್ದರೆ, ಎರಡನೆಯದು ತತ್ತರಿಸುತ್ತಿರುವ ಸಾಮ್ರಾಜ್ಯಶಾಹಿಯ ಹತೋಟಿ ಮೀರಿದ ಅಪ್ರಾಮಾಣಿಕತೆಯನ್ನು ಪ್ರತಿನಿಧಿಸುತ್ತದೆ.

ಅಪ್ರಾಮಾಣಿಕತೆ ಪ್ರತಿ ಹಂತದಲ್ಲೂ

ಈ ಅಪ್ರಾಮಾಣಿಕತೆ ಪ್ರತಿ ಹಂತದಲ್ಲೂ ಪ್ರಕಟವಾಗಿದೆ. ಈಗ ಹಲವು ವರ್ಷಗಳಿಂದ, ಮೆಟ್ರೋಪಾಲಿಟನ್ ದೇಶಗಳು ಪ್ಯಾಲೇಸ್ಟಿನಿಯನ್ ಸಮಸ್ಯೆಗೆ "ಎರಡು–ಪ್ರಭುತ್ರ"ದ ಪರಿಹಾರಕ್ಕೆ ಬದ್ಧವಾಗಿವೆ, ಅಂದರೆ, ಇಸ್ರೇಲ್ ಪ್ರಭುತ್ವದ ಜೊತೆಗೆ ಪ್ಯಾಲೇಸ್ಟಿನಿಯನ್ ಪ್ರಭುತ್ವವನ್ನು ಹೊಂದುವುದು, ಇಲ್ಲಿ "ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ಚುನಾಯಿತವಾದ ಕೇಂದ್ರ ಕಾರ್ಯಾಂಗವಿರುವ, ಅದರೊಳಗೇ ಪ್ಯಾಲೆಸ್ಟೀನಿಯನ್ನರು ಮತ್ತು ಇಸ್ರೇಲಿಗಳು ಒಂದೇ ಗಡಿಯೊಳಗೆ ಒಟ್ಟಿಗೆ ವಾಸಿಸುವ ಏಕಪ್ರಭುತ್ವದ" ಪರಿಹಾರ ಎರಡು–ಪ್ರಭುತ್ವಗಳ ಪರಿಹಾರಕ್ಕಿಂತ ಉತ್ತಮವಾಗಿದೆಯೇ ಎಂಬುದು ಮುಖ್ಯವಲ್ಲ; ಮುಖ್ಯ ವಿಷಯವೆಂದರೆ ಎರಡು–ಪ್ರಭುತ್ವ ಪರಿಹಾರವನ್ನು ದೀರ್ಘ ಕಾಲದಿಂದ ಅಂತರರಾಷ್ಟ್ರೀಯವಾಗಿ ಸ್ವೀಕರಿಸಲಾಗಿದೆ ಮತ್ತು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕೂಡ ಇದನ್ನು ಒಪ್ಪಿಕೊಂಡಿವೆ. ಎರಡು–ಪ್ರಭುತ್ವಗಳ ಪರಿಹಾರದ ಪ್ರಕಾರ ಪ್ಯಾಲೇಸ್ಟಿನಿಯನ್ ಪ್ರಭುತ್ವವು ತಕ್ಷಣವೇ ಅಸ್ತಿತ್ವಕ್ಕೆ ಬರಬೇಕು ಮತ್ತು ಅದು ವಿಶ್ವಸಂಸ್ಥೆಯ ಪೂರ್ಣ ಪ್ರಮಾಣದ ಸದಸ್ಯ ಎಂದು ಮಾನ್ಯತೆ ಪಡೆಯಬೇಕು. ಆದರೆ ಪ್ಯಾಲೆಸ್ತೀನನ್ನು ವಿಶ್ವಸಂಸ್ಥೆಯ ಪೂರ್ಣ ಸದಸ್ಯ ಎಂದು ಒಪ್ಪಿಕೊಳ್ಳುವ ಪ್ರಶ್ನೆ ಬಂದಾಗಲೆಲ್ಲಾ, ಯುಎಸ್ ಈ ಪರಿಕಲ್ಪನೆಗೆ ಬದ್ಧವಾಗಿದ್ದರೂ, ಈ ವಿಷಯದಲ್ಲಿ ಅಂತಿಮ ಅಧಿಕಾರವನ್ನು ಹೊಂದಿರುವ ಭದ್ರತಾ ಮಂಡಳಿಯಲ್ಲಿ ನಕಾರದ ತನ್ನ ವೀಟೋ ಅಧಿಕಾರವನ್ನು ಚಲಾಯಿಸಿದೆ.

ಏಪ್ರಿಲ್ 19 ರಂದು ಇದೇ ನಡೆದದ್ದು. ಇಸ್ರೇಲಿನ ಝಿಯೋನಿಸ್ಟ್ ಪ್ರಭುತ್ವ ಸ್ವತಂತ್ರ ಪ್ಯಾಲೇಸ್ಟಿನಿಯನ್ ಪ್ರಭುತ್ವವನ್ನು ಬಯಸುವುದಿಲ್ಲ. ಏಕೆಂದರೆ ಅದು ಅದರ ನೆಲಸಿಗ ವಸಾಹತುಶಾಹಿ ಯೋಜನೆಯನ್ನು ಕೊನೆಗೊಳಿಸುತ್ತದೆ; ಈ ವಿಷಯ ಮುನ್ನೆಲೆಗೆ ಬಂದಾಗಾಲೆಲ್ಲ ಯುಎಸ್ ತನ್ನ ಸಾರ್ವಜನಿಕ ನಿಲುವಿನ ಹೊರತಾಗಿಯೂ, ಈ ಝಿಯೋನಿಸ್ಟ್ ಯೋಜನೆಯ ಪರವಾಗಿ ನಿಲ್ಲುತ್ತದೆ. ಮೇ 10 ರಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಪ್ಯಾಲೆಸ್ಟೈನ್‌ನ ಪೂರ್ಣ ಸದಸ್ಯತ್ವದ ಪರವಾಗಿ ಮತ ಚಲಾಯಿಸಿತು ಮತ್ತು ಈ ವಿಷಯವನ್ನು ಮರುಪರಿಶೀಲಿಸುವಂತೆ ಭದ್ರತಾ ಮಂಡಳಿಯನ್ನು ವಿನಂತಿಸಿತು (ಪರವಾಗಿ 143, ವಿರುದ್ಧವಾಗಿ 9 ಮತ್ತು 25 ಗೈರುಹಾಜರಿಗಳೊಂದಿಗೆ). ಅದಕ್ಕೆ ಅರ್ಜೆಂಟೀನಾ ಮತ್ತು ಹಂಗರಿಯಂತಹ ವಿಶ್ವದ ಕೆಲವು ಬಲಪಂಥೀಯ ಆಡಳಿತಗಳೊಂದಿಗೆ ಯುಎಸ್ ವಿರುದ್ಧವಾಗಿ ಮತ ಚಲಾಯಿಸಿದರೆ, ಇತರ ಮೆಟ್ರೋಪಾಲಿಟನ್ ರಾಷ್ಟ್ರಗಳು (ಪರವಾಗಿ ಮತ ಚಲಾಯಿಸಿದ ಕೇವಲ ಫ್ರಾನ್ಸ್ ಅನ್ನು ಹೊರತುಪಡಿಸಿ) ಗೈರು ಹಾಜರಾದವು. ಈ ವಿಷಯವು ಭದ್ರತಾ ಮಂಡಳಿಯ ಮುಂದೆ ಮತ್ತೊಮ್ಮೆ ಬಂದಾಗ ಯುಎಸ್, ಖಂಡಿತವಾಗಿಯೂ ಮತ್ತೊಮ್ಮೆ ತನ್ನ ವೀಟೋವನ್ನು ಪ್ರಯೋಗಿಸುತ್ತದೆ, ಈ ಮೂಲಕ ಶಾಂತಿಯ ಯಾವುದೇ ಸಾಧ್ಯತೆಯನ್ನು ಮಾತ್ರವಲ್ಲದೆ, ಸಮಸ್ಯೆಯನ್ನು ಪರಿಹರಿಸಬೇಕೆಂಬ ವಿಶ್ವದ ಬಹುಜನರ ಇಚ್ಛೆಯನ್ನು ವಿಫಲಗೊಳಿಸುತ್ತದೆ.

ಅದೇ ಅಪ್ರಾಮಾಣಿಕತೆ ಯುಎಸ್ ಆಳುವ ವ್ಯವಸ್ಥೆ ವಿದ್ಯಾರ್ಥಿ ಚಳುವಳಿಯನ್ನು ಎದುರಿಸುವ ವಿಧಾನದಲ್ಲಿ ಗೋಚರಿಸುತ್ತದೆ. ಪ್ರತಿಭಟನೆಗಳು ಶಾಂತಿಯುತವಾಗಿದ್ದರೂ ಸಹ ವಿದ್ಯಾರ್ಥಿಗಳು ರಚಿಸಿಕೊಂಡಿದ್ದ ಶಿಬಿರಗಳನ್ನು ಒಡೆಯಲು ಹಲವಾರು ಕ್ಯಾಂಪಸ್‌ಗಳಿಗೆ ಪೊಲೀಸರನ್ನು ಕಳುಹಿಸಲಾಗಿದೆ ಮತ್ತು ನೂರಾರು ವಿದ್ಯಾರ್ಥಿ ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ. ಶಾಂತಿಯುತ ಪ್ರತಿಭಟನೆಗಳಿಗೆ ಎದುರಾಗಿ ಆಳುವ ವ್ಯವಸ್ಥೆಯು ಬಲವಂತದ ವಿಧಾನಗಳನ್ನು ಬಳಸಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಆಕ್ರಮಣವನ್ನು ತೋರಿಸುತ್ತದೆ. ಆದರೆ ಡೊನಾಲ್ಡ್ ಟ್ರಂಪ್, ಬಿಡೆನ್‌ನಿಂದ ಹಿಲರಿ ಕ್ಲಿಂಟನ್‌ವರೆಗೆ ಇಡೀ ಅಮೇರಿಕನ್ ಆಳುವ ವ್ಯವಸ್ಥೆ ಇದನ್ನು ಸಮರ್ಥಿಸಿದೆ. ಡೊನಾಲ್ಡ್ ಟ್ರಂಪ್ ಅವರು "ತೀವ್ರವಾದಿ ಜನಜಂಗುಳಿ ನಮ್ಮ ಕಾಲೇಜು ಕ್ಯಾಂಪಸ್‌ಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ" ಮತ್ತು ಬಿಡೆನ್ ಅಂತಹ "ಜನಜಂಗುಳಿ" ಯೊಂದಿಗೆ ಶಾಮೀಲಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಅತ್ತ ಬಿಡೆನ್ "ಉದಾರವಾದಿ"ಗಳ ಸಾರ್ವತ್ರಿಕ



ಅಭಿಪ್ರಾಯಕ್ಕೆ ಅನುಗುಣವಾಗಿ, ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಮಾಡಿರುವಂತೆ ವಿದ್ಯಾರ್ಥಿಗಳ ವಿರುದ್ಧ ಪೊಲೀಸ್ ಕ್ರಮವನ್ನು ಬಹಿರಂಗವಾಗಿ ಬೆಂಬಲಿಸಿದ ಬಿಡೆನ್ ಪ್ರತಿಭಟನಕಾರರ ಮೇಲೆ ಅವರು "ಯೆಹೂದಿ–ವಿರೋಧಿ"ಗಳು ಎಂಬ ವಿಲಕ್ಷಣ ಆರೋಪವನ್ನು ಸೇರಿಸಿದ್ದಾರೆ. ಈ ಪ್ರತಿಭಟಿಸುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಸಂಖ್ಯೆಯ ಯಹೂದಿ ವಿದ್ಯಾರ್ಥಿಗಳೂ ಇದ್ದಾರೆ ಎಂಬುದು ಗಮನಾರ್ಹ. ಈ ವಿದ್ಯಾರ್ಥಿಗಳಿಗೆ ಮಧ್ಯಪ್ರಾಚ್ಯದ ಇತಿಹಾಸದ ಅರಿವಿಲ್ಲ ಎಂದು ಹಿಲರಿ ಕ್ಲಿಂಟನ್ ಆರೋಪಿಸಿದ್ದಾರೆ, ಅಂತಹ ಇತಿಹಾಸದ ಅರಿವು ನರಮೇಧದ ಅಪರಾಧವನ್ನು ಕ್ಷಮಿಸಬಹುದೋ ಎಂಬಂತೆ!

ಹೊಸ ಮೆಕಾರ್ಥಿವಾದ

ವಿಯೆಟ್ನಾಂ ಯುದ್ಧ–ವಿರೋಧಿ ಆಂದೋಲನವು ಯುಜೀನ್ ಮೆಕಾರ್ಥಿ ಮತ್ತು ರಾಬರ್ಟ್ ಕೆನಡಿ ಅವರಂತಹ ಪ್ರಮುಖ ಅಮೇರಿಕನ್ ಸಾರ್ವಜನಿಕ ವ್ಯಕ್ತಿಗಳ ಬೆಂಬಲವನ್ನು ಒಂದು ಹಂತದಲ್ಲಿ ಪಡೆದುಕೊಂಡಿತು, ಆದರೆ ಅದು ಯುದ್ಧದಲ್ಲಿ ಅಮೆರಿಕ ನೇರವಾಗಿ ತೊಡಗಿಕೊಂಡದ್ದರಿಂದಾಗಿ. ಪ್ರಸಕ್ತ ಸಂದರ್ಭದಲ್ಲಿ, ಆಳುವ ವ್ಯವಸ್ಥೆಯ ರಾಜಕಾರಣಿಗಳ ದಂಡಿಗೆ ದಂಡೇ ಯುದ್ಧದ ಪರವಾಗಿ ಮತ್ತು ವಿದ್ಯಾರ್ಥಿಗಳ ವಿರುದ್ಧ ಸಾಲುಗಟ್ಟಿ ನಿಂತಿದೆ.

ಇದೇ ರೀತಿಯ ವಿದ್ಯಾರ್ಥಿಗಳ ಪ್ರತಿಭಟನೆಗಳು ಮೆಟ್ರೋಪಾಲಿಟನ್ ಪ್ರಪಂಚದ ಬೇರೆಡೆಯೂ ಭುಗಿಲೆದ್ದಿವೆ ಮತ್ತು ಅನೇಕ ಕ್ಯಾಂಪಸ್‌ಗಳಲ್ಲಿ ಆಳುವವರು ಇದೇ ರೀತಿಯ ಬಲವಾದ ತೋಳ್ಬಲ ಪ್ರದರ್ಶನದ ತಂತ್ರಗಳನ್ನು ಬಳಸುತ್ತಿದ್ದಾರೆ. ಆದರೆ ಇದಕ್ಕೆ ವಿರೋಧದ ನಿದರ್ಶನಗಳೂ ಕಂಡುಬಂದಿವೆ. ಉದಾಹರಣೆಗೆ ಬ್ರಿಟನ್‌ನಲ್ಲಿ ಇಂತಹ ಪ್ರತಿಭಟನೆಗಳನ್ನು ಕಂಡ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳಿಗೆ ಪ್ರಧಾನ ಮಂತ್ರಿ ರಿಷಿ ಸುನಕ್ ಅವರು ಪ್ರಭುತ್ವ ಯಂತ್ರವನ್ನು ಬಳಸಿ ಅವುಗಳನ್ನು ಒಡೆಯಲು ಸಲಹೆ ನೀಡಿರುವುದು ಎಲ್ಲಾ ಉಪಕುಲಪತಿಗಳಿಗೆ ಸರಿ ಹೋಗಿಲ್ಲ. ಕೆಲವರು ಅವರು ಕರೆದ ಸಭೆಗೆ ಹಾಜರಾಗಲು ನಿರಾಕರಿಸಿದ್ದಾರೆ. ಆದರೆ ಅಮೆರಿಕದಲ್ಲಿ ಅಂತಹ ವಿರೋಧ ಬಂದಿಲ್ಲ. ಪ್ರತಿಭಟನೆಗಳನ್ನು ಹೇಗೆ ಎದುರಿಸಬೇಕೆಂಬುದರ ಬಗ್ಗೆ ತಮ್ಮದೇ ಆದ ತೀರ್ಮಾನವನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತಿರುವ ವಿಶ್ವವಿದ್ಯಾಲಯದ ಮುಖ್ಯಸ್ಥರು ರಾಜೀನಾಮೆ ನೀಡುವಂತೆ ಬಲವಂತ ಪಡಿಸಲಾಗಿದೆ.

ಕ್ಯಾಂಪಸ್‌ಗಳಲ್ಲಿನ ಈ ರೀತಿಯ ಚಿಂತನೆಯ ನಿಗ್ರಹದಿಂದ ಯುಎಸ್‌ನಲ್ಲಿ ಹೊಸ ಮೆಕಾರ್ಥಿವಾದವನ್ನು ಹರಿಬಿಡಲಾಗಿದೆ ಎಂಬ ಆರೋಪ ಬಂದಿದೆ. ಆಗಲೂ ಈಗಿನಂತೆ ಕ್ಯಾಂಪಸ್‌ಗಳಲ್ಲಿ ಸ್ವತಂತ್ರ ಚಿಂತನೆಯನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಬಲಪಂಥೀಯ ಶಾಸಕರ ಗುಂಪು ಮುಂಚೂಣಿಯಲ್ಲಿತ್ತು. ಆದರೆ ಒಂದು ಪ್ರಶ್ನೆಯು ಉದ್ಭವಿಸುತ್ತದೆ: 1950 ರ ದಶಕದಲ್ಲಿ ಶೀತಲ ಸಮರ ಮತ್ತು ಕಮ್ಯುನಿಸಂನ ಭಯವು ಮೆಕಾರ್ಥಿವಾದಕ್ಕೆ ಅವಕಾಶವನ್ನು ಒದಗಿಸಿತ್ತು. ಆದರೆ ಪ್ರಸಕ್ತ ಸಂದರ್ಭದಲ್ಲಿ ಈ ಹೊಸ ಮೆಕಾರ್ಥಿವಾದಕ್ಕೆ ಚಾಲನೆ ನೀಡುವಂತದ್ದಾದರೂ ಏನು?

ನ ವ – ಉ ದಾ ರ ವಾ ದಿ

ಪುಟ 14 ಕ್ಕೆ

ಯುಎಸ್ ನಲ್ಲಿ ಇಸ್ರೇಲಿ ನರಮೇಧದ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ..... ಪುಟ 13 ರಿಂದ

ಬಂಡವಾಳಶಾಹಿಯ ಬಿಕ್ಕಟ್ಟಿನ ಸಂದರ್ಭದಲ್ಲಿ ಬಲಪಂಥೀಯರ ಉದಯ ಮತ್ತು ಬಂಡವಾಳಶಾಹಿ ಜಗತ್ತಿನಲ್ಲಿ ನವ–ಫ್ಯಾಸಿಸಂನ ಆರೋಹಣಕ್ಕೂ ಮತ್ತು ಹೊಸ ಮೆಕಾರ್ಥಿವಾದಕ್ಕೂ ಸಂಬಂಧವಿದೆ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ನವ–ಫ್ಯಾಸಿಸಂನ ಉದಯವು ಇಲ್ಲಿಯವರೆಗೆ ರಾಜಕೀಯ ಅಂಚಿನಲ್ಲಿದ್ದ ಫ್ಯಾಸಿಸ್ಟ್ ಅಂಶಗಳನ್ನು ರಂಗಸ್ಥಳದ ಮಧ್ಯಕ್ಕೆ ತಳ್ಳಿರುವುದಷ್ಟೇ ಅಲ್ಲ, ಅಂತಹವರು ತಥಾಕಥಿತ "ಉದಾರವಾದಿ" ರಾಜಕೀಯ ಶಕ್ತಿಗಳ ಮೇಲೂ ಪ್ರಾಬಲ್ಯ ಸಾಧಿಸಲು ಅವಕಾಶ ನೀಡಿದೆ. ಆಮೂಲಕ ಎಡಪಂಥದ ಪುನರುಜ್ಜೀವನದ ಎಲ್ಲಾ ಪ್ರಯತ್ನಗಳನ್ನು ಸೋಲಿಸುವ ಒಂದು ಏಕೀಕೃತ ಬಲಪಂಥೀಯ ಒಮ್ಮತವೊಂದನ್ನು ಸೃಷ್ಟಿಸಿರುವಂತೆ ಕಾಣುತ್ತದೆ.

“ಯೆಹೂದಿ–ವಿರೋಧಿ" ಎಂಬ ಹಣೆಪಟ್ಟಿ

ಜೆರೆಮಿ ಕಾರ್ಬಿನ್ ಅವರು ಬ್ರಿಟನ್‌ನಲ್ಲಿ ಲೇಬರ್ ಪಕ್ಷದ ನಾಯಕರಾಗಿ ಆಯ್ಕೆಯಾಗಿ ಆಳುವ ವ್ಯವಸ್ಥೆಯ ವಿರುದ್ಧ ಸವಾಲು ಹಾಕಿದಾಗ ಪರಿಸ್ಥಿತಿ “ಕೈಮೀರಿ ಹೋಗುತ್ತಿದೆ” ಎಂದು ಬೆದರಿಕೆ ಉಂಟಾದ್ದರಿಂದ ಅವರ ವಿರುದ್ಧ ಒಂದು ಪಿತೂರಿ ನಡೆಸಲಾಯಿತು, ಅವರು ಪ್ಯಾಲೆಸ್ತೀನಿ ಗುರಿಯ ಬಗ್ಗೆ ಸಹಾನುಭೂತಿ ಹೊಂದಿದ್ದರಿಂದ, ಅವರಿಗೆ “ಯೆಹೂದಿ–ವಿರೋಧಿ" ಎಂಬ ಹಣೆಪಟ್ಟಿ ಹಚ್ಚಲಾಯಿತು ಮತ್ತು ಲೇಬರ್ ಪಾರ್ಟಿಯಿಂದಲೇ ಅವರನ್ನು ತೆಗೆದುಹಾಕಲಾಯಿತು ಎಂಬುದು ಗಮನಾರ್ಹ.

ವಿಶ್ವವಿದ್ಯಾನಿಲಯಗಳಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಈಗಲೂ ಮೆಟ್ರೊಪಾಲಿಟನ್ ದೇಶಗಳಲ್ಲಿ ಚಿಂತನೆಯ ಒಂದು ಸ್ವತಂತ್ರ ಮೂಲವಾಗಿದ್ದಾರೆ, ಆಮೂಲಕ ಬಲಪಂಥೀಯ ಕ್ರೋಢೀಕರಣಕ್ಕೆ ಬೆದರಿಕೆ ಒಡ್ಡಿರುವ ನೈತಿಕ ಶಕ್ತಿಯಾಗಿದ್ದಾರೆ. ಆದ್ದರಿಂದ ವಿಶ್ವವಿದ್ಯಾನಿಲಯಗಳ ಮೇಲಿನ ನಿಯಂತ್ರಣವು ಈ ಬಲಪಂಥೀಯ ಕ್ರೋಡೀಕರಣದ ಕಾರ್ಯಸೂಚಿಯಲ್ಲಿ ಪ್ರಮುಖ ಅಂಶವಾಗಿದೆ. ಈ ಬಲಪಂಥೀಯ ಕ್ರೋಡೀಕರಣವು ತಾನು ಬಯಸಿದ್ದನ್ನು ಈಡೇರಿಸಿಕೊಳ್ಳಬೇಕಾದರೆ ಸ್ವತಂತ್ರ ಚಿಂತನೆಯನ್ನು ನಾಶಪಡಿಸಬೇಕು, ಮಾನವೀಯತೆಯ ಪ್ರತಿಯೊಂದು ಕುರುಹು ಕೂಡ ನಾಶವಾಗಬೇಕು. ಇಂದು ನಾವು ಯುಎಸ್‌ನಲ್ಲಿ ಕಾಣುತ್ತಿರುವುದು ಚಿಂತನೆಯ ಸ್ವಾತಂತ್ರ್ಯವನ್ನು ನಾಶಮಾಡುವ ಒಂದು ಲಜ್ಜೆಗೆಟ್ಟ ಪ್ರಯತ್ನವನ್ನು.

ನರಮೇಧವನ್ನು ಪ್ರತಿಭಟಿಸುವುದಕ್ಕೆ ಯೆಹೂದಿ–ವಿರೋಧಿ ನಿಲುವು ಎಂಬ ಹಣೆಪಟ್ಟಿ ಅಂಟಿಸಲಾಗಿದೆ. ಜೆರೆಮಿ ಕಾರ್ಬಿನ್ ಯೆಹೂದಿ–ವಿರೋಧಿಯಾಗಿರಲಿಲ್ಲ, ವಿದ್ಯಾರ್ಥಿಗಳು ಕೂಡ ಯೆಹೂದಿ–ವಿರೋಧಿಗಳಲ್ಲ. ವಾಸ್ತವವಾಗಿ ಅವರ ವಿರೋಧಿಗಳಲ್ಲೇ ದೇಶ–ವಿದೇಶಗಳಲ್ಲಿನ ಯೆಹೂದಿ ವಿರೋಧಿ ಚಳುವಳಿಗಳೊಂದಿಗೆ ಸಂಪರ್ಕವನ್ನು ಹೊಂದಿರುವವರನ್ನು (ನಾಜಿ ಆಕ್ರಮಣಕಾರರೊಂದಿಗೆ ಸಹಕರಿಸಿದ ಉಕ್ರೇನ್‌ನ ಸ್ಟೆಪನ್ ಬಂಡೇರಾ ಪ್ರಾರಂಭಿಸಿದ ಚಳುವಳಿಯಂತೆ) ಕಾಣಬಹುದು. ಆದರೂ "ಯೆಹೂದಿ–ವಿರೋಧಿ" ಎಂಬ ಹಣೆಪಟ್ಟಿಯನ್ನು ಮೆಟ್ರೋಪಾಲಿಟನ್ ದೇಶಗಳಲ್ಲಿ ಬಲಪಂಥೀಯ ಕ್ರೋಡೀಕರಣಕ್ಕೆ ಒಂದು ಆಯುಧವನ್ನಾಗಿ ಮಾಡಲಾಗುತ್ತಿದೆ.

ಆದ್ದರಿಂದ ಯುಎಸ್ ಕ್ಯಾಂಪಸ್‌ಗಳಲ್ಲಿ ನಡೆಯುತ್ತಿರುವುದು ಬಹಳ ಮಹತ್ವದ್ದಾಗಿದೆ. ಇಂದು ಕ್ಯಾಂಪಸ್‌ಗಳಲ್ಲಿ ಮಾನವೀಯತೆ ಮತ್ತು ಕುತರ್ಕದ ನಡುವೆ ನಡೆಯುತ್ತಿರುವ ಹೋರಾಟವು ಮುಂದಿನ ದಿನಗಳಲ್ಲಿ ನಿರ್ಣಾಯಕ ವರ್ಗ ಹೋರಾಟಗಳ ಮುನ್ಸೂಚನೆಯಾಗಿದೆ.

ಅನು:ಕೆ.ವಿ.

ಬೃಹತ್ ಕಲ್ಲಿದ್ದಲು ಆಮದು ಹಗರಣ: ‘ಮೋದಿ ಸರ್ಕಾರ, ಅದಾನಿ ಸಮೂಹ’ ದೊಂದಿಗಿನ........ ಪುಟ 16 ರಿಂದ

ಹಡಗು ಇಂಡೋನೇಷ್ಯಾದಿಂದ ಭಾರತಕ್ಕೆ ಯಾವುದೇ ನಿಲುಗಡೆಗಳಿಲ್ಲದೆ ನೇರವಾಗಿ ಬಂದು ತಲುಪಿದೆ. ಆದರೂ ಇನ್ ವಾಯ್ಸ್ ಗಳಲ್ಲಿ ಮಾತ್ರ ರೂಪಾಂತರ ಗೊಳಿಸಲಾಗಿದೆ. ಈ ಯೋಜನಾ ತಂತ್ರವು ಮಧ್ಯವರ್ತಿ ಕಂಪನಿಗಳಿಗೆ ಗಣನೀಯ ಲಾಭವನ್ನು ಗಳಿಸಲು ಅನುವು ಮಾಡಿಕೊಟ್ಟಿತು. ಹೆಚ್ಚುವರಿಯಾಗಿ, ತೈಪೆ, ದುಬೈ ಮತ್ತು ಸಿಂಗಾಪುರಗಳು ಕಡಿಮೆ ತೆರಿಗೆ ದರಗಳೊಂದಿಗೆ ಕಾರ್ಯನಿರ್ವಹಿಸುತ್ತವೆ, ಇದರಿಂದಾಗಿ, ಅಂತಹ ಕಂಪನಿಗಳು ತಮ್ಮ ಲಾಭದ ಮೇಲಿನ ತೆರಿಗೆಯನ್ನು ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

ಅದಾನಿ ಸಮೂಹದ ಮೋಸಗೊಳಿಸುವ ಇಂತಹ ಕಾರ್ಯಗಳಲ್ಲಿ ತೊಡಗಿರುವ ಘಟಕಗಳ ಸೂಕ್ಷ್ಮ ಪರೀಕ್ಷೆಯು ಮೂಲಭೂತವಾಗಿ ಶೆಲ್ ಪೂರೈಕೆಯ ಕಂಪನಿಗಳು ಎಂದು ಬಹಿರಂಗಪಡಿಸುತ್ತದೆ. ಕೇವಲ ಬೆರಳೆಣಿಕೆಯಷ್ಟು ಉದ್ಯೋಗಿಗಳೊಂದಿಗೆ ಸಣ್ಣ, ಕಚೇರಿಗಳಿಂದ ಕಾರ್ಯ ನಿರ್ವಹಿಸುತ್ತಿರುವ ಈ ಘಟಕಗಳು ವಾಸ್ತವವಾಗಿ ನೆರೆಯ ವ್ಯವಹಾರಗಳಿಂದ ಪ್ರತ್ಯೇಕಿಸಲ್ಪಟ್ಟಿವೆ ಮತ್ತು ಯಾವುದೇ ನಿಜವಾದ ವ್ಯಾಪಾರ ಕಾರ್ಯಾಚರಣೆಗಳನ್ನು ನಡೆಸಿರುವುದಿಲ್ಲ. ಇವುಗಳ ಪ್ರಾಥಮಿಕ ಉದ್ದೇಶವೆಂದರೆ, ಸುಲಭವಾಗಿ ಹೆಚ್ಚಿನ ಬೆಲೆಗಳಿಗೆ ಹೊಂದಾಣಿಕೆ ಗೊಳಿಸುವುದು.

ಕಲ್ಲಿದ್ದಲಿನ ಮಿಶ್ರಣವನ್ನು ಹೆಚ್ಚಿಸಲು ವಿದ್ಯುತ್ ಉತ್ಪಾದಕರು ಕಡ್ಡಾಯವಾಗಿ ಸರ್ಕಾರದ ನಿರ್ದೇಶನಗಳನ್ನು ಅನುಸರಿಸಬೇಕು. ಇದರ ಪರಿಣಾಮವಾಗಿ, ಈ ಆರ್ಥಿಕ ವರ್ಷದಲ್ಲಿ ಹಂಚಿಕೆ ಮಾಡುವ (DISCOMs) ಕಂಪನಿಗಳು ಖರೀದಿಯಲ್ಲಿ ಹೆಚ್ಚುವರಿ 42,000 ಕೋಟಿ ರೂಪಾಯಿಗಳ ವಿದ್ಯುತ್ ಬಿಲ್ ದಾಖಲಿಸಿವೆ. ಇದರಿಂದ ಅದಾನಿ ಸಮೂಹವು ಸುಮಾರು 30,000–35,000 ಕೋಟಿಗಳಷ್ಟು ಲಾಭವನ್ನು ಗಳಿಸಲು ಸಾಧ್ಯವಾಗಿದೆ. ಕಲ್ಲಿದ್ದಲಿನ ಗುಣಮಟ್ಟವನ್ನು ನಕಲಿ ಮಾಡಲು ಅದಾನಿ ಸಮೂಹವು ದಾಖಲೆಗಳನ್ನು ತಿದ್ದಿದೆ ಮತ್ತು ಹೆಚ್ಚಿನ ಬೆಲೆಗಳನ್ನು ಸಂಗ್ರಹಿಸಿರುವುದು ಪ್ರಸ್ತುತ ಇಲ್ಲಿ ಸ್ಪಷ್ಟಗೊಂಡಿದೆ.

ಕಲ್ಲಿದ್ದಲು ಬಿಕ್ಕಟ್ಟಿನ ಈ ನೀಲಿನಕ್ಷೆಯು, ಅದಾನಿ ಸಮೂಹದ ಪರವಾಗಿ ರೂಪಿಸಲಾಗಿದೆ ಎಂಬುದು ಇದರಿಂದ ಸ್ಪಷ್ಟಗೊಂಡಿದೆ. ಮಾತ್ರವಲ್ಲದೆ, ಇದು ಭಾರತದ ಇಂಧನ ಸಾರ್ವಭೌಮತ್ವವನ್ನು ನಾಶಮಾಡುವ ಬೃಹತ್ ಕಲ್ಲಿದ್ದಲು ಹಗರಣವಲ್ಲದೆ ಬೇರೇನೂ ಅಲ್ಲ. ಆಮದು ಮಾಡಿಕೊಳ್ಳುವ ಕಲ್ಲಿದ್ದಲಿನ ಮೇಲೆ ಹೆಚ್ಚಿನ ಬೆಲೆಯಿಂದಾಗಿ, ವಿದ್ಯುಚ್ಛಕ್ತಿಯ ಹೊರೆಯನ್ನು ಗ್ರಾಹಕರ ಮೇಲೆ ಒತ್ತಾಯ ಪೂರ್ವಕವಾಗಿ, ಹೇರಲಾಗಿದೆ. ಇದರಿಂದಾಗಿ ಸುಂಕದ ಆಘಾತಗಳು ಮತ್ತು ವಿದ್ಯುತ್ ಕೊರತೆ ಉಂಟಾಗುತ್ತದೆ. ಅದಾನಿ ಸಮೂಹದ ಕಲ್ಲಿದ್ದಲು ಆಮದು ಹಗರಣದ ವಿರುದ್ಧ ತಕ್ಷಣದಲ್ಲಿ ಬಲವಾದ ಕಾನೂನು ಕ್ರಮದ ಅಗತ್ಯವಿದೆ, ಆಮದು ಮಾಡಿಕೊಂಡ ಕಲ್ಲಿದ್ದಲು ಮಿಶ್ರಣ ನಿರ್ದೇಶನವನ್ನು ಹಿಂಪಡೆಯುವುದು ಮತ್ತು ಸಿಐಎಲ್ ನ ಪೂರ್ಣ ಪ್ರಮಾಣದ ಕಾರ್ಯಾಚರಣೆಯೊಂದಿಗೆ ಪೂರೈಕೆಯನ್ನು ಖಚಿತಪಡಿಸಿ ಕೊಳ್ಳಬೇಕೆಂದು EEFI ಒತ್ತಾಯಿಸುತ್ತದೆ. EEFI ಎಲ್ಲಾ ವರ್ಗದ ಕಾರ್ಮಿಕರು ಮತ್ತು ಸಾರ್ವಜನಿಕರಿಗೆ ತಮ್ಮ ಧ್ವನಿಯನ್ನು ಎತ್ತುವಂತೆ ಮತ್ತು ಮೋದಿ ನಡುವಿನ ಅಪವಿತ್ರ ಸಂಬಂಧವನ್ನು ಬಿಚ್ಚಿಡಲು EEFI ಕರೆ ನೀಡುತ್ತದೆ.

ಲೇಖಕರು: ಪ್ರಸಾಂತ ಎನ್ ಚೌಧುರಿ:
ಅನುವಾದ: ನಾಗರಾಜ ನಂಜುಂಡಯ್ಯ

ಮೋದಿಯವರ 41 ಸಂದರ್ಶನಗಳು: ಬರೀ ಆಲಿಸುವುದಷ್ಟೆ...... ಪುಟ 8 ರಿಂದ

ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಎತ್ತಲಿಲ್ಲ. ಗುಡ್ಡಗಾಡು ರಾಜ್ಯವಾದ ಉತ್ತರಾಖಂಡದ ಸಾಂಪ್ರದಾಯಿಕವಾಗಿ ಹೆಚ್ಚಿನ ಸಂಖ್ಯೆಯ ಯುವ ನೇಮಕಾತಿಗಳನ್ನು ಸೈನ್ಯ ಪಡೆಗಳಿಗೆ ಕಳುಹಿಸಿದೆ. ಆದರೆ, ಉತ್ತರಾಖಂಡದ ಮೇಲೆ ಕೇಂದ್ರೀಕರಿಸಿದ ಎರಡು ಸಂದರ್ಶನಗಳಲ್ಲಿ, ಹಿಂದಿ ದೈನಿಕಗಳಾದ ಅಮರ್ ಉಜಾಲಾ ಮತ್ತು ಹಿಂದೂಸ್ತಾನ್ ನ ರಾಜ್ಯ ಆವೃತ್ತಿಗಳು ಅಲ್ಪಾವಧಿಯ ಮಿಲಿಟರಿ ನೇಮಕಾತಿಗಾಗಿ ವಿವಾದಾತ್ಮಕ ‘ಅಗ್ನಿಪಥ್’ ಯೋಜನೆಯ ಬಗ್ಗೆ ಪ್ರಶ್ನೆಗಳನ್ನು ಕೇಳಲಿಲ್ಲ.

ಪೌರತ್ವ ತಿದ್ದುಪಡಿ ಕಾಯ್ದೆ: ಜೊತೆಗೆ, ಅಸ್ಸಾಂ ಟ್ರಿಬ್ಯೂನ್ ಮತ್ತು ಬಂಗಾಳಿ ದೈನಿಕ ಆನಂದ ಬಜಾರ್ ಪತ್ರಿಕಾ ಸಂದರ್ಶನಗಳಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಯ ಬಗ್ಗೆ ಯಾವುದೇ ಪ್ರಶ್ನೆಗಳಿಲ್ಲ. ನೆರೆಯ ಬಾಂಗ್ಲಾದೇಶ ಸೇರಿದಂತೆ ಮೂರು ದೇಶಗಳಿಂದ ದಾಖಲೆ ರಹಿತ ಮುಸ್ಲಿಮೇತರ ವಲಸಿಗರಿಗೆ ಭಾರತೀಯ ಪೌರತ್ವವನ್ನು ತ್ವರಿತಗತಿಯಲ್ಲಿ ಒದಗಿಸುವ ಕಾಯಿದೆಯು ಅಸ್ಸಾಂ ಮತ್ತು ಬಂಗಾಳದಲ್ಲಿ ಪ್ರಮುಖ ಚುನಾವಣಾ ವಿಷಯವಾಗಿದೆ.

ಬಿಜೆಪಿಯಲ್ಲಿನ ಆಂತರಿಕ ಕಚ್ಚಾಟದ ಬಗ್ಗೆ: ಗುಜರಾತಿ ಸುದ್ದಿ ಸಂಸ್ಥೆಗಳಿಗೆ (ಅಕಿಲಾ ನ್ಯೂಸ್, ಗುಜರಾತ್ ಸಮಾಚಾರ್, ದಿವ್ಯ ಭಾಸ್ಕರ್, ಫೂಲ್ಛಾಬ್, ಸಂದೇಶ್, ಕಚ್ಮಿತ್ರ, ಜನ್ಮಭೂಮಿ ಮತ್ತು ಫೂಲ್ಛಾಬ್) ನೀಡಿದ ಆರು ಸಂದರ್ಶನಗಳಲ್ಲಿ ಬಿಜೆಪಿಯ ರಾಜ್ಯ ಘಟಕದಲ್ಲಿನ ಆಂತರಿಕ ಕಚ್ಚಾಟದ ವರದಿಗಳ ಬಗ್ಗೆ ಮೋದಿಯವರನ್ನು ಪ್ರಶ್ನಿಸಲಿಲ್ಲ.

ಯಾವುದೇ ಫಾಲೋ–ಅಪ್ ಪ್ರಶ್ನೆಗಳಿಲ್ಲ, ಯಾವುದೇ ಸತ್ಯಾಸತ್ಯೆಯ ಪರಿಶೀಲನೆಗಳಿಲ್ಲ

ಮೋದಿಯವರಿಗೆ ಕಠಿಣ ಪ್ರಶ್ನೆಗಳನ್ನು ಕೇಳಿದಾಗಲೂ ಪತ್ರಕರ್ತರು ಅವರ ಉತ್ತರಗಳನ್ನು ಅನುಸರಿಸಿ ಮಾತುಗಳನ್ನಾಡಲಿಲ್ಲ ಅಥವಾ ಅವರು ವಾಸ್ತವಿಕವಾಗಿ ತಪ್ಪಾದ ಹೇಳಿಕೆಗಳನ್ನು ನೀಡಿದಾಗಲೂ ಪ್ರಧಾನ ಮಂತ್ರಿಯನ್ನು ಮರು ಪ್ರಶ್ನಿಸಲಿಲ್ಲ.

ಉದಾಹರಣೆಗೆ, ಹಿಂದೂಸ್ತಾನ್ ಟೈಮ್ಸ್ ಸಂದರ್ಶನದಲ್ಲಿ, ರೇವಣ್ಣ ವಿರುದ್ಧದ ಆರೋಪಗಳಿಂದ ಮತದಾರರು "ನೈಜ ಚುನಾವಣಾ ಸಮಸ್ಯೆಗಳಿಂದ" ವಿಚಲಿತರಾಗುತ್ತಾರೆಯೇ ಅಥವಾ ಹಿಂದೂ ಮಹಿಳೆಯರ ಚಿನ್ನ ಮತ್ತು ಮಂಗಳಸೂತ್ರಗಳನ್ನು ವಶಪಡಿಸಿಕೊಳ್ಳಲು ಕಾಂಗ್ರೆಸ್ ಬಯಸಿದೆ ಎಂಬ ಪ್ರಧಾನಿಯವರ ಹೇಳಿಕೆಯಿಂದ ಮತದಾರರು ವಿಚಲಿತರಾಗುತ್ತಾರೆಯೇ ಎಂದು ಕೇಳಲಾಯಿತು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಖಾಸಗಿ ಸಂಪತ್ತನ್ನು ಮುಸ್ಲಿಮರಿಗೆ ಮರುಹಂಚಿಕೆ ಮಾಡುವ ಯೋಜನೆಯ ಭಾಗವಾಗಿ ಮಂಗಳಸೂತ್ರಗಳನ್ನು ವಶಪಡಿಸಿಕೊಳ್ಳುತ್ತದೆ ಎಂದು ಮೋದಿ ಹೇಳಿದ್ದರು.

ಮೋದಿ ಅವರು ಇದಕ್ಕೆ ಉತ್ತರಿಸುತ್ತ, "ಕಾಂಗ್ರೆಸ್ ನ ಯುವರಾಜ (ರಾಹುಲ್ ಗಾಂಧಿ) ಅವರ ಅಪಾಯಕಾರಿ ಹೇಳಿಕೆಗಳು ಮತ್ತು ಅದರ ಪ್ರಣಾಳಿಕೆಯಲ್ಲಿನ ವಿನಾಶಕಾರಿ ಆಲೋಚನೆಗಳನ್ನು" ಹೈಲೈಟ್ ಮಾಡಲು ವಿಫಲವಾದ ಮಾಧ್ಯಮಗಳ ಮೇಲೆ ದೂಷಿಸಿದರು.

ಹಿಂದೂಸ್ತಾನ್ ಟೈಮ್ಸ್, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಮಂಗಳಸೂತ್ರಗಳ ಉಲ್ಲೇಖವಿಲ್ಲ ಎಂದು ಹೇಳಿತಷ್ಟೆ ವಿನಃ, ಇದರಲ್ಲಿ ಸಾರ್ವಜನಿಕ ಸಂಪತ್ತಿನ ಮರುಹಂಚಿಕೆ ಬಗ್ಗೆ ಯಾವುದೇ ಉಲ್ಲೇಖವಿಲ್ಲ ಎಂಬುದನ್ನು ಹೇಳಿಲಿಲ್ಲ.

‘400 ಪಾರ್’ ಮತ್ತು ಸಂವಿಧಾನ ಬದಲಾವಣೆ

ಮೋದಿಯವರ ಸಂದರ್ಶನಗಳಲ್ಲಿ ಆಗಾಗ ಕೇಳಿಬರುತ್ತಿದ್ದ ಇನ್ನೊಂದು ಮಾತು ‘400 ಪಾರ್’. ತನ್ನ ಸಂದರ್ಶನದಲ್ಲಿ, TV9 ನೆಟ್‌ವರ್ಕ್ ವರದಿಗಾರರು ಬಿಜೆಪಿಯು ಸಂವಿಧಾನವನ್ನು ಬದಲಾಯಿಸಲು 400 ಸ್ಥಾನಗಳ ಸೂಪರ್ ಬಹುಮತವನ್ನು ಬಯಸುತ್ತದೆ ಎಂಬ ಪ್ರತಿಪಕ್ಷಗಳ ಹೇಳಿಕೆಯ ಬಗ್ಗೆ ಮೋದಿಯನ್ನು ಪ್ರಶ್ನಿಸಿದರು. ಆದರೆ, “ಅಂತಹದ್ದೇನೂ ಇಲ್ಲ ಎನ್‌ಡಿಎ ಈಗಾಗಲೇ 400ಕ್ಕೂ ಹೆಚ್ಚು ಸ್ಥಾನಗಳನ್ನು ಹೊಂದಿದೆ, ‘2019ರಲ್ಲಿ ಎನ್‌ಡಿಎ ಸುಮಾರು 359 ಸ್ಥಾನಗಳನ್ನು ಗೆದ್ದಿದೆ. ಆಂಧ್ರಪ್ರದೇಶ ಮತ್ತು ಒಡಿಶಾ ರಾಜ್ಯಗಳ ರಾಜಕೀಯ ಪಕ್ಷಗಳು ನಮ್ಮ ಪರವಾಗಿವೆ. ಅಂದರೆ ಇನ್ನೂ 35 ಸ್ಥಾನಗಳು ಸೇರ್ಪಡೆಯಾಗಿವೆ. ಈಶಾನ್ಯ ಭಾಗದ ಸಂಸದರೂ ನಮ್ಮ ಪರ ಇದ್ದಾರೆ” ಎಂದು ವಿವರಿಸಿದ ಮೋದಿಯವರು, ಹಲವಾರು ಸಂದರ್ಭಗಳಲ್ಲಿ ಕಾಂಗ್ರೆಸ್ ಸಂವಿಧಾನವನ್ನು ಹೇಗೆ ದುರ್ಬಲಗೊಳಿಸಿದೆ ಎಂಬುದರ ಕುರಿತು ಸುದೀರ್ಘ ಉತ್ತರವನ್ನು ನೀಡಿದರು.

ಸಂವಿಧಾನದಲ್ಲಿ ಬದಲಾವಣೆಗಳನ್ನು ಮಾಡಲು ಪಕ್ಷವು ಹೆಚ್ಚಿನ ಬಹುಮತವನ್ನು ಬಯಸುತ್ತಿದೆ ಎಂದು ನಾಲ್ವರು ಬಿಜೆಪಿ ನಾಯಕರು ಸ್ಪಷ್ಟವಾಗಿ ಹೇಳಿರುವುದನ್ನು ಸಂದರ್ಶಕರು ಎತ್ತಿ ತೋರಿಸಿ ಮೋದಿಯವರಿಂದ ಉತ್ತರ ಪಡೆಯಲು ಮುಂದಾಗಲಿಲ್ಲ.

ದಕ್ಷಿಣದ ರಾಜ್ಯಗಳ ಮೇಲೆ ಕಣ್ಣಿಟ್ಟು

ಮೋದಿಯವರು ಸಂದರ್ಶನಗಳನ್ನು ನೀಡಿರುವ ಪ್ರಾದೇಶಿಕ ಸುದ್ದಿವಾಹಿನಿಗಳ ರಾಜ್ಯವಾರು ಆಯ್ಕೆಯು ದಕ್ಷಿಣದ ರಾಜ್ಯಗಳಿಗೆ ಹೆಚ್ಚಿನ ಗಮನವನ್ನು ತರಲು ಸ್ಪಷ್ಟ ಪ್ರಯತ್ನವನ್ನು ತೋರಿಸುತ್ತದೆ. ಇಲ್ಲಿ ಬಿಜೆಪಿ ಇನ್ನೂ ಚಿಕ್ಕ ಆಟಗಾರ. ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ಮೂಲದ ಸುದ್ದಿವಾಹಿನಿಗಳಿಗೆ ಪ್ರಧಾನಿ ಏಳು ಸಂದರ್ಶನಗಳನ್ನು ನೀಡಿದ್ದಾರೆ. ಗುಜರಾತಿನ ನಂತರ ದಕ್ಷಿಣದ ರಾಜ್ಯಗಳತ್ತ ಹೆಚ್ಚಾಗಿ ಗಮನಹರಿಸಿದ್ದಾರೆ. ಪ್ರಧಾನಿಯವರ ತವರು ರಾಜ್ಯದಲ್ಲಿ ಸುದ್ದಿ ಸಂಸ್ಥೆಗಳು ಆರು ಸಂದರ್ಶನಗಳನ್ನು ಪಡೆದಿವೆ.

ಜನ ಚಳುವಳಿಗಳ ಸಂಗಾತಿ, ಹಿರಿಯ ಪತ್ರಕರ್ತ ಆರ್.ಜಯಕುಮಾರ್ ಇನ್ನಿಲ್ಲ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಸಂಘಟನೆಯ ಮಾಜಿ ರಾಜ್ಯಾಧ್ಯಕ್ಷರು, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಸಂಘಟನೆಯ ಮಾಜಿ ರಾಜ್ಯ ಮುಖಂಡರೂ, ಹಿರಿಯ ಪತ್ರಕರ್ತರು, ಮಾನವ ಬಂಧುತ್ವ ವೇದಿಕೆಯ ವಿಭಾಗೀಯ ಸಂಚಾಲಕರೂ ಆಗಿದ್ದ ಸಂಗಾತಿ ಆರ್. ಜಯಕುಮಾರ್ ಅವರು ಅನಾರೋಗ್ಯದ ಕಾರಣದಿಂದಾಗಿ ಮೇ 25, 2024 ರಂದು ಶನಿವಾರ ನಿಧನರಾಗಿದ್ದಾರೆ. ಜಯಕುಮಾರ್ ಅವರು ಲೇಖಕಿ, ಸಾಮಾಜಿಕ ಕಾರ್ಯಕರ್ತೆಯೂ ಆಗಿರುವ ಪತ್ನಿ ಡಾ.ಲೀಲಾ ಸಂಪಿಗೆ, ಪುತ್ರಿ ದೀಪಿಕಾ ಸೇರಿದಂತೆ ಅಪಾರ ಬಂಧು ಬಳಗವನ್ನು, ಸಂಗಾತಿಗಳನ್ನೂ ಅಗಲಿದ್ದಾರೆ.

ಮೂಲತಃ ಕೊಡಗಿನವರಾದ ಜಯಕುಮಾರ್, ಕರ್ನಾಟಕ ರಾಜ್ಯದಾದ್ಯಂತ ವಿದ್ಯಾರ್ಥಿ ಚಳವಳಿಯನ್ನು ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದ ಒಬ್ಬ ಹಿರಿಯ ಸಂಗಾತಿಯಾಗಿದ್ದಾರೆ. ಯುವಜನ ಮುಖಂಡರಾಗಿಯೂ ಸಾಕಷ್ಟು ಕೊಡುಗೆ ನೀಡಿದ ಜಯಕುಮಾರ್ ಅವರು ಮುಂದೆ, ಸಿಪಿಐ(ಎಂ) ರಾಜ್ಯ ಸಮಿತಿಯ ಕಛೇರಿ ಕಾರ್ಯದರ್ಶಿಯಾಗಿ ಕೆಲವು ವರ್ಷಗಳು ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು, ಮೈಸೂರು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯುವಜನ ಚಳುವಳಿ ಮುಂತಾದ ರಂಗಗಳಲ್ಲಿ ಶ್ರಮಿಸಿದ್ದಾರೆ.


ಜಯಕುಮಾರ್ ಅವರು ಸಮಾಜಮುಖಿ ಪತ್ರಕರ್ತರಾಗಿಯೂ ಸುದೀರ್ಘಕಾಲ ಕೆಲಸ ಮಾಡಿದವರಾಗಿದ್ದಾರೆ. ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಟೈಮ್ಸ್ ಆಫ್ ಕರ್ನಾಟಕ ಪತ್ರಿಕೆಗಳಲ್ಲಿ, ಉದಯ ಟಿವಿ, ಸುವರ್ಣ ಸೇರಿದಂತೆ ವಿವಿಧ ಟಿ.ವಿ. ವಾಹಿನಿಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ವೃತ್ತಿ ಮಾಡಿದ್ದರು. ಮಾನವ ಬಂಧುತ್ವ ವೇದಿಕೆಯಲ್ಲಿ ಸಕ್ರಿಯವಾಗಿದ್ದ ಅವರು ವೈಜ್ಞಾನಿಕ ಮನೋಭಾವ, ವೈಚಾರಿಕತೆ ಬೆಳೆಸುವಲ್ಲಿ ಕ್ರಿಯಾಶೀಲರಾಗಿದ್ದರು. ಸಾರಿಗೆ ಇಲಾಖೆಯ ಅಧಿಕಾರಿ ಹುದ್ದೆಗೆ ರಾಜಿನಾಮೆ ಕೊಟ್ಟು ಸಮಾಜ ಬದಲಾವಣೆಯ ಉದ್ದೇಶದ ಜನಚಳುವಳಿಯಲ್ಲಿ ತೊಡಗಿಕೊಂಡ ಆರ್. ಜಯಕುಮಾರ್ ಅವರು ಎಂತಹ ಸಂದರ್ಭದಲ್ಲೂ ಈ ಬಗ್ಗೆ ಹೆಮ್ಮೆಯ ಭಾವನೆಯನ್ನು ಉಳಿಸಿಕೊಂಡಿದ್ದರು.

ದೀರ್ಘಕಾಲ ಜನಪರ ಹೋರಾಟಗಳಲ್ಲಿ ಭಾಗವಹಿಸಿದ್ದ ಜಯಕುಮಾರ್ ಅವರು 'ಗಾಂಧಿ ಮರೆತ ನಾಡಿನಲ್ಲಿ' ಮತ್ತು ತಮ್ಮ ಆತ್ಮ ಚರಿತ್ರೆಯ ಸ್ವರೂಪದ 'ಕಾಡು ಹಾದಿಯ ಬೆಳಕಿನ ಜಾಡಿನಲ್ಲಿ' ಎಂಬ ಎರಡು ಪುಸ್ತಕಗಳನ್ನು ಬರೆದಿದ್ದು, ಇತ್ತೀಚೆಗಷ್ಟೆ ಅವು ಪ್ರಕಟಗೊಂಡು ಸಾಕಷ್ಟು ಜನಪ್ರಿಯತೆ ಗಳಿಸಿದ್ದವು.

ಜೀವಮಾನವಿಡೀ ಪ್ರಗತಿಪರ ಆಶಯಗಳಿಗಾಗಿ ಶ್ರಮಿಸಿದ ಆರ್.ಜಯಕುಮಾರ್ ಅವರ ದೇಹವನ್ನು ಬೆಂಗಳೂರು ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಗಿದ್ದು, ಈ ಮೂಲಕ ಅವರು ತಮ್ಮ ಸಾವಿನಲ್ಲಿಯೂ ಸಾಮಾಜಿಕ ಬದ್ಧತೆ ಮೆರೆದಿದ್ದಾರೆ.

ಆರ್. ಜಯಕುಮಾರ್ ಅವರ ಈ ಅಕಾಲಿಕ ಮರಣದ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿ ಹಾಗೂ ಜನಶಕ್ತಿ ಕನ್ನಡ ವಾರ ಪತ್ರಿಕೆ, ವಿವಿಧ ಸಂಘಟನೆಗಳು ಶ್ರದ್ಧಾಂಜಲಿ ಸಲ್ಲಿಸಿವೆ.

ಮೇ 25 ರಂದು ಸಂಜೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿಯವರು ಮಾತನಾಡಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಸಿಐಟಿಯು ರಾಜ್ಯ ಸಮಿತಿಯ ಪರವಾಗಿ ಕೆ. ಮಹಾಂತೇಶ್, ಜನವಾದಿ ಮಹಿಳಾ ಸಂಘಟನೆಯ ಪರವಾಗಿ



ಕೆ.ಎಸ್.ವಿಮಲ, ಗೌರಮ್ಮ, ಸಮುದಾಯ ಸಂಘಟನೆಯ ಪರವಾಗಿ ಟಿ. ಸುರೇಂದ್ರ ರಾವ್ ಮುಂತಾದವರು ಮಾತನಾಡಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ವಿವಿಧ ಕ್ಷೇತ್ರಗಳ ಅನೇಕ ಗಣ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯದ ನಾನಾ ಜಿಲ್ಲೆಗಳಲ್ಲಿ ನಾನಾ ಜನಪರ ಸಂಘಟನೆಗಳು ಸಭೆಗಳನ್ನು ಸಂಘಟಿಸಿ ಅಗಲಿದ ಸಂಗಾತಿಗೆ ಶ್ರದ್ಧಾಂಜಲಿ ಸಲ್ಲಿಸಿವೆ. ●

ಮೂವರು ಕಾರ್ಮಿಕರ ಸಾವು......

ಪುಟ 9 ರಿಂದ

ವರ್ಗಾಯಿಸುವುದರ ವಿರುದ್ಧವೂ ಹಿಂದೆ ಸಿಐಟಿಯು ಮತ್ತು ಇತರ ಸಂಘಟನೆಗಳು ಹೋರಾಟಗಳನ್ನು ನಡೆಸಿದ್ದವು. ಅಗ ಹೋರಾಟನಿರತ ಕಾರ್ಯಕರ್ತರ ಮೇಲೆ ಗೂಂಡಾಗಿರಿ ನಡೆಸಿ, ಹಲವು ಸುಳ್ಳು ಕೇಸ್‌ಗಳನ್ನು ದಾಖಲಿಸಿ ಜೈಲಿಗೆ ಸಹ ಕಳಿಸಲಾಗಿತ್ತು. ಮುಖಂಡರುಗಳ ಮೇಲೆ ದೌರ್ಜನ್ಯಗಳನ್ನು ನಡೆಸಿ ಕಾರ್ಖಾನೆಯನ್ನು ಬಳ್ಳಾರಿಯ ಕುಡುತಿನಿ ಭಾಗದಲ್ಲಿ ಸ್ಥಾಪಿಸಲಾಗಿತ್ತು. ಇದರ ಪರಿಣಾಮವಾಗಿ ಈಗಲೂ ಈ ಭಾಗದ ಹತ್ತಾರು ಹಳ್ಳಿಗಳ ಜನರು ವಿಷಪೂರಿತ ವಾತಾವರಣದಲ್ಲಿ ಬಾಧೆ ಪಡುವಂತಾಗಿದೆ.

ಇತ್ತೀಚಿನ ಈ ಅಪಘಾತದ ವಿಷಯ ಹಾಗೂ ಒಟ್ಟು ಕಾರ್ಖಾನೆಯ ಅನ್ಯಾಯಗಳನ್ನು ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಗಂಭೀರವಾಗಿ ತೆಗೆದುಕೊಂಡು ಜನಪರ ಸಂಘಟನೆಗಳ ಹೋರಾಟವನ್ನು ಬೆಂಬಲಿಸಲು ನಿರ್ಧರಿಸಿತು. ಸಿ.ಐ.ಟಿ.ಯು. ನೇತೃತ್ವದಲ್ಲಿ ಕೆ.ಪಿ.ಆರ್.ಎಸ್., ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ದೇವದಾಸಿ ವಿಮೋಚನಾ ಮಹಿಳಾ ಸಂಘ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್, ಎಸ್.ಎಫ್.ಐ. ಸಂಘಟನೆಗಳು ಜಂಟಿ ಹೋರಾಟ ರೂಪಿಸಿ ಬೀದಿಗಿಳಿದವು.

ಪ್ರತಿಭಟನೆ – ಬಹಿರಂಗ ಸಭೆ

ಮೂವರು ಕಾರ್ಮಿಕರನ್ನು ಬಲಿ ಪಡೆದ ಅಪಘಾತಕ್ಕೆ ಕಾರಣರಾದವರ ಬಗೆಗೆ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಸಮಗ್ರ ನ್ಯಾಯಾಂಗ ತನಿಖೆ ನಡೆಯಬೇಕು. ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು ಎಂಬುದು ಸೇರಿದಂತೆ ನ್ಯಾಯಕ್ಕಾಗಿ ಒತ್ತಾಯಿಸಿ ಕೈಗಾರಿಕೆಯ ಮುಖ್ಯ ದ್ವಾರದ ಮುಂದೆ ಮೇ 20, 2024 ರಂದು ಪ್ರತಿಭಟನೆ ಮಾಡಲಾಯಿತು. ಅಪಘಾತದ ಕುರಿತು ತಾಲೂಕ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಕ್ರಿಮಿನಲ್ ಸಂಹಿತೆಯ ಸೆಕ್ಷನ್ 176(1) ಅಡಿಯಲ್ಲಿ ಸರ್ಕಾರಕ್ಕೆ ವರದಿ ನೀಡಿ ತಪ್ಪಿತಸ್ಥರ ವಿರುದ್ಧ ಸರ್ಕಾರವೇ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಲಾಯಿತು. ಪ್ರತಿಭಟಿಸಿದ ಕಾರ್ಮಿಕರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು.

ತಹಶೀಲ್ದಾರರ ಸಮ್ಮುಖದಲ್ಲಿ ಮಾತುಕತೆ

ಪ್ರತಿಭಟನೆಯ ಪರಿಣಾಮವಾಗಿ ತಹಶೀಲ್ದಾರರಾದ ಅನಿಲ್ ಕುಮಾರ್‌ರ ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಗಳು, ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಅಲ್ತಾಫ್ ಹಾಗೂ ಕಾರ್ಖಾನೆ ಸುರಕ್ಷತೆ ಸ್ವಾಸ್ಥ್ಯ ಇಲಾಖೆಯ ಸಹಾಯಕ ನಿರ್ದೇಶಕರಾದ ವರುಣ್ ರಾಮ್ ಹಾಗೂ ಜೆ.ಎಸ್.ಡಬ್ಲ್ಯೂ. ಅಧಿಕಾರಿಗಳ ಸಭೆ ಮೇ 24, 2024 ರಂದು ತಹಶೀಲ್ದಾರ ಅವರ ಕಚೇರಿಯಲ್ಲಿ ಸಭೆ ನಡೆಯಿತು. ಈ ಸಭೆಗೆ ಜೆ.ಎಸ್. ಡಬ್ಲ್ಯೂ. ಜನರಲ್ ಮ್ಯಾನೇಜರ್ ಶಶಿಕುಮಾರ್, ಸಹಾಯಕ ಜನರಲ್ ಮ್ಯಾನೇಜರ್ ಸ್ವರೂಪ್ ಹಾಗೂ ಪಿ.ಆರ್.ಓ. ಸುರೇಶ್ ಹಾಜರಿದ್ದರು. ಆದರೆ ಕಾರ್ಖಾನೆಯ ಮುಖ್ಯಸ್ಥರಾದ ಪಿ.ಕೆ. ಮುರುಗನ್ ಹಾಗೂ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಹಿರಿಯ ಉಪಾಧ್ಯಕ್ಷ ಸಂಜಯ್ ಹಂಡೂರ ಗೈರು ಹಾಜರಾಗಿದ್ದರು. ಈ ಬಗ್ಗೆ ಸಿಐಟಿಯು ಮುಖಂಡರು ಆಕ್ಷೇಪ ಎತ್ತಿದರು. ಮತ್ತು ಈ ಇಬ್ಬರನ್ನು ಅಪಘಾತದ ಮುಖ್ಯ ಹೊಣೆಗಾರರನ್ನಾಗಿ ಮಾಡಿ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಲಾಯಿತು. ಈ ಬಗೆಗೆ ಪ್ರತಿಕ್ರಿಯೆ ನೀಡಿದ ಕಾರ್ಖಾನೆ ಸುರಕ್ಷತೆ ಸ್ವಾಸ್ಥ್ಯ ಇಲಾಖೆಯ ಸಹಾಯಕ ನಿರ್ದೇಶಕರಾದ ವರುಣ್ ರಾಮ್ ಕಾನೂನು ಪ್ರಕಾರ ಚಾರ್ಜ್ ಶೀಟ್ ಸಲ್ಲಿಸಲು ಮೂರು ತಿಂಗಳ ಕಾಲಾವಕಾಶಗಳಿದ್ದು ಇದಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಕಾನೂನು ಪ್ರಕಾರ ತಪ್ಪಿತಸ್ಥರ ಹೆಸರನ್ನು ನಮೂದಿಸಿ ಜೆ.ಎಂ.ಎಫ್.ಸಿ. ಬಳ್ಳಾರಿ ಕೋರ್ಟಿಗೆ ನೀಡಲಾಗುವುದು ಎಂದು ತಿಳಿಸಿದರು. ಸಭೆಯ ತೀರ್ಮಾನಗಳನ್ನು ಆಡಳಿತ ಮಂಡಳಿಗೆ ತಿಳಿಸಿ ಮುಂದಿನ ಸಭೆಯಲ್ಲಿ ಈ ಇಬ್ಬರೂ ಸಭೆಗೆ ಹಾಜರಾಗುವಂತೆ ನೋಡಿಕೊಳ್ಳುವುದಾಗಿಯೂ ಸಭೆಯಲ್ಲಿ ಭರವಸೆ ದೊರೆಯಿತು.

ಈ ಸಂದರ್ಭದಲ್ಲಿ, ಮೂವರು ಮೃತ ಕಾರ್ಮಿಕರ ಕುಟುಂಬದವರಿಗೆ ದೊರೆಯುವ ಗುಂಪು ವಿಮೆಯ ಮೂಲದ ಪರಿಹಾರ ಏನೇನೂ ಸಾಲದೆಂದೂ, ಕಾರ್ಖಾನೆಯ ಆಡಳಿತ ಮಂಡಳಿಯೂ ಸೂಕ್ತ ಪರಿಹಾರ ನೀಡಬೇಕೆಂದೂ, ಒಟ್ಟಾರೆ ಅಪಘಾತಗಳಲ್ಲಿ ಸಂಭವಿಸುತ್ತಿರುವ ಸಾವು–ನೋವುಗಳ ಕುರಿತು ಸಮಗ್ರ ವರದಿ ನೀಡಬೇಕು, ಕೈಗಾರಿಕೆಗಳಲ್ಲಿ ಅಪಘಾತದಲ್ಲಿ ಅಂಗವಿಕಲರಾದವರು, ಜೀವ ಕಳೆದುಕೊಂಡ ಹಾಗೂ ಕಾರ್ಮಿಕ ಕುಟುಂಬಗಳಿಗೆ ಪರಿಹಾರ ನೀಡಿರುವುದರ ಬಗ್ಗೆಯೂ ಸಮಗ್ರ ಮಾಹಿತಿಯನ್ನು ನೀಡಬೇಕೆಂದು ಜೆ.ಎಸ್.ಡಬ್ಲ್ಯೂ. ಅಧಿಕಾರಿಗಳನ್ನು ಒತ್ತಾಯಿಸಲಾಯಿತು.

ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸರಿಯಾದ ಪ್ರಾಮುಖ್ಯತೆಯನ್ನು ನೀಡಲು, ಕಾನೂನು ಕ್ರಮಗಳ ಜಾರಿ ಮತ್ತು ಅವುಗಳ ಅನುಷ್ಠಾನಗಳ ಕುರಿತು ಕಾರ್ಮಿಕ ಇಲಾಖೆ ಮತ್ತು ಕೈಗಾರಿಕೆ ಸುರಕ್ಷ ಇಲಾಖೆ ಅಧಿಕಾರಿಗಳು ಮುಂದೆ ಗಂಭೀರವಾಗಿ ಪರಿಗಣಿಸುವರು ಎಂದೂ ಸಭೆಯಲ್ಲಿ ಚಳುವಳಿಗಾರರಿಗೆ ಭರವಸೆ ನೀಡಲಾಯಿತು. ಕಾಯಿದೆಯಡಿಯಲ್ಲಿ ಕಾರ್ಮಿಕ ಪರಿಹಾರ ಸೌಲಭ್ಯ ಕುಟುಂಬಗಳಿಗೆ ನೀಡುವುದಾಗಿಯೂ ತಿಳಿಸಲಾಯಿತು.

ಅದೇ ರೀತಿಯಲ್ಲಿ, ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಉದ್ಯೋಗಗಳನ್ನು ಸದರಿ ಕಾರ್ಖಾನೆಯಲ್ಲಿ ನೀಡದೆ, ಅಸೋಸಿಯೇಟ್ ಕಂಪನಿಗಳಲ್ಲಿ ನೀಡುತ್ತಿರುವುದನ್ನು ಪ್ರಶ್ನಿಸಲಾಯಿತು. ಎಂ.ಓ.ಯು. ಪ್ರಕಾರ ಇದುವರೆಗೆ ಎಷ್ಟು ಜನ ಭೂ ಸಂತ್ರಸ್ತ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ ಹಾಗೂ ಇನ್ನು ಎಷ್ಟು ಜನಕ್ಕೆ ನೀಡಬೇಕಾಗಿದೆ ಎನ್ನುವುದನ್ನು ತಿಳಿಸಲು ಕೇಳಲಾಗಿ, ಇದಕ್ಕೆ ಕಾರ್ಖಾನೆ ಆಡಳಿತ ಮಂಡಳಿ ಪ್ರತಿನಿಧಿಗಳು ಸಮಯಾವಕಾಶವನ್ನು ಕೇಳಿದರು. ಗುತ್ತಿಗೆ ಕಾರ್ಮಿಕರ ಸೌಲಭ್ಯಗಳು ಜಾರಿ ಆಗುತ್ತಿಲ್ಲ, ವೇತನದಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಗುತ್ತಿಗೆದಾರರು ಭವಿಷ್ಯ ನಿಧಿ ವಂತಿಗೆಯನ್ನು ಸಂದಾಯ ಮಾಡುವಲ್ಲಿ ಕಾರ್ಮಿಕರಿಗೆ ವಂಚಿಸಲಾಗುತ್ತಿದೆ. ಪ್ರತಿ ತಿಂಗಳು ಅವರ ಕೆಲಸದ ದಿನಗಳಿಗೆ ಅನುಗುಣವಾಗಿ ವಂತಿಗೆ ಸಂದಾಯ ಆಗುತ್ತಿಲ್ಲ. ಕೇವಲ 8–10 ದಿನಗಳ ಕೆಲಸದ ಹಣವನ್ನು ಮಾತ್ರ ಸಂದಾಯವಾಗುತ್ತಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ನ್ಯಾಯಬದ್ಧವಾದ ಕಾರ್ಮಿಕರ ಭವಿಷ್ಯ ನಿಧಿ ಹಣ ಮತ್ತು ಪಿಂಚಣಿ ಹಣ ಪಡೆದುಕೊಳ್ಳಲಾಗದೆ ಕಾರ್ಮಿಕರು ವಂಚಿತರಾಗಲಿದ್ದಾರೆ. ಮಹಿಳಾ ಕಾರ್ಮಿಕರಿಗೆ ವೇತನ ತಾರತಮ್ಯ ಮಾಡಲಾಗುತ್ತಿದೆ. ಗುತ್ತಿಗೆ ಕಾರ್ಮಿಕರಿಗೆ ನೀಡುತ್ತಿರುವ ಇನ್ಸೆಂಟಿವನ್ನು ನಿಲ್ಲಿಸಲಾಗಿದೆ ಎಂದು ಸಭೆಯಲ್ಲಿ ನಾನಾ ಅನ್ಯಾಯಗಳ ಕುರಿತು ವಿವರಿಸಿದ ಚಳುವಳಿಯ ನಾಯಕರು ಕಾರ್ಮಿಕ ಇಲಾಖೆ ಇವುಗಳ ಬಗ್ಗೆ ಪರಿಶೀಲಿಸಬೇಕೆಂದು ಒತ್ತಾಯಿಸಿದರು. ಸಂಡೂರು ವಲಯದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗಿದ್ದು ಟ್ರಾಮಾ ಶಾಖೆಗಳನ್ನು ತರಬೇತಿ ನೀಡಿದ ಸಂಚಾರಿ ಆಂಬುಲೆನ್ಸ್‌ಗಳನ್ನು ಪ್ರಾರಂಭಿಸುವುದು, ತೋರಣಗಲ್ಲಿನಲ್ಲಿ ಇಂದಿರಾ ಕ್ಯಾಂಟೀನ್ ಸ್ಥಾಪಿಸುವುದು, ಸ್ಥಳೀಯರಿಗೆ ಸಂಜೀವಿನಿ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆಯನ್ನು ನೀಡುವುದು, ಸರೋಜಿನಿ ಮಹಿಷಿ ವರದಿಯ ಪ್ರಕಾರ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಮುಂತಾದ ಹಲವು ಬೇಡಿಕೆಗಳಿಗಾಗಿಯೂ ಚಳುವಳಿಯ ನಾಯಕರು ಒತ್ತಾಯಿಸಿದರು. ಈ ಬಗ್ಗೆ ಚರ್ಚೆಯೂ ನಡೆಯಿತು.

ಸಭೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ.ಸತ್ಯಬಾಬು, ಜಿಲ್ಲಾ ಪ್ರದಾನ ಕಾರ್ಯದರ್ಶಿ ಜೆ.ಎಂ. ಚನ್ನಬಸಯ್ಯ, ಸಹ ಕಾರ್ಯದರ್ಶಿ ಎಂ. ತಿಪ್ಪೇಸ್ವಾಮಿ ಸಿಐಟಿಯು ತಾಲೂಕ ಸಂಚಾಲಕರಾದ ಮಲ್ಲಿಕಾರ್ಜುನ ಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ವಿ.ಎಸ್ ಶಿವಶಂಕರ್, ದೇವದಾಸಿ ಮಹಿಳೆಯರ ವಿಮೋಚನ ಸಂಘದ ಜಿಲ್ಲಾ ಕಾರ್ಯದರ್ಶಿ ಎ. ಸ್ವಾಮಿ, ದುರ್ಗಮ್ಮ, ಡಿ.ವೈ.ಎಫ್.ಐ.ನ ಜಿಲ್ಲಾ ಉಪಾಧ್ಯಕ್ಷರಾ ಕಾಲೂಭ, ಅಕ್ಷರ ದಾಸೋಹ ಬಿಸಿಯೂಟ ನೌಕರ ಸಂಘದ ದ್ರಾಕ್ಷಿಯಣಿ, ಹಮಾಲಿ ಸಂಘದ ಸೋಮಪ್ಪ, ದಲಿತ ಹಕ್ಕುಗಳ ಸಮಿತಿಯ ಧನಂಜಯ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಇವರಲ್ಲದೇ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಗಾಳಿ ಬಸವರಾಜ್, ಪಂಪನಗೌಡ, ಸಂಡೂರು ತಾಲೂಕ ಅಧ್ಯಕ್ಷರು ಕುರೆಕುಪ್ಪ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಜಂಟಿ ಕಾರ್ಯದರ್ಶಿ ಜೆ. ಚಂದ್ರಕುಮಾರಿ, ಡಿ.ವೈ.ಎಫ್.ಐ.ನ ಜಿಲ್ಲಾ ಅಧ್ಯಕ್ಷರಾದ ಯು.ಯರ್ರಿ ಸ್ವಾಮಿ, ಅಕ್ಷರ ದಾಸೋಹ ನೌಕರ ಸಂಘದ ರೇಖಾ, ಓಂಕಾರಿ, ನಾಗರತ್ನ, ಹಮಾಲಿ ಸಂಘದ ರಾಜ್ಯ ಉಪಾಧ್ಯಕ್ಷ ಎಚ್. ತಿಪ್ಪಯ್ಯ, ಓಬಳೇಶಪ್ಪ, ಸುರೇಶ, ಈರಣ್ಣ ಬೆಲ್ಲದ್, ಮುಂತಾದವರು ಸಹ ಈ ವಿವಿಧ ಹೋರಾಟಗಳಲ್ಲಿ ನೇತೃತ್ವ ವಹಿಸಿದ್ದರು. ●

NEW No. MAG(3)/NPP/205/2021-2022
JANASHAKTHI KANNADA VARA PATRIKE May 27-June 2, 2024 Price: Rs. 10/- Date of Publication: 24 May 2024 RNI No. KARKAN /2006/17926 Posted on 29-05-2024
Posted at BG PSO, BG - 560026 **Posted at Periodical Rate -** Rs. 2

ಬೃಹತ್ ಕಲ್ಲಿದ್ದಲು ಆಮದು ಹಗರಣ: 'ಮೋದಿ ಸರ್ಕಾರ, ಅದಾನಿ ಸಮೂಹ' ದೊಂದಿಗಿನ ಶಾಮೀಲು ಬಹಿರಂಗ



ಮೋದಿ ಸರ್ಕಾರವು ಅದಾನಿ ಸಮೂಹದೊಂದಿಗೆ ನೇರವಾಗಿ ಹೊಂದಿರುವ ಶಾಮೀಲು ಇದೀಗ ಕಲ್ಲಿದ್ದಲು ಆಮದು ಹಗರಣದ ಮೂಲಕ ಬಹಿರಂಗ ಗೊಂಡಿದೆ. ಈ ಕಲ್ಲಿದ್ದಲು ಆಮದಿನಲ್ಲಿನ ಬೃಹತ್ ವಂಚನೆಯಿಂದ, ದೇಶದ ಜನತೆ ಬೆಚ್ಚಿಬಿದ್ದಿದ್ದಾರೆ.

ವಾಸ್ತವವಾಗಿ, ಎಲೆಕ್ಟ್ರಿಸಿಟಿ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾ (EEFI) (ಇದು, ನಮ್ಮ ದೇಶದ ವಿದ್ಯುತ್ ಕಾರ್ಮಿಕರು ಮತ್ತು ಉದ್ಯೋಗಿಗಳ ಒಕ್ಕೂಟಗಳ ಅತಿದೊಡ್ಡ ಸಂಘಟನೆ.) ತನ್ನ ನೇತೃತ್ವದಲ್ಲಿ, ಕಳೆದ ಒಂದು ವರ್ಷದಿಂದ ಮೋದಿ ಆಡಳಿತದ ಹೊಸ ಕಲ್ಲಿದ್ದಲು ಆಮದು ನೀತಿ ಮತ್ತು ವಿದ್ಯುತ್ ಕ್ಷೇತ್ರದ ಸುಧಾರಣೆಗಳ ವಿರುದ್ಧ ತೀವ್ರವಾದ ಅಭಿಯಾನ ನಡೆಸುತ್ತಿದೆ. ಈ ಅಭಿಯಾನವು ಏಪ್ರಿಲ್ 2023 ರಲ್ಲಿ ಪ್ರಾರಂಭವಾಗಿ, ನವೆಂಬರ್–ಡಿಸೆಂಬರ್ 2023 ರಲ್ಲಿ ಮತ್ತಷ್ಟು ತೀವ್ರಗೊಂಡಿತ್ತು. ಈ ನಿಟ್ಟಿನಲ್ಲಿ ವಿದ್ಯುತ್ ನೌಕರರು, EEFI ಜಂಟಿ ವೇದಿಕೆಯ ಅಡಿಯಲ್ಲಿ ಪ್ರಬಲವಾದ ಪ್ರಚಾರ ಪ್ರಕ್ಷೋಭೆಗಳ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವಲ್ಲಿ ಗಮನ ಸೆಳೆದಿದ್ದಾರೆ. ಈ ವಿಷಯದ ಬಗ್ಗೆ ಎದ್ದ ಧ್ವನಿ ಇದೀಗ ಅನೇಕ ವಿರೋಧ ಪಕ್ಷಗಳು ಕೂಡ ಧ್ವನಿ ಎತ್ತಲು ಅನುವು ಮಾಡಿದೆ. ಆದ್ದರಿಂದ, ಈ ದೊಡ್ಡ ವಂಚನೆಯ ಕಲ್ಲಿದ್ದಲು ಆಮದು ನೀತಿಗಳ ರೂಪುರೇಷೆಗಳ ಯೋಜನೆ ಹಾಗೂ ಮೋದಿ ಸರ್ಕಾರದ ನೇರ ಶಾಮೀಲುತನದ ಬಗ್ಗೆ ಆಳವಾಗಿ ಪರಿಶೀಲಿಸೋಣ.

ಈ ಹಗರಣವು, ಮೊದಲೇ ತಿಳಿಸಿದ ಹಾಗೆ, ಮೋದಿ ಆಡಳಿತಕ್ಕೆ ಚೆನ್ನಾಗಿ ಗೊತ್ತಿದೆ. ಉದ್ದೇಶಪೂರ್ವಕ ವಾಗಿಯೇ ಏಪ್ರಿಲ್ 2022 ರಲ್ಲಿ ಕಲ್ಲಿದ್ದಲು ಪೂರೈಕೆಯ ಅಲಭ್ಯತೆಯನ್ನು ಸೃಷ್ಟಿ ಮಾಡಲಾಯಿತು. ಇದರಿಂದ ಭಾರತವು ತೀವ್ರವಾದ ವಿದ್ಯುತ್ ಕೊರತೆಯತ್ತ ತಳ್ಳಲ್ಪಟ್ಟಿತು ಮತ್ತು ಜುಲೈ 2022 ರ ಮೊದಲು ಶೇಕಡಾ 10 ರಷ್ಟು ಮಿಶ್ರಣಕ್ಕಾಗಿ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವಂತೆ ಮೋದಿ ಸರ್ಕಾರದ ವಿದ್ಯುತ್ ಸಚಿವಾಲಯವು GENCO ಕಂಪನಿಗಳಿಗೆ ನಿರ್ದೇಶಿಸಿತು. ಏತನ್ಮಧ್ಯೆ, ಅದೇ ಅವಧಿಯಲ್ಲಿ, ದೇಶದಲ್ಲಿ ಕಲ್ಲಿದ್ದಲು ಉತ್ಪಾದನೆ ಮತ್ತು ಪೂರೈಕೆ ಹೇರಳವಾಗಿದೆ ಎಂದು ಕೇಂದ್ರ ಸರ್ಕಾರದ ಕಲ್ಲಿದ್ದಲು ಸಚಿವಾಲಯವು ರಾಜ್ಯಸಭೆಯಲ್ಲಿ ಕೊಚ್ಚಿಕೊಂಡಿತ್ತು ಕೂಡ. ಈ ಅವಧಿಯಲ್ಲಿ, ಆಮದು ಮಾಡಿಕೊಂಡ ಇಂಧನದ ವೆಚ್ಚವು ಪ್ರತಿ ಯೂನಿಟ್ ಗೆ ರೂ 7–8 ಕ್ಕೆ ಏರಿಕೆಯಾಗಿತ್ತು. ಇದೇ ಸಂದರ್ಭದಲ್ಲಿ, ದೇಶೀಯ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ನ, ಪ್ರತಿ ಯುನಿಟ್ ವೆಚ್ಚಕ್ಕೆ ಹೋಲಿಸಿ ನೋಡಿದಾಗ, ಸಿಐಎಲ್ ವೆಚ್ಚ ಪ್ರತಿ ಯೂನಿಟ್ ಗೆ ರೂ.2 ಇತ್ತು ಎಂಬುದನ್ನು ಗಮನಿಸಬೇಕು.

ಮೋದಿ ಆಡಳಿತದಲ್ಲಿ ಕಳೆದ 10 ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ವಿದ್ಯುತ್ ಪೂರೈಕೆಯ ಸರಾಸರಿ ವೆಚ್ಚವು ವೇಗವಾಗಿ ಹೆಚ್ಚಾಗಿರುವುದು ಇದರಿಂದ ತಿಳಿಯುತ್ತದೆ. ಇದು ಮುಂದಿನ ದಿನಗಳಲ್ಲಿ, ಮತ್ತಷ್ಟು ಹೆಚ್ಚಾಗುತ್ತದೆ ಎಂಬುದರಲ್ಲಿ ಯಾವುದೇ ಸಂಶಯಬೇಡ. ಪೂರೈಕೆಯ ಸರಾಸರಿ ವೆಚ್ಚ (ACS) ಮತ್ತು ಸರಾಸರಿ ಆದಾಯದ ಅಗತ್ಯತೆ (ARR), ಅಂದರೆ, ACS-ARR ಅಂತರ (ಆರ್ಥಿಕ ಸುಸ್ಥಿರತೆ ಮತ್ತು ಅದರ ಆರೋಗ್ಯವನ್ನು ಅಳೆಯುವ ನಿರ್ಣಾಯಕ ನಿಯತಾಂಕ) ನಡುವಿನ ಅಂತರವು ಹೆಚ್ಚಾಗುತ್ತಿದೆ ಎಂಬುದು ಗಮನಿಸಬಹುದಾಗಿದೆ. ವಾರ್ಷಿಕ ಆದಾಯದ ಅಗತ್ಯತೆ (ARR) ಹೇಳಿಕೆಗಳ ಆಧಾರದ ಮೇಲೆ, ವಿದ್ಯುತ್ ಖರೀದಿ ವೆಚ್ಚವು ARR ನ ಸುಮಾರು ಶೇ 67–78 ರಷ್ಟಿದೆ.



ಪ್ರಸ್ತುತ, ಭಾರತದಲ್ಲಿ, ಉತ್ಪಾದಕ ಕಂಪನಿಗಳಿಗೆ, ಬೇಸಿಗೆಯಲ್ಲಿ ಗರಿಷ್ಠ ವಿದ್ಯುತ್ ಬೇಡಿಕೆಯನ್ನು ಪೂರೈಸಲು ದೇಶೀಯ ಪೂರೈಕೆಯೊಂದಿಗೆ 30 ಪ್ರತಿಶತದಷ್ಟು ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಬಳಸಲು ಸಲಹೆ ನೀಡಲಾಗುತ್ತದೆ. ಇದು ಆಮದು ಮಾಡಿಕೊಳ್ಳುವ ಕಲ್ಲಿದ್ದಲಿನ ಸುಮಾರು ಮೂರು ಪಟ್ಟು ಹೆಚ್ಚಿನ ವೆಚ್ಚದ ಹೊರೆಯನ್ನು ಕೇಂದ್ರವು ತನ್ನ ಅನುಕೂಲಕರವಾಗಿ ಹೇರಿಸುತ್ತಿದೆ ಎಂದು ವಾದಿಸಿ ಅನೇಕ ರಾಜ್ಯ ಸರ್ಕಾರಗಳು ಪ್ರತಿಭಟಿಸಿವೆ. ಇದರಲ್ಲಿ, ಅತ್ಯಂತ ಆಘಾತಕಾರಿಯಾದ ಅಂಶವೆಂದರೆ, ಹೊಸದಾಗಿ ನಿರ್ಮಿಸಲಾದ ಎಲ್ಲಾ ವಿದ್ಯುತ್ ಸ್ಥಾವರಗಳು ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಬಳಸಲು ಕಡ್ಡಾಯಗೊಳಿಸಲಾಗಿದೆ.

ಭಾರತವು 352 ಶತಕೋಟಿ ಟನ್ ಗಳಷ್ಟು ಕಲ್ಲಿದ್ದಲು ನಿಕ್ಷೇಪವನ್ನು ಹೊಂದಿದ್ದು, ಇದು ವಿಶ್ವದಲ್ಲೇ ನಾಲ್ಕನೇ ಅತಿ ದೊಡ್ಡ ಕಲ್ಲಿದ್ದಲು ನಿಕ್ಷೇಪ ಎಂಬುದನ್ನು ಗಮನಿಸಬೇಕು. ಕೇಂದ್ರ ಸರ್ಕಾರವು 2016 ಮತ್ತು 2020 ರ ನಡುವೆ ವರ್ಧಿತ ಕಲ್ಲಿದ್ದಲು ಉತ್ಪಾದನಾ ಯೋಜನೆಯನ್ನು ಗಂಭೀರವಾಗಿ ಜಾರಿಗೆ ತಂದಿದ್ದರೆ, ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಭಾರತವು ಇಂದು ಕಲ್ಲಿದ್ದಲು ಕೊರತೆಯಿಂದ ಬಳಲುತ್ತಿರಲಿಲ್ಲ. 2017 ಮತ್ತು 2020 ರ ನಡುವೆ ಸಿಐಎಲ್ ಉತ್ಪಾದನೆ ಬಹುತೇಕ ಸ್ಥಗಿತಗೊಳಿಸಲಾಗಿತ್ತು

ಆಗಲೂ, ವಿದ್ಯುತ್ ಸಚಿವಾಲಯವು ಅಕ್ಟೋಬರ್ 2023 ರಿಂದ ಮಾರ್ಚ್ 2024 ರ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಗೆ 7 MT ಕಲ್ಲಿದ್ದಲಿನ ಕೊರತೆಯಿರಬಹುದು ಎಂದು ಹೇಳುತ್ತಿರುವಾಗ, ಅದು ಸುಮಾರು 20 MT ಆಮದು ಮಾಡಿಕೊಳ್ಳಲು ನಿರ್ದೇಶಿಸಿತು. ಆಸ್ಟ್ರೇಲಿಯಾದಿಂದ ಉಗಿ ಕಲ್ಲಿದ್ದಲು ಆಮದುಗಳ ಪಾಲು 2020 ರವರೆಗೆ ಅತ್ಯಲ್ಪವಾಗಿತ್ತು, ಆದರೆ ಇದು FY22 ರಲ್ಲಿ ಶೇಕಡಾ 13 ಕ್ಕೆ ಏರಿತು (ಆಸ್ಟ್ರೇಲಿಯದ ಕ್ವೀನ್ಸ್‌ಲ್ಯಾಂಡ್ ನ ಅದಾನಿ ಕಾರ್ಮೈಕಲ್ ಕಲ್ಲಿದ್ದಲು ಗಣಿ ಡಿಸೆಂಬರ್ 2021 ರಲ್ಲಿ ಕಲ್ಲಿದ್ದಲಿನ ಮೊದಲ ಸಾಗಣೆಯನ್ನು ಉತ್ಪಾದಿಸಿತು).

ಅಕ್ಟೋಬರ್ ನಲ್ಲಿ ಫೈನಾನ್ಸಿಯಲ್ ಟೈಮ್ಸ್ ಪ್ರಕಟಿಸಿದ ವರದಿಯ ಪ್ರಕಾರ, ಜನವರಿ 2019 ರಿಂದ ಆಗಸ್ಟ್ 2021 ರವರೆಗಿನ 32 ತಿಂಗಳ ಅವಧಿಯಲ್ಲಿ ಇಂಡೋನೇಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಂಡ 30 ಹಡಗು ಲೋಡ್ ಕಲ್ಲಿದ್ದಲುಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಅದಾನಿ ಗ್ರೂಪ್ ಬಹಿರಂಗಪಡಿಸಿದೆ. ಈ ಅವಧಿಯಲ್ಲಿ, 3.1 ಮಿಲಿಯನ್ ಟನ್ (30,10,000 ಟನ್) ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗಿದೆ. ಈ ಹಡಗುಗಳ ಮೂಲಕ ಭಾರತಕ್ಕೆ ಇಂಡೋನೇಷ್ಯಾದಲ್ಲಿರುವ ಅದಾನಿಯವರ ಸ್ವಂತ ಗಣಿಯಿಂದ, ಒಟ್ಟು 139 ಮಿಲಿಯನ್ ಡಾಲರ್ ಮೌಲ್ಯದ ಕಲ್ಲಿದ್ದಲನ್ನು ಒದಗಿಸಿದೆ. ಆದಾಗ್ಯೂ, ಈ ಕಲ್ಲಿದ್ದಲು ಭಾರತದ ಮುಂದ್ರಾ ಬಂದರನ್ನು ತಲುಪುವ ಹೊತ್ತಿಗೆ ಅದರ ಬೆಲೆ 215 ಮಿಲಿಯನ್ ಡಾಲರ್ ಗೆ ಏರಿತ್ತು. ಟ್ರಾಫಿಕ್ ಶುಲ್ಕ ಸೇರಿದಂತೆ 3 ಮಿಲಿಯನ್ ಡಾಲರ್ ವೆಚ್ಚವನ್ನು ಲೆಕ್ಕಹಾಕಿದ ನಂತರವೂ, ಅದಾನಿ ಸಮೂಹವು ಈ ವಹಿವಾಟಿನ ಮೂಲಕ 73 ಮಿಲಿಯನ್ ಡಾಲರ್ ಅನ್ನು ಹೆಚ್ಚಾಗಿ ಸಂಗ್ರಹಿಸಲಾಗಿದೆ.

ಇಂಡೋನೇಷ್ಯಾದ ಅದಾನಿಯವರ ಸ್ವಂತ ಗಣಿಯಿಂದ ಕಲ್ಲಿದ್ದಲನ್ನು ಪಡೆಯಲಾಗಿದ್ದರೂ ಸಹ, ಭಾರತೀಯ ಕಸ್ಟಮ್ಸ್ ಗೆ ಸಲ್ಲಿಸಿದ ದಾಖಲೆಗಳಲ್ಲಿ ತೋರಿಸಿಲ್ಲ. ಇದೇ ಹಗರಣದ ತಿರುಳಿನ ಮೂಲ ಕಾರಣವಾಗಿದೆ. ತೈಪೆಯ ಹೈ ಲಿಂಗೋಸ್, ದುಬೈನ ಟಾರಸ್ ಕಮಾಡಿಟೀಸ್ ಜನರಲ್ ಟ್ರೇಡಿಂಗ್ ಮತ್ತು ಸಿಂಗಾಪುರದ ಪ್ಯಾನ್ ಏಷ್ಯನ್ ಟ್ರೇಡ್ ಲಿಂಕ್ಸ್ ಎಂಬ ಮೂರು ಕಂಪನಿಗಳಿಂದ ಅದಾನಿ ಕಸ್ಟಮ್ ಗಳನ್ನು ಒದಗಿಸಿದ್ದಾರೆ. ಇಂಡೋನೇಷ್ಯಾ ದಿಂದ ಈ ಮಧ್ಯವರ್ತಿ ಕಂಪನಿಗಳ ಮೂಲಕ ಸಾಗಿಸಲಾದ ಕಲ್ಲಿದ್ದಲನ್ನು ಭಾರತಕ್ಕೆ ನಿಜವಾಗಿಯೂ ತಲುಪಿಸಲಾಗಿದೆ ಎಂದು ಸೂಚಿಸುವ ದಸ್ತಾವೇಜನ್ನು ತಯಾರಿಸುವುದರ ಸುತ್ತ ಈ ಹಗರಣದ ಯೋಜನೆಯ ರೂಪಾಂತರ ಸುತ್ತಿಕೊಂಡಿದೆ.

ವರ್ಗಾವಣೆ ಬೆಲೆ ಎಂದು ಕರೆಯಲ್ಪಡುವ ಈ ಯೋಜನಾ ತಂತ್ರವು, ಮಧ್ಯಂತರ ವಹಿಸುವ ಕಂಪನಿಗಳ ವಹಿವಾಟಿನ ಸಮಯದಲ್ಲಿ ಬೆಲೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಪರಿಣಾಮವಾಗಿ, ಮಧ್ಯವರ್ತಿ ಸಂಸ್ಥೆಗಳು ಗಳಿಸಿದ ಲಾಭದ ಮೇಲೆ ಯಾವುದೇ ತೆರಿಗೆ ವಿಧಿಸಲಾಗುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮಧ್ಯವರ್ತಿ ಕಂಪನಿಗಳು ಯಾವುದೇ ಅಸಾಧಾರಣ ಪ್ರಯತ್ನಗಳ ಹೆಚ್ಚುವರಿ ಕಾರ್ಯವನ್ನು ಮಾಡಿಲ್ಲ. ಹೇಗೆಂದರೆ,

ಪುಟ 14 ಕ್ಕೆ

ಜನವರಿ 2019 ರಿಂದ ಆಗಸ್ಟ್ 2021 ರವರೆಗಿನ 32 ತಿಂಗಳ ಅವಧಿಯಲ್ಲಿ ಇಂಡೋನೇಷ್ಯಾದಿಂದ, ಇಂಡೋನೇಷ್ಯಾದಲ್ಲಿರುವ ಅದಾನಿಯವರ ಸ್ವಂತ ಗಣಿಯಿಂದ 30 ಹಡಗುಗಳ ಮೂಲಕ, ಒಟ್ಟು 139 ಮಿಲಿಯನ್ ಡಾಲರ್ ಮೌಲ್ಯದ 3.1 ಮಿಲಿಯನ್ ಟನ್ ಕಲ್ಲಿದ್ದಲನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಾಗಿದೆ. ಭಾರತದ ಮುಂದ್ರಾ ಬಂದರನ್ನು ತಲುಪುವ ಹೊತ್ತಿಗೆ ಅದರ ಬೆಲೆ 215 ಮಿಲಿಯನ್ ಡಾಲರ್ ಗೆ ಏರಿತ್ತು. ಟ್ರಾಫಿಕ್ ಶುಲ್ಕ ಸೇರಿದಂತೆ 3 ಮಿಲಿಯನ್ ಡಾಲರ್ ವೆಚ್ಚವನ್ನು ಲೆಕ್ಕಹಾಕಿದ ನಂತರವೂ, ಅದಾನಿ ಸಮೂಹವು ಈ ವಹಿವಾಟಿನ ಮೂಲಕ 73 ಮಿಲಿಯನ್ ಡಾಲರ್ ಅನ್ನು ಹೆಚ್ಚಾಗಿ ಸಂಗ್ರಹಿಸಿದೆ.

ಕಲ್ಲಿದ್ದಲಿನ ಮಿಶ್ರಣವನ್ನು ಹೆಚ್ಚಿಸಲು ವಿದ್ಯುತ್ ಉತ್ಪಾದಕರು ಕಡ್ಡಾಯವಾಗಿ ಸರ್ಕಾರದ ನಿರ್ದೇಶನಗಳನ್ನು ಅನುಸರಿಸಬೇಕು. ಇದರ ಪರಿಣಾಮವಾಗಿ, ಈ ಆರ್ಥಿಕ ವರ್ಷದಲ್ಲಿ ಹಂಚಿಕೆ ಮಾಡುವ (DISCOMs) ಕಂಪನಿಗಳು ಖರೀದಿಯಲ್ಲಿ ಹೆಚ್ಚುವರಿ 42,000 ಕೋಟಿ ರೂಪಾಯಿಗಳ ವಿದ್ಯುತ್ ಬಿಲ್ ದಾಖಲಿಸಿವೆ. ಇದರಿಂದ ಅದಾನಿ ಸಮೂಹವು ಸುಮಾರು 30,000–35,000 ಕೋಟಿಗಳಷ್ಟು ಲಾಭವನ್ನು ಗಳಿಸಲು ಸಾಧ್ಯವಾಗಿದೆ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**